ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 27 ಗುರುವಾರ 2025

₹4

ಸಂಪುಟ: 45 | ಸಂಚಿಕೆ: 337 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*



ಮೈಸೂರು ಮಿತ್ರ

ದೇಶದ ಹೆಜ್ಜೆ ಗುರುತು ನಮ್ಮ ರಾಷ್ಟ್ರೀಯತೆ

ವಿದ್ಯಾರ್ಥಿನಿಯರ ಸಮ್ಮೇಳನದಲ್ಲಿ ಸಾಧನತಂತ್ರಿ ಅಭಿಪ್ರಾಯ



ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಮೈಸೂರು ವಿಭಾಗದಿಂದ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಆಯೋಜಿಸಿದ್ದ ಬಾಲಿಕಾ ಛಾತ್ರ ಪರ್ವಂ ವಿಭಾಗ ವಿದ್ಯಾರ್ಥಿನಿಯರ ಸಮ್ಮೇಳನವನ್ನು ಸಾಧನತಂತ್ರಿ ಉದ್ಘಾಟಿಸಿದರು.

ಮೈಸೂರು, ಮಾ.26(ಜಿಎ)–ನಮ್ಮ ದೇಶದ ಹೆಜ್ಜೆ ಗುರುತು ನಮ್ಮ ರಾಷ್ಟ್ರೀಯತೆ ಆಗಿದೆ. ಈ ನಿಟ್ಟಿನಲ್ಲಿ ದೇಶದ ಯುವ ಜನರು ಜಾಗೃತರಾಗಬೇಕು ಎಂದು ಸಾಮಾಜಿಕ ಕಾರ್ಯಕರ್ತೆ ಸಾಧನತಂತ್ರಿ ಅಭಿಪ್ರಾಯ ವ್ಯಕ್ತಪಡಿಸಿದರು.

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಮೈಸೂರು ವಿಭಾಗದ ವತಿಯಿಂದ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಆಯೋಜಿಸಿದ್ದ ಬಾಲಿಕಾ ಛಾತ್ರ ಪರ್ವಂ ವಿಭಾಗ ವಿದ್ಯಾರ್ಥಿನಿಯರ ಸಮ್ಮೇಳನದಲ್ಲಿ ಭಾಗವಹಿಸಿ ಮಾತನಾಡಿದರು.

ಭಾರತೀಯರಿಗೆ ಗುರುತು ಅಂತ ಹೇಳಿದರೆ, ಅದು ರಾಷ್ಟ್ರೀಯತೆ, ಭಾರತದ ಭವ್ಯ ಪರಂಪರೆ, ಭಾರತ ಬೆಳೆದು ಬಂದ ಹಾದಿ, ಭಾರತದ ಸಂಪೂರ್ಣ ಇತಿಹಾಸವಾಗಿದೆ. ಹಿಂದೂರಾಷ್ಟ್ರ ಸುಮ್ಮನೆ ಲಭಿಸಿಲ್ಲ. ಅದರ ಹಿಂದೆ ಸಾಕಷ್ಟು ಮಂದಿಯ ಪರಿಶ್ರಮವಿದೆ. ಅಂತಹ ಇತಿಹಾಸವನ್ನು ಅರಿತು ಆ ದಾರಿಯಲ್ಲಿ ನಾವೆಲ್ಲರೂ ಸಾಗುವ ಮೂಲಕ ದೇಶಾಭಿಮಾನ ಹಾಗೂ ರಾಷ್ಟ್ರಾಭಿಮಾನ ಬೆಳೆಸಿಕೊಳ್ಳಬೇಕು ಎಂದರು.

ಹಾಸನದ ಎಂ.ಎಸ್.ರಾಮಯ್ಯ ಅವರ ನವಕಿಸ್ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಪ್ರೊ.ರಾಜಲಕ್ಷ್ಮಿ ರಾಷ್ಟ್ರದ ಪುನರ್ ನಿರ್ಮಾಣದಲ್ಲಿ ವಿದ್ಯಾರ್ಥಿನಿಯರ ಪಾತ್ರ ಮತ್ತು ಮಹಿಳಾ ಸಬಲೀಕರಣ ಎಂಬ ವಿಷಯದ ಕುರಿತು ಮಾತನಾಡಿದರು.

ಖೋ–ಖೋ ಅಂತಾರಾಷ್ಟ್ರೀಯ ಕ್ರೀಡಾಪಟು ಬಿ.ಚೈತ್ರ ಅವರಿಗೆ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ವತಿಯಿಂದ ಸನ್ಮಾನಿಸಲಾಯಿತು. ಕಾರ್ಯಕ್ರಮದ ನಂತರ ನಗರದ ಪ್ರಮುಖ ರಸ್ತೆಗಳಾದ ರಾಮಸ್ವಾಮಿ ವೃತ್ತ, ಚಾಮರಾಜ ಜೋಡಿ ರಸ್ತೆಯಲ್ಲಿ ಶೋಭಯಾತ್ರೆಯನ್ನು ಯಶಸ್ವಿಯಾಗಿ ನಡೆಸಲಾಯಿತು. ಪ್ರಾಂತ ವಿದ್ಯಾರ್ಥಿನಿ ಪ್ರಮುಖರಾದ ಸುಧಾ ಶಣೈ, ವಿಭಾಗ ವಿದ್ಯಾರ್ಥಿನಿ ಪ್ರಮುಖರಾದ ವಸಂತ, ಪ್ರಾಂತ ಕಾರ್ಯಸಮಿತಿ ಸದಸ್ಯೆಯಾದ ಡಿ.ಎ.ದೀಪಿಕಾ, ಪ್ರಾಂತ ಕಾರ್ಯಕಾರಣಿ ಸದಸ್ಯರಾದ ಇಂಚರ ಉಪಸ್ಥಿತರಿದ್ದರು.

ನಾಳೆ ಮೈಸೂರಲ್ಲಿ ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯ ಪದವೀಧರರ ದಿನಾಚರಣೆ

ಮೈಸೂರು,ಮಾ.26(ಜಿಎ)–ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಪದವೀಧರರ ದಿನಾಚರಣೆಯನ್ನು ಮಾ.28 ರಂದು ಸಂಜೆ 4ಗಂಟೆಗೆ ನಗರದ ಜೆಎಸ್‌ಎಸ್ ವೈದ್ಯಕೀಯ ಸಂಸ್ಥೆಗಳ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಕುಲಸಚಿವ ಡಾ.ಬಿ.ಮಂಜುನಾಥ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮಹಾ ವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ ಅಧ್ಯಕ್ಷತೆ ವಹಿಸುವರು. ಸಮ ಕುಲಾಧಿಪತಿ ಡಾ.ಬಿ.ಸುರೇಶ್, ಕುಲಪತಿ ಡಾ.ಹೆಚ್.ಬಸವನಗೌಡಪ್ಪ ಗೌರವ ಅತಿಥಿಗಳಾಗಿ ಭಾಗವಹಿಸುವರು.

ಜೈಪುರದ ಮಹಾತ್ಮಗಾಂಧಿ ವೈದ್ಯಕೀಯ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಅಚಲ್ ಗುಲಾಟಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಮತ್ತು ಪದಕಗಳನ್ನು ಪ್ರದಾನ ಮಾಡಲಿದ್ದಾರೆ ಎಂದರು.

ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಡಿ.ನಾರಾಯಣಪ್ಪ ಮಾತನಾಡಿ, 1984ರಲ್ಲಿ ಸ್ಥಾಪಿಸಲ್ಪಟ್ಟ ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯವು ಶೈಕ್ಷಣಿಕ ಉತ್ಕೃಷ್ಟತೆ ಮತ್ತು ಆರೋಗ್ಯ ರಕ್ಷಣೆಯಲ್ಲಿ 41 ಸುವರ್ಣ ವರ್ಷಗಳನ್ನು ಪೂರ್ಣಗೊಳಿಸಿದ್ದು, ಈ ಅವಧಿಯಲ್ಲಿ ಒಟ್ಟು 5,604 ಎಂಬಿಬಿಎಸ್ ಮತ್ತು 2490 ಸ್ನಾತಕೋತ್ತರ ವೈದ್ಯರು ಈ ಸಂಸ್ಥೆಯಿಂದ ಹೊರ ಹೊಮ್ಮಿದ್ದಾರೆ. ದೇಶದ ವಿವಿಧ ಭಾಗಗಳು ಮತ್ತು ವಿದೇಶಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಎಂದರು.

ಪದವೀಧರರ ದಿನಾಚರಣೆ ಕಾರ್ಯಕ್ರಮದಲ್ಲಿ 208 ವಿದ್ಯಾರ್ಥಿಗಳು ಪದವಿ ಪ್ರಮಾಣ ಪತ್ರ, 6 ಪ್ರತಿಭಾನ್ವಿತ ವಿದ್ಯಾರ್ಥಿಗಳು 12 ಚಿನ್ನದ ಪದಕಗಳನ್ನು ಮತ್ತು 11 ನಗದು ಬಹುಮಾನಗಳನ್ನು ಸ್ವೀಕರಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಉತ್ತಮ ಶಿಕ್ಷಕ ಪ್ರಶಸ್ತಿ, ಸಂಶೋಧನಾ ಶ್ರೇಷ್ಠತಾ ಪ್ರಶಸ್ತಿ, ಉತ್ತಮ ಸಂಶೋಧನಾ ಪ್ರಕಟಣೆಗೆ ವೈ.ಟಿ.ತಾತಾಚಾರಿ ದತ್ತಿ ಬಹುಮಾನ ನೀಡಿ ಗೌರವಿಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಉಪಪ್ರಾಂಶುಪಾಲರಾದ ಡಾ.ಎಂ.ಎನ್.ಸುಮ, ಡಾ.ಪ್ರವೀಣ್ ಕುಲಕರ್ಣಿ, ಡಾ.ಎಂ.ಮಹಾಂತಪ್ಪ, ಆಡಳಿತಾಧಿಕಾರಿ ಎಸ್.ಆರ್.ಸತೀಶ್ ಚಂದ್ರ, ಸುಧೀಂದ್ರಭಟ್ ಉಪಸ್ಥಿತರಿದ್ದರು.

ಸ್ಪಾ ಹೆಸರಲ್ಲಿ ವೇಶ್ಯಾವಾಟಿಕೆ: ಇಬ್ಬರ ವಿರುದ್ಧ ಪ್ರಕರಣ ದಾಖಲು

ಮೈಸೂರು, ಮಾ.26(ಆರ್‌ಕೆ)– ಮೈಸೂರಿನ ಇರ್ವಿನ್ ರಸ್ತೆಯಲ್ಲಿರುವ ರಾಮ ಗ್ರ್ಯಾಂಡ್ ಲಾಡ್ಜ್‌ನಲ್ಲಿ ಸ್ಪಾ ಹೆಸರಿನಲ್ಲಿ ವೇಶ್ಯಾವಾಟಿಕೆ ನಡೆಸುತ್ತಿದ್ದ ಮಹಿಳೆ ಸೇರಿ ಇಬ್ಬರ ವಿರುದ್ಧ ಲಷ್ಕರ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಲಾಗಿದೆ.

ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅವರ ಮಾಹಿತಿ ಮೇರೆಗೆ ಲಷ್ಕರ್ ಠಾಣೆ ಇನ್‌ಸ್ಪೆಕ್ಟರ್ ಪ್ರಸಾದ್, ಸಿಸಿಆರ್‌ಡಿ ಇನ್‌ಸ್ಪೆಕ್ಟರ್ ಮುಸ್ತಾಕ್ ಪಾಷ ಹಾಗೂ ಸಿಬ್ಬಂದಿ ಸೋಮವಾರ ರಾತ್ರಿ ಲಾಡ್ಜ್ ಮೇಲೆ ದಾಳಿ ನಡೆಸಿದಾಗ 3ನೇ ಮಹಡಿಯಲ್ಲಿ ಐಶ್ವರ್ಯ ಲಕ್ಷ್ಮಿ ಹೆಸರಿನಲ್ಲಿ ಸ್ಪಾ ನಡೆಸುತ್ತಿದ್ದು, ಇಬ್ಬರು ಯುವತಿಯರ ಮೂಲಕ ವೇಶ್ಯಾವಾಟಿಕೆ ದಂಧೆ ನಡೆಸುತ್ತಿದ್ದುದು ತಿಳಿದುಬಂದಿದೆ. ಸ್ಪಾ ಮಾಲೀಕರಾದ ಸವಿತಾಗಿರಿ ಅ.ಸ್ವಾತಿ ಎಂಬುವರು ವೇಶ್ಯಾವಾಟಿಕೆ ಚಟುವಟಿಕೆ ನಡೆಸುತ್ತಿದ್ದರು ಎಂಬುದು ಮಹಜರು ವೇಳೆ ಕಂಡುಬಂದ ಹಿನ್ನೆಲೆಯಲ್ಲಿ ಆಕೆ ಮತ್ತು ಆಕೆಗೆ ನೆರವಾದ ವ್ಯಕ್ತಿ ವಿರುದ್ಧ ಲಷ್ಕರ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.


ಇಂಜಿನಿಯರಿಂಗ್ ವಿದ್ಯಾರ್ಥಿನಿ ಸಾವು



ಮೈಸೂರು, ಮಾ.26– ಮೈಸೂರಿನ ಹಿರಿಯ ವಕೀಲರಾದ ರವಿಕಾಂತ್ ಅವರ ಪುತ್ರಿ ಹಾಗೂ ಖಾಸಗಿ ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿನಿ ಆರ್. ಪ್ರೇಕ್ಷಾ (21) ಇಂದು ಅನಾರೋಗ್ಯದಿಂದ ನಿಧನರಾದರು.ಇವರ ಅಂತ್ಯಕ್ರಿಯೆ ಇಂದು ಸಂಜೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರ ನಿಧನಕ್ಕೆ ಲಾ ಗೈಡ್ ಕಾನೂನು ಮಾಸಪತ್ರಿಕಾ ಬಳಗ ತೀವ್ರ ಸಂತಾಪ ಸೂಚಿಸಿದೆ.

ನಿಧನ

ಟಿ.ಸಿ.ವಸಂತರಾಜೇ ಅರಸ್



ಮೈಸೂರು, ಮಾ.26–ಕರ್ನಾಟಕ ಪದವಿಪೂರ್ವ ಮಂಡಳಿ ನಿವೃತ್ತ ಉಪ ನಿರ್ದೇಶಕರು ಮತ್ತು ಜಯಲಕ್ಷ್ಮಿಪುರಂ ನಿವಾಸಿ ಟಿ.ಸಿ.ವಸಂತರಾಜೇ ಅರಸ್ (88) ಬುಧವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ ಎಸ್.ವಿ.ಸರಳ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಹುಟ್ಟೂರು ಪಿರಿಯಾಪಟ್ಟಣ ತಾಲೂಕಿನ ಬೆಟ್ಟದತುಂಗದಲ್ಲಿ ನಾಳೆ (ಮಾ.27) ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಂ.ಎಸ್.ಶ್ರೀಧರ್



ಮೈಸೂರಿನ ಕೆ.ಆರ್. ಮೊಹಲ್ಲಾದ ತ್ಯಾಗರಾಜ ರಸ್ತೆ ನಿವಾಸಿ ಎಂ.ಎಸ್.ಶ್ರೀಧರ್ (79) ಬುಧವಾರ ಮುಂಜಾನೆ 5 ಗಂಟೆಗೆ ವಯೋಸಹಜ ಅನಾರೋಗ್ಯದಿಂದ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನಾಳೆ (ಮಾ.27) ಮಧ್ಯಾಹ್ನ 12 ಗಂಟೆಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇಂದು ಕರ್ನಾಟಕ ರಾಜ್ಯ ಮುಕ್ತ ವಿವಿಯ 20ನೇ ಘಟಿಕೋತ್ಸವ

● 17,348 ಮಂದಿಗೆ ವಿವಿಧ ಪದವಿ ಪ್ರದಾನ ● ಸಚಿವ ಸತೀಶ್ ಜಾರಕಿಹೊಳಿ ಸೇರಿದಂತೆ ಮೂವರಿಗೆ ಗೌರವ ಡಾಕ್ಟರೇಟ್



ಗೆಹ್ಲೋಟ್

ಮೈಸೂರು,ಮಾ.26(ಎಂಟಿವೈ)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 20ನೇ ಘಟಿಕೋತ್ಸವ ನಾಳೆ (ಮಾ.27) ನಡೆಯಲಿದೆ. ಬೆಳಗ್ಗೆ 11 ಗಂಟೆಗೆ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಸಮಾರಂಭ ನಡೆಯಲಿದ್ದು, 17,348 ಅಭ್ಯರ್ಥಿಗಳಿಗೆ ವಿವಿಧ ಪದವಿ ಪ್ರದಾನ ಮಾಡಲಾಗುತ್ತಿದೆ ಎಂದು ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ತಿಳಿಸಿದ್ದಾರೆ.

ಮುಕ್ತ ಗಂಗೋತ್ರಿ ಆವರಣದ ಅತಿಥಿ ಗೃಹದ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿ ಉತ್ತರ ಕರ್ನಾಟಕ ಭಾಗದಲ್ಲಿ ಸಮಾಜ ಸೇವೆ ಮೂಲಕ ಆ ಭಾಗದ ಜನರ ಮನಗೆದ್ದಿರುವ ಸಚಿವ ಸತೀಶ್ ಜಾರಕಿಹೊಳಿ, ಚಿತ್ರದುರ್ಗ ಐಡಿಯಲ್ ಎಜುಕೇಷನ್ ಸೊಸೈಟಿ ಅಧ್ಯಕ್ಷ ಸಿ.ಎಂ.ಇರ್ಫಾನುಲ್ಲಾ ಷರೀಫ್ ಹಾಗೂ ಕಲಬುರಗಿಯ ಶರಣ ಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷೆ ದಾಕ್ಷಾಯಿಣಿ ಎಸ್.ಅಪ್ಪಾ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡುವುದಾಗಿ ತಿಳಿಸಿದರು.

ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಪದವಿ ಪ್ರದಾನ ಮಾಡಿ, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಮುಖ್ಯ ಅತಿಥಿಯಾಗಿ ಪಾಲ್ಗೊಂಡರೆ, ಕೇಂದ್ರ ಸರ್ಕಾರದ ಕೌಶಲಾಭಿವೃದ್ಧಿ ಮತ್ತು ವಾಣಿಜ್ಯೋದ್ಯಮ ಸಚಿವಾಲಯದ ಕಾರ್ಯದರ್ಶಿ ಅತುಲ್‌ಕುಮಾರ್ ತಿವಾರಿ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ಕಾರ್ಯಕ್ರಮದಲ್ಲಿ ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಕುಲಸಚಿವರಾದ ಡಾ.ಹೆಚ್.ವಿಶ್ವನಾಥ್, ಪ್ರೊ.ಕೆ.ಬಿ. ಪ್ರವೀಣ ಇನ್ನಿತರರು ಉಪಸ್ಥಿತರಿರುವರು ಎಂದರು.

ಇದೇ ವೇಳೆ ಮುಕ್ತ ವಿವಿಯ ಮೌಲ್ಯಮಾಪನ ವಿಭಾಗದ ಕುಲಸಚಿವ ಡಾ.ಹೆಚ್.ವಿಶ್ವನಾಥ್ ಮಾತನಾಡಿ, ನಾಳೆ ನಡೆಯುವ ಘಟಿಕೋತ್ಸವದಲ್ಲಿ 54 ಚಿನ್ನದ ಪದಕ, 58 ನಗದು ಬಹುಮಾನ, 41 ಮಂದಿಗೆ ಪಿಹೆಚ್.ಡಿ ಸೇರಿದಂತೆ 17,348 ಮಂದಿಗೆ ವಿವಿಧ ಪದವಿ ನೀಡಲಾಗುತ್ತಿದೆ. ಅವರಲ್ಲಿ 6402 ಪುರುಷರು, 10946 ಮಂದಿ ಮಹಿಳಾ ಅಭ್ಯರ್ಥಿಗಳಿದ್ದಾರೆ. ಮುಕ್ತ ವಿವಿ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ 41 ಮಂದಿ ಪಿಹೆಚ್.ಡಿ ಪದವಿ ಪಡೆಯುತ್ತಿದ್ದಾರೆ. ಎಂದು ತಿಳಿಸಿದರು.

ರಾಜ್ಯಾದ್ಯಂತ ಇರುವ ಮುಕ್ತ ವಿವಿ ಕೇಂದ್ರಗಳಲ್ಲಿ ಈ ಬಾರಿ 25,109 ಮಂದಿ ಪರೀಕ್ಷೆ ಬರೆದಿದ್ದರು. ಅವರಲ್ಲಿ ಶೇ.68.92 (17,307) ಮಂದಿ ತೇರ್ಗಡೆ ಹೊಂದಿದ್ದಾರೆ. ಘಟಿಕೋತ್ಸವದಲ್ಲಿ ಒಟ್ಟು 123 ಮಂದಿ ವಿವಿಧ ಬಹುಮಾನ ಹಾಗೂ ಪ್ರಮಾಣ ಪತ್ರ ಸ್ವೀಕರಿಸಲಿದ್ದಾರೆ. ಅವರಲ್ಲಿ 54 ಮಂದಿ ಚಿನ್ನದ ಪದಕ ಪಡೆದರೆ, 58 ಮಂದಿ ನಗದು ಪುರಸ್ಕಾರ ಸ್ವೀಕರಿಸಲಿದ್ದಾರೆ. ಉಳಿದ 41 ಮಂದಿಗೆ ಪಿಹೆಚ್.ಡಿ ಪದವಿ ಪ್ರದಾನಿಸುವುದಾಗಿ ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಕುಲಸಚಿವ ಪ್ರೊ.ಕೆ.ಪ್ರವೀಣ, ಸಿಂಡಿಕೇಟ್ ಸದಸ್ಯರು ಪಾಲ್ಗೊಂಡಿದ್ದರು.

ಮುಕ್ತ ವಿವಿ ಗೌರವ ಡಾಕ್ಟರೇಟ್ ಪದವಿಗೆ ಆಯ್ಕೆಯಾದವರು

ಸಚಿವ ಸತೀಶ್ ಜಾರಕಿಹೊಳಿ, ಚಿತ್ರದುರ್ಗ ಐಡಿಯಲ್ ಎಜುಕೇಷನ್ ಸೊಸೈಟಿ ಅಧ್ಯಕ್ಷ ಸಿ.ಎಂ.ಇರ್ಫಾನುಲ್ಲಾ ಷರೀಫ್, ಕಲಬುರ್ಗಿಯ ಶರಣ ಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷೆ ದಾಕ್ಷಾಯಿಣಿ ಎಸ್.ಅಪ್ಪಾ.



ಸತೀಶ್ ಜಾರಕಿಹೊಳಿ | ಇರ್ಫಾನುಲ್ಲಾ ಷರೀಫ್ | ದಾಕ್ಷಾಯಿಣಿ ಎಸ್.ಅಪ್ಪಾ.



ಮೈಸೂರಿನ ಮುಕ್ತ ಗಂಗೋತ್ರಿಯ ಅತಿಥಿ ಗೃಹದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಕುಲಸಚಿವರಾದ ಡಾ.ಹೆಚ್.ವಿಶ್ವನಾಥ್, ಪ್ರೊ.ಕೆ.ಬಿ.ಪ್ರವೀಣ ಚಿತ್ರದಲ್ಲಿದ್ದಾರೆ.

ಭೈರವಿ ಗೌಡ್ತಿಯರ ಬಳಗದಿಂದ ಪ್ರತಿಭಾನ್ವಿತೆಗೆ ಸನ್ಮಾನ...



ಭೈರವಿ ಗೌಡ್ತಿಯರ ಬಳಗದ ವತಿಯಿಂದ ವಿಶ್ವ ಮಹಿಳಾ ದಿನಾಚರಣೆ ಹಾಗೂ ಭೈರವಿ ವಾರ್ಷಿಕೋತ್ಸವದ ಸಂದರ್ಭದಲ್ಲಿ ರಸಾಯನಶಾಸ್ತ್ರ ವಿಭಾಗದ ಸ್ನಾತಕೋತ್ತರ ಪದವಿಯಲ್ಲಿ 8 ಚಿನ್ನದ ಪದಕ ಪಡೆದ ಎಂ.ಆರ್.ಭೂಮಿಕ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಬಳಗದ ಅಧ್ಯಕ್ಷೆ ಪ್ರೇಮಾ ಶಂಕರೇಗೌಡ, ರೇಣುಕಾ ಜಗದೀಶ್, ಭಾಗ್ಯ ಮಹದೇಶ್ ಇತರರು ಉಪಸ್ಥಿತರಿದ್ದರು.

ಶಿಸ್ತು ಕ್ರಮವನ್ನು ನಾನು ಸಂಭ್ರಮಿಸಲಾರೆ...



ಬೆಂಗಳೂರು, ಮಾ.26– ಪಕ್ಷದ ಶಿಸ್ತು ಉಲ್ಲಂಘನೆಯ ಕಾರಣಕ್ಕೆ ಬಿಜೆಪಿ ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಅವರನ್ನು ಪಕ್ಷದ ಹೈಕಮಾಂಡ್ ಇಂದು ಆರು ವರ್ಷದ ಅವಧಿಗೆ ಉಚ್ಚಾಟನೆ ಮಾಡಿದೆ.

ಯತ್ನಾಳ್ ಅವರ ಉಚ್ಚಾಟನೆ ಘೋಷಣೆಯಾಗುತ್ತಿದ್ದಂತೆಯೇ ಎಕ್ಸ್ ಖಾತೆಯಲ್ಲಿ ಸುದೀರ್ಘ ಪೋಸ್ಟ್ ಒಂದನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಹಂಚಿಕೊಂಡಿದ್ದಾರೆ. ವರಿಷ್ಠರು ತೆಗೆದುಕೊಂಡಿರುವ ಶಿಸ್ತು ಕ್ರಮವನ್ನು ನಾನು ಸಂಭ್ರಮಿಸಲಾರೆ ಬದಲಾಗಿ ಈ ಬೆಳವಣಿಗೆಯನ್ನು ದುರದೃಷ್ಟಕರವೆಂದು ದುಃಖಿಸುತ್ತೇನೆ ಎಂದು ಹೇಳಿಕೊಂಡಿದ್ದಾರೆ.

ಭಾರತೀಯ ಜನತಾ ಪಕ್ಷದಲ್ಲಿ ಶಿಸ್ತು–ತ್ಯಾಗಕ್ಕೆ ಮೊದಲ ಆದ್ಯತೆ. ಪಕ್ಷದ ಹಿರಿಯರು ಹಾಗೂ ವರಿಷ್ಠರು ಈ ವಿಷಯದಲ್ಲಿ ಎಂದಿಗೂ ರಾಜೀ ಮಾಡಿಕೊಂಡಿರುವ ಉದಾಹರಣೆ ನಮ್ಮ ಮುಂದಿಲ್ಲ, ಸದ್ಯ ಬಸನಗೌಡ ಪಾಟೀಲ ಯತ್ನಾಳ್‌ರವರ ವಿರುದ್ಧದ ಶಿಸ್ತುಕ್ರಮ ವರಿಷ್ಠರು ಸುದೀರ್ಘ ಅವಧಿಯಿಂದ ಸ್ಥಿತಿ–ಗತಿಗಳನ್ನು ಅವಲೋಕಿಸಿ ಅನಿವಾರ್ಯವಾಗಿ ತೆಗೆದುಕೊಂಡಿರುವ ಕ್ರಮವಾಗಿರುತ್ತದೆ ಎಂದಿದ್ದಾರೆ. ಪಕ್ಷದ ಬೆಳವಣಿಗೆಯಲ್ಲಿನ ಕಹಿ ಘಟನೆಗಳನ್ನು ಉಲ್ಲೇಖಿಸಿ ಪಕ್ಷದ ವರಿಷ್ಠರಿಗೆ ನಾನು ಎಂದೂ ದೂರುಗಳನ್ನು ಹೇಳಿಕೊಂಡಿಲ್ಲ, ದಾಖಲಿಸಿಯೂ ಇಲ್ಲ. ಪೂಜ್ಯ ತಂದೆ ಯಡಿಯೂರಪ್ಪನವರು ಎಲ್ಲರನ್ನೂ ಸಮಚಿತ್ತ ಭಾವದಿಂದ ನೋಡಿ, ಪಕ್ಷವನ್ನು ಕುಟುಂಬದಂತೆ ಬೆಳೆಸಿದ ಮಾದರಿಯಲ್ಲಿಯೇ ನಡೆಯಬೇಕೆಂಬ ಸಂಕಲ್ಪ ಹೊತ್ತು, ಸಂಘದ ಹಿರಿಯರು ಮತ್ತು ಪಕ್ಷದ ಹಿರಿಯರ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇನೆ ಎಂದಿದ್ದಾರೆ.

ಕೆಲ ದಿನಗಳ ಹಿಂದೆ ನಡೆದ ಕಹಿ ಪ್ರಸಂಗಗಳಿಂದ ಎಂದಿಗೂ ನಾನು ಉದ್ವೇಗಗೊಳ್ಳಲಿಲ್ಲ, ಯಾರೊಂದಿಗೂ ದುಃಖ ತೋಡಿಕೊಂಡಿಲ್ಲ. ಸಮರ್ಪಣೆ–ತ್ಯಾಗದ ಪಾಠವನ್ನು ಹೇಳಿಕೊಡುವ ಸಂಸ್ಕಾರವಂತ ಸಂಘಟನೆಯ ವ್ಯವಸ್ಥೆಯಲ್ಲಿ ಬೆಳೆದು ಬಂದ ನಾನು ಸಹನೆ–ತಾಳ್ಮೆಯನ್ನು ಜವಾಬ್ದಾರಿ ನಿರ್ವಹಿಸುವ ನಿಟ್ಟಿನಲ್ಲಿ ಆಧಾರ ಸ್ತಂಭವೆಂದು ಪರಿಗಣಿಸಿ ಮುನ್ನಡಿದಿದ್ದೇನೆ' ಎಂದು ಹೇಳಿಕೊಂಡಿದ್ದಾರೆ.

ಭ್ರಷ್ಟಾಚಾರ ಹಾಗೂ ಸ್ವಜನ ಪಕ್ಷಪಾತದಲ್ಲಿ ಮುಳುಗಿರುವ ಜನವಿರೋಧಿ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರದಿಂದ ಕೆಳಗಿಳಿಸಿ, ಸಮೃದ್ಧ ಕರ್ನಾಟಕವನ್ನು ಕಟ್ಟುವ ನಿಟ್ಟಿನಲ್ಲಿ ವಿಕಸಿತ ಭಾರತದ ಸಂಕಲ್ಪ ಹೊತ್ತ ಮಾನ್ಯ ಪ್ರಧಾನಿ ನರೇಂದ್ರ ಮೋದಿ ಜೀ ಅವರಿಗೆ ಹೆಗಲು ಕೊಡೋಣ, ಪಕ್ಷದ ವರಿಷ್ಠರ ನಿರೀಕ್ಷೆಯ ಗುರಿ ತಲುಪೋಣ' ಎಂದು ಕಾರ್ಯಕರ್ತರಲ್ಲಿ ಮನವಿ ಮಾಡಿಕೊಂಡಿದ್ದಾರೆ.


ಯತ್ನಾಳ್ ಉಚ್ಚಾಟನೆ ಬೆನ್ನಲ್ಲೆ ಸಾಲು ಸಾಲು ರಾಜೀನಾಮೆ

ವಿಜಯಪುರ, ಮಾ.26– ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರ ಉಚ್ಚಾಟನೆಯ ಬೆನ್ನಲ್ಲೇ ವಿಜಯಪುರ ಜಿಲ್ಲಾ ಬಿಜೆಪಿಯಲ್ಲಿ ಭಾರೀ ಹೊಡೆತ ಬಿದ್ದಿದೆ. ಯತ್ನಾಳ್ ಅವರ ಉಚ್ಚಾಟನೆಯನ್ನು ಖಂಡಿಸಿ ಪಕ್ಷದ ನಗರ ಮಂಡಲದ ಪ್ರಮುಖ ಮುಖಂಡರು ಸಾಲು ಸಾಲು ರಾಜೀನಾಮೆಗೆ ಮುಂದಾಗಿದ್ದಾರೆ. ಈ ಬೆಳವಣಿಗೆಯಿಂದ ವಿಜಯಪುರ ಜಿಲ್ಲಾ ಬಿಜೆಪಿಯಲ್ಲಿ ಆಂತರಿಕ ಬಿಕ್ಕಟ್ಟು ತಾರಕ್ಕೇರಿದೆ

ನಗರ ಮಂಡಲದ ಪ್ರಮುಖ 20 ಹುದ್ದೆಗಳಲ್ಲಿರುವ ಮುಖಂಡರು ರಾಜೀನಾಮೆ ನೀಡುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ. ಈಗಾಗಲೇ ರಾಜೀನಾಮೆ ನೀಡಲು ಉದ್ದೇಶಿಸಿರುವ ಮುಖಂಡರ ಪಟ್ಟಿ ಸಿದ್ಧವಾಗಿದ್ದು, ನಗರ ಕ್ಷೇತ್ರದಲ್ಲಿ ಸಾಮೂಹಿಕ ರಾಜೀನಾಮೆಗೆ ಭರದ ಸಿದ್ಧತೆ ನಡೆಯುತ್ತಿದೆ. ಈ ಕುರಿತು ಮಾಧ್ಯಮಕ್ಕೆ ಸ್ಫೋಟಕ ಮಾಹಿತಿ ನೀಡಿರುವ ನಗರ ಮಂಡಲ ಅಧ್ಯಕ್ಷ ಶಂಕರ್ ಹೂಗಾರ್, ಬಿಜೆಪಿಯ ಶಾಲುವನ್ನು ಬಿಚ್ಚಿಟ್ಟು, ಕೇಸರಿ ಶಾಲು ಧರಿಸಿ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ. ಮಾಧ್ಯಮದೆದುರು ಭಾವುಕರಾದ ಶಂಕರ್ ಹೂಗಾರ್, ಯತ್ನಾಳ್ ಉಚ್ಚಾಟನೆಯಿಂದ ತಮಗೆ ತೀವ್ರ ನೋವಾಗಿದೆ. ಯತ್ನಾಳ್ ಅವರ ಉಚ್ಚಾಟನೆಗೆ ಕಣ್ಣಂಚಲ್ಲಿ ನೀರು ಬಂತು. ಇನ್ನೂ ಬಿಜೆಪಿಯ ಪ್ರಮುಖ ಹುದ್ದೆಗಳಲ್ಲಿ 20 ಜನರ ಲಿಸ್ಟ್ ಇದೆ. ನಾವೆಲ್ಲರೂ ಸಾಮೂಹಿಕ ರಾಜೀನಾಮೆ ಕೊಡುತ್ತೇವೆ ಎಂದು ಘೋಷಿಸಿದ್ದಾರೆ. ಯತ್ನಾಳ್ ಅವರ ಹಿಂದೂತ್ವದ ತತ್ವಗಳಿಗೆ ಬೆಂಬಲ ಸೂಚಿಸುವುದಾಗಿ ತಿಳಿಸಿದ ಶಂಕರ್ ಹೂಗಾರ್, ಹಿಂದೂ ನಾಯಕ ಯತ್ನಾಳ್ ಬೆನ್ನಿಗೆ ನಾವು ನಿಲ್ಲುತ್ತೇವೆ ಎಂದು ದೃಢವಾಗಿ ಹೇಳಿದ್ದಾರೆ.

ವಿಜಯಪುರ ಬಿಜೆಪಿ ನಗರ ಮಂಡಲವೇ ಖಾಲಿ ಖಾಲಿ

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

27.03.2025 ಗುರುವಾರ, ಮಳೆ ನಕ್ಷತ್ರ: ಉತ್ತರಭಾದ್ರಾ 17.03.2025 ರಿಂದ 30.03.2025
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ,
ತಿಥಿ: ತ್ರಯೋದಶಿ, ನಕ್ಷತ್ರ: ಶತಭಿಷ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 9ರಿಂದ ಮೂಲವ್ಯಾಧಿ/ಪೈಲ್ಸ್ ರೋಗ ಚಿಕಿತ್ಸಾ ಶಿಬಿರ, ವಸಂತ ವೇಮನ ದೇಹ ಶುದ್ಧಿ ಚಿಕಿತ್ಸಾ ಶಿಬಿರ, ಇಸುಬು ತಪಾಸಣಾ ಶಿಬಿರ, ಒಟೋಮೈಕೋಸಿಸ್ –ಕಿವಿಯ ಫಂಗಲ್ ಸೋಂಕಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಒಬೆಸಿಟಿ (ತೂಕ ಇಳಿಸುವಿಕೆ) ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಗೆ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.

■ **ಗೋತಮಿ ಫೌಂಡೇಷನ್ :** ವಿಶ್ವ ರಂಗಭೂಮಿ ದಿನಾಚರಣೆ ಅಂಗವಾಗಿ ರಂಗಕರ್ಮಿ, ಚಲನಚಿತ್ರ ನಿರ್ದೇಶಕ, ವನ್ಯಜೀವಿ ಹಾಗೂ ರಂಗಭೂಮಿ ಛಾಯಾಗ್ರಾಹಕ ಕೆ. ಶಿವರುದ್ರಯ್ಯ ಅವರ ಛಾಯಾಚಿತ್ರ ಪ್ರದರ್ಶನ, ಉದ್ಘಾಟನೆ : ರಂಗ ನಿರ್ದೇಶಕ ಜನಾರ್ಧನ್ (ಜನ್ನಿ), ಉಪಸ್ಥಿತರು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸುದರ್ಶನ್, ಗೋತಮಿ ಫೌಂಡೇಷನ್ ಹಿರಿಯ ರಂಗ ನಿರ್ದೇಶಕ ಕೆ. ಶಿವಲಿಂಗಯ್ಯ, ಸ್ಥಳ: ಸುಚಿತ್ರ ಆರ್ಟ್ ಗ್ಯಾಲರಿ, ಕಲಾಮಂದಿರ, ಬೆಳಗ್ಗೆ 10ಕ್ಕೆ

■ **ದೀಕ್ಷಿತ್ ಆರ್ಥೋ ಕೇರ್ :** ಉಚಿತ ದೇಹ ಸಂಯೋಜನ ವಿಶ್ಲೇಷಕ ಪರೀಕ್ಷೆ, ಮೂಳೆ ಸಾಂದ್ರತೆ ಪರೀಕ್ಷೆ, ಸ್ಥಳ: ದೀಕ್ಷಿತ್ ಆರೋಗ್ಯ ಧಾಮ, ವಿಜಯನಗರ 3ನೇ ಹಂತ, ಬೆಳಗ್ಗೆ 10 ರಿಂದ.

■ **ದಕ್ಷ ಪ್ರಥಮ ದರ್ಜೆ ಕಾಲೇಜು :** ದ್ವಿತೀ ಸೀಸನ್–2 ಉದ್ಘಾಟನಾ ಸಮಾರಂಭ, ಉದ್ಘಾಟನೆ : ಮೈಸೂರು ವಿವಿ ಕುಲಸಚಿವ ಪ್ರೊ. ಎನ್. ನಾಗರಾಜ, ಮುಖ್ಯ ಅತಿಥಿಗಳು : ಪ್ರಾಧ್ಯಾಪಕ ಡಾ. ಡಿ. ಆನಂದ, ಡಾ. ಸಂಜಯ್ ವಿರ್‌ನವೆ, ಅಧ್ಯಕ್ಷತೆ : ಗ್ಲೋಬಲ್ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಜಯಚಂದ್ರ ರಾಜು, ಉಪಸ್ಥಿತರು : ಸೋನಿಯಾ ಉಮಾಪತಿ, ಗೌತಮ್ ರಾಜು, ಸ್ಥಳ: ಕಲ್ಚರಲ್ ಸಭಾಂಗಣ, ಬೆಳಗ್ಗೆ 10ಕ್ಕೆ

■ **ಪಬ್ಲಿಕ್ ಹೆಲ್ತ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ:** ಸರ್ವಿಕಲ್ ಕ್ಯಾನ್ಸರ್ ಪ್ರಿವೆನ್ಷನ್ ಸೆಂಟರ್ ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು: ಜಿಲ್ಲಾ ಆರೋಗ್ಯ–ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ, ಸ್ಥಳ: ನಂ.4, ಐ ಬ್ಲಾಕ್, ಕುವೆಂಪುನಗರ, ಬೆಳಗ್ಗೆ 11 ರಿಂದ.

■ **ರಾಷ್ಟ್ರೀಯ ಭ್ರಷ್ಟಾಚಾರ ನಿರ್ಮೂಲನೆ ಹಾಗೂ ಕಾರ್ಯಾಚರಣೆ ಸಮಿತಿ :** ಮೈಸೂರು ಜಿಲ್ಲಾ ಘಟಕ ಉದ್ಘಾಟನೆ ಹಾಗೂ ಪದಾಧಿಕಾರಿಗಳ ಸಮಾವೇಶ, ಉದ್ಘಾಟನೆ : ಶ್ರೀ ಕುದೇರು ಮಠದ ಶ್ರೀ ಗುರುಶಾಂತ ಸ್ವಾಮೀಜಿ, ಅಧ್ಯಕ್ಷತೆ : ಜಿಲ್ಲಾಧ್ಯಕ್ಷ ಡಿ. ದೇವರಾಜಪ್ಪ, ಮುಖ್ಯ ಅತಿಥಿಗಳು : ಲೋಕಾಯುಕ್ತ ಡಿವೈಎಸ್ಪಿ ಮ್ಯಾಥ್ಯೂ ಥಾಮಸ್, ಡಾ. ಎ.ಎಸ್. ಭದ್ರಶೆಟ್ಟಿ, ಪಿ.ಸಿ. ಸ್ವಾಮಿ, ಶ್ರೀಮತಿ ಹೇಮಲತಾ, ಕೆ. ಪ್ರಭಾಕರ್, ದಯಾನಂದ, ಎಸ್.ವಿ. ಕುಂಬಾರ, ಎಸ್. ಗುರುಸ್ವಾಮಿ, ಎಚ್.ಪಿ. ಶ್ರೀಕಂಠಸ್ವಾಮಿ, ಎಂ.ಎ. ಶ್ರೀನಿವಾಸ, ಸ್ಥಳ: ಶ್ರೀ ಗುರು ರೆಸಿಡೆನ್ಸಿ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ

■ **ಮೈಸೂರು ವಿಶ್ವವಿದ್ಯಾನಿಲಯ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಅರಿವು–ಸಂಶೋಧನಾ ವಿದ್ಯಾರ್ಥಿ ವೇದಿಕೆ:** ಸಾಂಸ್ಕೃತಿಕ ಅಧ್ಯಯನದ ತಾತ್ವಿಕತೆ ಕುರಿತು ಸಂದರ್ಶಕ ಪ್ರಾಧ್ಯಾಪಕ ಪ್ರೊ.ರಹಮತ್ ತರೀಕೆರೆ ಅವರಿಂದ ವಿಶೇಷ ಉಪನ್ಯಾಸ, ಅಧ್ಯಕ್ಷತೆ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ.ಎನ್.ಕೆ.ಲೋಲಾಕ್ಷಿ, ಉಪಸ್ಥಿತರು: ಹಿರಿಯ ಪ್ರಾಧ್ಯಾಪಕ ಡಾ.ಜೆ.ಸೋಮಶೇಖರ್, ಸ್ಥಳ: ಸಮಿತಿ ಕೊಠಡಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ವಿದ್ಯಾ ವಿಕಾಸ್ ಇನ್‌ಸ್ಟಿಟ್ಯೂಟ್ ಆಫ್ ಲೀಗಲ್ ಸ್ಟಡೀಸ್ :** ವಿಚಾರ ಸಂಕಿರಣ ಮತ್ತು ವಿದ್ಯಾ ವಿಕಾಸ್ ಲಾ ಜರ್ನಲ್ ಬಿಡುಗಡೆ ಸಮಾರಂಭ, ಉದ್ಘಾಟನೆ : ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಸೋಮಣ್ಣ, ಪ್ರಾಸ್ತಾವಿಕ ನುಡಿ : ಕಾನೂನು ಶಿಕ್ಷಣ ಸಲಹೆಗಾರ ಪ್ರೊ. ಪಿ. ಈಶ್ವರ ಭಟ್, ಅಧ್ಯಕ್ಷತೆ : ವಿದ್ಯಾ ವಿಕಾಸ್ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ವಿ. ಕವೀಶ್‌ಗೌಡ, ಉಪಸ್ಥಿತರು : ವಿವಿಐಎಲ್‌ಎಸ್ ನಿರ್ದೇಶಕ ಡಾ.ಎಸ್.ನಟರಾಜು, ಸ್ಥಳ: ಲಲಿತಾ ಸ್ಮಾರಕ ಭವನ, ವಿದ್ಯಾವಿಕಾಸ್ ಇಂಜಿನಿಯರಿಂಗ್ ಕಾಲೇಜು ಆವರಣ, ಬೆಳಗ್ಗೆ 11ಕ್ಕೆ.

■ **ಶ್ರೀ ಶ್ರೀ ಶ್ರೀ 101 ಗಣಪತಿ ದೇವಸ್ಥಾನ ಟ್ರಸ್ಟ್ :** ಶ್ರೀ ವೀರಭದ್ರೇಶ್ವರಸ್ವಾಮಿ ಪ್ರತಿಷ್ಠಾಪನಾ ಮಂಡಲ ಪೂಜಾ ಮಹೋತ್ಸವ, ಸಾನ್ನಿಧ್ಯ : ಶ್ರೀ ರೇಣುಕ ಶಿವಾಚಾರ್ಯ ಸ್ವಾಮೀಜಿ, ಬೆಳಗ್ಗೆ 7 ರಿಂದ ಪ್ರಾರ್ಥನೆ, ಪುಣ್ಯಾಹ, ನಾಂದಿ ರಕ್ಷಾಬಂಧನ, ಗಣಪತಿ ಪೂಜೆ, ಶ್ರೀ ವೀರಭದ್ರೇಶ್ವರಸ್ವಾಮಿಗೆ ತೈಲಾಭಿಷೇಕ, ಪಂಚಾಮೃತಾಭಿಷೇಕ, ಮಹಾರುದ್ರಾಭಿಷೇಕ, ವಿಶೇಷ ಹೂವಿನ ಅಲಂಕಾರ, ಅಷ್ಟೋತ್ತರ, ರಾಜೋಪಚಾರ, ರಾಷ್ಟ್ರಾಶೀರ್ವಾದ, ನೈವೇದ್ಯ ನಂತರ ಶ್ರೀ ಸ್ವಾಮಿಗೆ ಬೆಳಗ್ಗೆ 11.30ಕ್ಕೆ. ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನ, ತ್ಯಾಗರಾಜ ರಸ್ತೆ, ಕೆ.ಆರ್. ಮೊಹಲ್ಲಾ.

■ **ಜೆಎಸ್‌ಎಸ್ ಮಹಿಳಾ ಕಾಲೇಜು :** ತರಂಗ, ಅಂತರ ಕಾಲೇಜು ಸ್ಪರ್ಧೆ ಸಮಾರೋಪ ಸಮಾರಂಭ, ಅಧ್ಯಕ್ಷತೆ : ಮೈಸೂರು ವಿವಿ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಡಾ.ಕೆ. ಮಂಟೇಲಿಂಗು, ಸಮಾರೋಪ ಭಾಷಣ : ಪ್ರೊ. ಡಿ. ಆನಂದ್, ಬಹುಮಾನ ವಿತರಣೆ : ಬಿ. ನಿರಂಜನಮೂರ್ತಿ, ಉಪಸ್ಥಿತರು : ಕಾಲೇಜು ಪ್ರಿನ್ಸಿಪಾಲ್ ಡಾ. ರೇಚಣ್ಣ, ಸ್ಥಳ: ಕಾಲೇಜು ಆವರಣ, ಸಂಜೆ 4.15ಕ್ಕೆ.

■ **ಜನಚೈತನ್ಯ ಫೌಂಡೇಷನ್ :** ಸಂಗೀತ ಕಾರ್ಯಕ್ರಮ – ಕರೋಕೆ, ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ಡಾ. ನಾಗರಾಜು ವಿ. ಭೈರಿ ಅವರಿಗೆ ಚೈತನ್ಯ ರತ್ನ, ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್ ಅವರಿಗೆ ಮಾಧ್ಯಮ ಚೈತನ್ಯ ರತ್ನ ಪ್ರಶಸ್ತಿ ಪ್ರದಾನ, ಸ್ಥಳ: ನಾದಬ್ರಹ್ಮ ಸಂಗೀತ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 4.30ಕ್ಕೆ.

■ **ದಿಲೀಪ್ ಅಭಿಮಾನಿ ಬಳಗ :** ದಿಲೀಪ್ ಹುಟ್ಟುಹಬ್ಬ ಆಚರಣೆ, ಮುಖ್ಯ ಅತಿಥಿಗಳು : ಶಾಸಕರಾದ ಜಿ.ಟಿ. ದೇವೇಗೌಡ, ಜಿ.ಡಿ. ಹರೀಶ್‌ಗೌಡ, ಸುಯೋಗ್ ಆಸ್ಪತ್ರೆ ವ್ಯವಸ್ಥಾಪಕ ಅರುಣ್, ಸ್ಥಳ: ಕನಕನಗರ, ಸಾಹುಕಾರ್ ಹುಂಡಿ, ಸಂಜೆ 6ಕ್ಕೆ

■ **ನಟನಾ ರಂಗಶಾಲೆ :** ವಿಶ್ವ ರಂಗ ದಿನದ ಪ್ರಯುಕ್ತ ನಟನ ಪಯಣ ರೆಪರ್ಟರಿ ತಂಡದ ಕಲಾವಿದರಿಂದ ಕಣಿವೆಯ ಹಾಡು ನಾಟಕ ಪ್ರದರ್ಶನ, ನಿರ್ದೇಶನ : ರಂಗತಜ್ಞ ಡಾ. ಶ್ರೀಪಾದ ಭಟ್, ಸ್ಥಳ: ನಟನಾ ರಂಗಶಾಲೆ, ಸಂಜೆ 6.30ಕ್ಕೆ.


ಬೈರಾಪುರದಲ್ಲಿಂದು, ತಿ. ನರಸೀಪುರ ತಾಲೂಕು

■ **ಜಿಲ್ಲಾ ಶರಣ ಸಾಹಿತ್ಯ ಪರಿಷತ್, ತಾಲೂಕು ಶರಣ ಸಾಹಿತ್ಯ ಪರಿಷತ್:** ತಾಲೂಕು ಮಟ್ಟದ ದತ್ತಿ ಉಪನ್ಯಾಸ ಕಾರ್ಯಕ್ರಮ, ಶ್ರೀಮತಿ ಜವನಮ್ಮ ಮತ್ತು ಶ್ರೀ ಗೌರಪ್ಪನವರ ದತ್ತಿ, ಶ್ರೀಮತಿ ಮಹಾದೇವಮ್ಮ ಮತ್ತು ಶ್ರೀ ನಿಂಗಪ್ಪನವರ ದತ್ತಿ, ಸಾನ್ನಿಧ್ಯ: ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ: ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ, ದತ್ತಿ ಉಪನ್ಯಾಸ: ಪ್ರೊ. ಮೈಸೂರು ಕೃಷ್ಣಮೂರ್ತಿ ಅವರಿಂದ, ಮುಖ್ಯ ಅತಿಥಿಗಳು: ಜಂಟಿ ನಿರ್ದೇಶಕ ಬಿ.ಚಂದ್ರಶೇಖರ್, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಎಂ.ಚಂದ್ರಶೇಖರ್, ಅಧ್ಯಕ್ಷತೆ: ಬೈರಾಪುರ ಕಾಲೇಜು ಪ್ರಿನ್ಸಿಪಾಲ್ ಡಾ.ಬಿ.ಪಿ. ಇಂದಿರಾ, ಉಪಸ್ಥಿತರು : ತಾಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸೋಮಶೇಖರಪ್ಪ ಕೆಬ್ಬೇಹುಂಡಿ, ಡಾ.ಡಿ.ಪುರುಷೋತ್ತಮ್, ಸ್ಥಳ: ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೈರಾಪುರ, ಬೆಳಗ್ಗೆ 10.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಹೆಣ್ಣು ಮನಸು ಮಾಡಿದರೆ ಸಾಧಕ ಮಹಿಳೆಯರ ಪರಿಚಯ ಮಾಲಿಕೆ, ಪ್ರಸ್ತುತಿ: ಪ್ರೊಫೆಸರ್ ಸಿ.ನಾಗಣ್ಣ, ನಿರ್ಮಾಣ–ಜಾಂಪಣ್ಣ ಆಶೀಹಾಳ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಪಿ.ಸುರಭಿ, ವ್ಯಾಖ್ಯಾನ–ಡಾ.ಲತಾ, ಮೈಸೂರು, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ, 8.30 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಾಡಿನಲ್ಲಿನ ಕಥೆಗಳು, ಪ್ರಸ್ತುತಿ: ಜಿ.ಶಾಂತಕುಮಾರ್ **ಮಧ್ಯಾಹ್ನ:** 12.35–ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ಕನ್ನಡ ಭಾರತಿ: ಆಧುನಿಕ ಜಗತ್ತಿನಲ್ಲಿ ವಚನ ಸಾಹಿತ್ಯದ ಪ್ರಸ್ತುತತೆ–ಶಂಕರ್ ದೇವನೂರು ಅವರಿಂದ ಸೋದಾಹರಣ ಭಾಷಣ, 6.50 ಕೃಷಿರಂಗ–ಕಿಸಾನ್ ವಾಣಿ, ಪ್ರಾಯೋಜಕರು: ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ನಂ ಕಂಪನಿ ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ ಅಡಿಕೆ ಹಾಗೂ ಮುಸುಕಿನ ಜೋಳದ ಬೇಸಾಯ ಮತ್ತು ಮಾರಾಟ ಕುರಿತು ಉಡುತಡಿ ರೈತ ಉತ್ಪಾದಕ ಕಂಪನಿ ಅಧ್ಯಕ್ಷ ಬಿ.ಅನೂಪ್‌ರೊಂದಿಗೆ ಸಂದರ್ಶನ, ಸಂದರ್ಶಕರು: ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಸಂಸತ್ ಸಮೀಕ್ಷಾ, 8.15 ಯುವವಾಣಿ–ಮೈಸೂರಿನ ಶ್ರೀಶಾರದಾ ಕಲಾಕ್ಷೇತ್ರದ ವಿದ್ಯಾರ್ಥಿಗಳಿಂದ ಯುಗಾದಿ ವಿಶೇಷ ಕಾರ್ಯಕ್ರಮ. ನಿರ್ದೇಶನ–ವಿದುಷಿ ರೇಖಾ ವೆಂಕಟೇಶ್, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣದ ಪ್ರಸಾರ



ಮೈಸೂರು ಮಿತ್ರ


ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 27 ಗುರುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 337 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4



ದೆಹಲಿಯಲ್ಲಿ ದೇವೇಗೌಡರು, ಕುಮಾರಸ್ವಾಮಿ ಭೇಟಿಯಾದ ಸಚಿವ ಸತೀಶ್ ಜಾರಕಿಹೊಳಿ

ರಾಜ್ಯ ರಾಜಕೀಯದಲ್ಲಿ ಸಂಚಲನ

- ಹನಿಟ್ರ್ಯಾಪ್ ವಿಚಾರವಾಗಿ ಮಹತ್ವದ ಚರ್ಚೆ; ವಾಲ್ಮೀಕಿ ಸಮುದಾಯದವರನ್ನೇ ಟಾರ್ಗೆಟ್ ಮಾಡುತ್ತಿರುವುದಕ್ಕೆ ಕೆಂಡಾಮಂಡಲ
- ಪ್ರಭಾವಿ ಕೇಂದ್ರ ಸಚಿವರಿಬ್ಬರ ಸತೀಶ್ ಜಾರಕಿಹೊಳಿಗೆ ಭೇಟಿ ಮಾಡಿಸಿದ ಕುಮಾರಸ್ವಾಮಿ

ಬೆಂಗಳೂರು, ಮಾ.26(ಕೆಎಂಶಿ)– ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿ, ನಮ್ಮನ್ನು ಟಾರ್ಗೆಟ್ ಮಾಡಿರುವವರಿಗೆ ನಾಯಕತ್ವ ನೀಡಿದರೆ, ನಮ್ಮ ಒಂದು ಗುಂಪು ಸರ್ಕಾರದಿಂದ ಹೊರಬಂದು ಎನ್‌ಡಿಎ ಜೊತೆ ಕೈಜೋಡಿಸುವುದಾಗಿ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಬಳಿ ಹೇಳಿಕೊಂಡಿದ್ದಾರೆ.

ಸಂಸತ್ ಭವನದಲ್ಲಿನ ಜಿ–12 ಕೊಠಡಿಯಲ್ಲಿ ಕುಮಾರಸ್ವಾಮಿ ಹಾಗೂ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರನ್ನು ಪ್ರತ್ಯೇಕವಾಗಿ ಭೇಟಿ ಮಾಡಿ ಸುಮಾರು ಒಂದು ತಾಸಿಗೂ ಹೆಚ್ಚು ಕಾಲ ಜಾರಕಿಹೊಳಿ ಮುಖಾಮುಖಿ ಚರ್ಚೆ ಮಾಡಿದ್ದಾರೆ.

ಈ ವೇಳೆ ತಮ್ಮದೇ ಪಕ್ಷದ ಪ್ರಮುಖ ನಾಯಕರ ವಿರುದ್ಧವೇ ಹರಿಹಾಯ್ದಿರುವ ಜಾರಕಿಹೊಳಿ, ಹನಿಟ್ರ್ಯಾಪ್ ಪ್ರಕರಣದ ಇತ್ತೀಚಿನ ಬೆಳವಣಿಗೆಗಳನ್ನು ಎಳೆಎಳೆಯಾಗಿ ಬಿಡಿಸಿಟ್ಟಿದ್ದಾರೆಂದು ಉನ್ನತ ಮೂಲಗಳು ತಿಳಿಸಿವೆ. ಪ್ರಮುಖ ನಾಯಕರು, ವಾಲ್ಮೀಕಿ ಸಮುದಾಯ ಮತ್ತು ಅದರ ಮುಖಂಡರನ್ನು ದಮನ ಮಾಡಲು ಹೊರಟಿದ್ದಾರೆ. ಯಡಿಯೂರಪ್ಪ ಸಂಪುಟದಲ್ಲಿ ಬೃಹತ್ ನೀರಾವರಿ ಸಚಿವರಾಗಿದ್ದ ತಮ್ಮ ಸಹೋದರ ರಮೇಶ್ ಜಾರಕಿಹೊಳಿ ವಿರುದ್ಧ ಹನಿಟ್ರ್ಯಾಪ್ ನಡೆಸಿ ಅವರನ್ನು ರಾಜಕೀಯವಾಗಿ ಬಲಿ ತೆಗೆದುಕೊಂಡರು.

ಇದೀಗ ನಮ್ಮ ಸಮುದಾಯಕ್ಕೆ ಸೇರಿದ ರಾಜಣ್ಣ ಅವರ ಮೇಲೆ ಐದಾರು ಬಾರಿ ಹನಿಟ್ರ್ಯಾಪ್ ಸಂಚನ್ನು ಕೆಲವರು ರೂಪಿಸಿದ್ದರು. ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ನನ್ನ ಮೇಲೂ ಇಂತಹ ಪ್ರಯತ್ನ ನಡೆದಿತ್ತು ಎಂಬ ಮಾಹಿತಿ ನೀಡಿರುವುದಲ್ಲದೆ, ವಿಧಾನಸಭೆಯಲ್ಲಿ ರಾಜಣ್ಣ ಅವರು, 48 ಮಂದಿ ಹನಿಟ್ರ್ಯಾಪ್‌ಗೆ ಒಳಗಾಗಿದ್ದಾರೆ ಎಂಬ ಹೇಳಿಕೆ ಸತ್ಯ. ಅದರ ಪೂರ್ಣ ಮಾಹಿತಿ ರಾಜಣ್ಣ ಅವರ ಬಳಿ ಇದೆ. ಅವರಿಗೆ ಈ ದಾಖಲೆ ಮತ್ತು ಸಿ.ಡಿ. ಮತ್ತು ಪೆನ್‌ಡ್ರೈವ್‌ಗಳು ಯಾವ ರೀತಿ ದೊರೆತಿವೆ ಎಂಬ ಮಾಹಿತಿಯನ್ನೂ ನೀಡಿದ್ದಾರೆ.





ರಾಜ್ಯದ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು ಬುಧವಾರ ದೆಹಲಿಯಲ್ಲಿ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಹಾಗೂ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ, ಚರ್ಚೆ ನಡೆಸಿದರು.

ಸಿದ್ದರಾಮಯ್ಯ ಸಂಪುಟದ ಮತ್ತೋರ್ವ ಸಚಿವ ಮತ್ತು ರಾಜಣ್ಣ ಅವರ ಮೇಲೆ ಇಂತಹ ಯತ್ನ ನಡೆದಾಗ, ಆ ತಂಡದ ಕೆಲವರನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದಾಗ ಮಾಹಿತಿ ಮತ್ತು ದಾಖಲೆ ಲಭ್ಯವಾಗಿವೆ. ಇಷ್ಟಾದರೂ ಪಕ್ಷದ ವರಿಷ್ಠರು ಕೆಲವರ ರಕ್ಷಣೆಗೆ ಮುಂದಾಗಿದ್ದಾರೆ. ನಾನು ನಿನ್ನೆ ಪಕ್ಷದ ಕೆಲವು ನಾಯಕರ ಭೇಟಿ ಸಂದರ್ಭದಲ್ಲಿ ಅವರಿಗೂ ಎಲ್ಲವನ್ನೂ ವಿವರಿಸಿದ್ದೇನೆ.

ಇಷ್ಟಾದರೂ ಮುಖ್ಯಮಂತ್ರಿ ಅವರ ಮೇಲೆ ಉನ್ನತ ಮಟ್ಟದ ತನಿಖೆ ನಡೆಸದಂತೆ ದೆಹಲಿ ಮಟ್ಟದ ನಾಯಕರು ಒತ್ತಡ ಹೇರಿದ್ದಾರೆ. ಇದಕ್ಕೆ ನಮ್ಮ ವಿರೋಧವಿದೆ, ಅದಕ್ಕೆ ನಾವು ಅವಕಾಶವನ್ನೂ ನೀಡುವುದಿಲ್ಲ.

ಹನಿಟ್ರ್ಯಾಪ್ ಬೆದರಿಕೆಗಳಿಗೆ ಇತಿಶ್ರೀ ಹಾಡಲು ನಾನು, ರಾಜಣ್ಣ ಸೇರಿದಂತೆ ಕೆಲವು ಮುಖಂಡರು ರಾಜಕೀಯವಾಗಿ ಎಂತಹ ನಿರ್ಧಾರ ಕೈಗೊಳ್ಳಲೂ ಸಿದ್ಧ ಎಂದಿದ್ದಾರೆ. ನಿಮ್ಮ ಕುಟುಂಬವನ್ನೇ ಟಾರ್ಗೆಟ್ ಮಾಡಿರುವ ನಾಯಕರ ವಿರುದ್ಧ ನೀವು ರಾಜಕೀಯವಾಗಿ ನಡೆಸುತ್ತಿರುವ ಹೋರಾಟಕ್ಕೆ ನಮ್ಮ ಬೆಂಬಲವಿದೆ ಎಂದು ಸತೀಶ್ ಜಾರಕಿಹೊಳಿ ಅವರು ಕುಮಾರ ಸ್ವಾಮಿ ಅವರಿಗೆ ತಿಳಿಸಿದ್ದಾರೆ.

ಭೇಟಿ, ಮಾತುಕತೆ ನಂತರ ಕುಮಾರಸ್ವಾಮಿ ಮತ್ತು ಜಾರಕಿಹೊಳಿ ಸಂಸತ್ ಭವನದ ಆವರಣದಲ್ಲೇ ಬಿಜೆಪಿಯ ಇಬ್ಬರು ಪ್ರಭಾವೀ ಸಚಿವರನ್ನು ಭೇಟಿ ಮಾಡಿದ್ದು, ಇದರ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ. ಈ ಮಧ್ಯೆ ಸತೀಶ್ ಜಾರಕಿಹೊಳಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿ ರಾಜ್ಯ ರಾಜಕೀಯದಲ್ಲಿನ ಬೆಳವಣಿಗೆಗಳ ಬಗ್ಗೆ ಚರ್ಚಿಸಿದ್ದಾರೆ. ಇದೇ ವೇಳೆ ಪತ್ರಕರ್ತರೊಂದಿಗೆ ಮಾತನಾಡಿ, ನಾಳೆ ಬೆಂಗಳೂರಿಗೆ ವಾಪಸ್ಸಾಗಿ ದೇವೇಗೌಡರು, ಕುಮಾರಸ್ವಾಮಿ ಭೇಟಿ ಹಾಗೂ ಇನ್ನಿತರ ವಿಷಯಗಳನ್ನು ಪ್ರಮುಖ ನಾಯಕರೊಂದಿಗೆ ಚರ್ಚಿಸುವುದಾಗಿ ಹೇಳಿದ್ದಾರೆ.

ಸತೀಶ್ ಜಾರಕಿಹೊಳಿಗೆ ಸಚಿವ ಹೆಚ್.ಸಿ. ಮಹದೇವಪ್ಪ ಪರೋಕ್ಷ ಕಿವಿಮಾತು

ಬೆಂಗಳೂರು, ಮಾ.26(ಕೆಎಂಶಿ)– ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ದೆಹಲಿಯಲ್ಲಿಂದು ಬಿಜೆಪಿ ಹಾಗೂ ಜೆಡಿಎಸ್‌ನ ಮುಖಂಡರನ್ನು ಭೇಟಿ ಮಾಡಿದ ಬೆನ್ನಲ್ಲೇ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಪರೋಕ್ಷವಾಗಿ ಕಿವಿಮಾತು ಹೇಳಿದ್ದಾರೆ.



ಡಾ.ಅಂಬೇಡ್ಕರ್ ಅವರ ಹಿತವಚನವೊಂದನ್ನು ಭಾವಚಿತ್ರದೊಂದಿಗೆ ಟ್ವೀಟ್ ಮಾಡಿರುವ ಮಹದೇವಪ್ಪ, ಯಾರಾದರು ನಿಮ್ಮನ್ನು ಅವರ ಅರಮನೆಗೆ ಆಹ್ವಾನಿಸಿದಾಗ, ನಿಮಗೆ ಇಷ್ಟವಾದರೆ ಹೋಗಿ. ಆದರೆ, ಅದಕ್ಕಾಗಿ ನಿಮ್ಮ ಗುಡಿಸಲಿಗೆ ಬೆಂಕಿ ಹಚ್ಚಿ ಹೋಗಬೇಡಿ. ಒಂದು ವೇಳೆ ಆ ದೊರೆಯು ನಿಮ್ಮ ಜೊತೆಗೆ ಜಗಳವಾಡಿ ನಿಮ್ಮನ್ನು ಅವನ ಅರಮನೆಯಿಂದ ಹೊರಹಾಕಿದರೆ, ಆಗ ನೀವು ಎಲ್ಲಿಗೆ ಹೋಗುತ್ತೀರಿ. ನೀವು ನಿಮ್ಮನ್ನೇ ಮಾರಾಟ ಮಾಡಿಕೊಳ್ಳುವುದಾದರೆ ಮಾಡಿಕೊಳ್ಳಿ, ಆದರೆ, ಅದಕ್ಕಾಗಿ ನಿಮ್ಮದೇ ಸಂಘಟನೆಯನ್ನು ನಾಶ ಮಾಡಬೇಡಿ ಎಂಬ ಡಾ.ಅಂಬೇಡ್ಕರ್ ಅವರ ಹಿತವಚನ ಹಂಚಿಕೊಂಡಿದ್ದಾರೆ.

ಈ ಟ್ವೀಟ್ ಯಾರಿಗಾಗಿ ಎಂದು ಹೇಳಿಲ್ಲ, ಆದರೆ, ಜಾರಕಿಹೊಳಿ ಅವರ ಇಂದಿನ ದೆಹಲಿ ಭೇಟಿ ನಂತರ ಈ ಸಂದೇಶ ಹಾಕಿದ್ದಾರೆ.

ರಾಜ್ಯದಲ್ಲಿ ಏ.1 ರಿಂದ ಶೇ.5ರಷ್ಟು ಟೋಲ್ ಸುಂಕ ಏರಿಕೆ

ಹೊಸ ಟೋಲ್ ನೀತಿ ಶೀಘ್ರವೇ ಜಾರಿ

ಬೆಂಗಳೂರು, ಮಾ.26– ಏಪ್ರಿಲ್ 1 ರಿಂದ ಕರ್ನಾಟಕದಾದ್ಯಂತ ಟೋಲ್ ಸುಂಕ ಶೇ.3ರಿಂದ 5ರಷ್ಟು ಹೆಚ್ಚಾಗಲಿದೆ. ಈ ನಿಟ್ಟಿನಲ್ಲಿ ಮುಂದಿನ ಕೆಲವೇ ದಿನಗಳಲ್ಲಿ ಅಧಿಸೂಚನೆ ಹೊರಡಿಸಲಾಗುವುದು ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮೂಲಗಳು ತಿಳಿಸಿವೆ.

ಬೆಲೆ ಏರಿಕೆ, ಹಣದುಬ್ಬರಕ್ಕೆ ಅನುಗುಣವಾಗಿ ವಾರ್ಷಿಕವಾಗಿ ಮಾಡುವ ದರ ಪರಿಷ್ಕರಣೆ ಪ್ರಕ್ರಿಯೆಯ ಭಾಗವಾಗಿ ಈಗ ಟೋಲ್ ಸುಂಕ ಹೆಚ್ಚಳಕ್ಕೆ ಎನ್‌ಎಚ್‌ಎಐ ಮುಂದಾಗಿದೆ. ರಾಜ್ಯದ 66 ಟೋಲ್ ಪ್ಲಾಜಾಗಳಲ್ಲಿ ಹೆಚ್ಚಿನ ಟೋಲ್‌ಗಳಿಗೆ ■ 6ನೇ ಪುಟಕ್ಕೆ



ಬಿಜೆಪಿಯಿಂದ ಬಸನಗೌಡ ಪಾಟೀಲ್ ಯತ್ನಾಳ್ ಆರು ವರ್ಷ ಉಚ್ಚಾಟನೆ

ನವದೆಹಲಿ, ಮಾ26– ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಅವರ ಪುತ್ರ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ವಿರುದ್ಧ ನಿರಂತರವಾಗಿ ಬಹಿರಂಗವಾಗಿಯೇ ವಾಗ್ದಾಳಿ ನಡೆಸುತ್ತಿದ್ದ ವಿಜಯಪುರ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ವಿರುದ್ಧ ಕೊನೆಗೂ ಹೈಕಮಾಂಡ್ ಕ್ರಮ ಕೈಗೊಂಡಿದೆ.

ಯತ್ನಾಳ್ ಅವರನ್ನು ಆರು ವರ್ಷಗಳ ಕಾಲ ಪಕ್ಷದಿಂದ ಉಚ್ಚಾಟಿಸಿ ಬಿಜೆಪಿ ಕೇಂದ್ರ ಶಿಸ್ತು ಸಮಿತಿ ಬುಧವಾರ ಆದೇಶ ಹೊರಡಿಸಿದೆ. ಈ ಮೂಲಕ ರಾಜ್ಯ ಬಿಜೆಪಿಯಲ್ಲಿನ ಬಣಬಡಿದಾಟಕ್ಕೆ ಕೊನೆಗೂ ಹೈಕಮಾಂಡ್ ಬ್ರೇಕ್ ಹಾಕಿದೆ.

ಪಕ್ಷದ ಕೇಂದ್ರ ಶಿಸ್ತು ಸಮಿತಿಯು 2025 ಫೆಬ್ರವರಿ 10 ರಂದು ನೀಡಿದ್ದ ಶೋಕಾಸ್ ನೋಟಿಸ್‌ಗೆ ನಿಮ್ಮ ಪ್ರತಿಕ್ರಿಯೆಯನ್ನು ಪರಿಗಣಿಸಿದೆ ಮತ್ತು ಹಿಂದಿನ ಶೋಕಾಸ್ ನೋಟಿಸ್‌ಗಳಿಗೆ ಪ್ರತಿಕ್ರಿಯೆಯಾಗಿ ಉತ್ತಮ ನಡವಳಿಕೆ ಮತ್ತು ನಡವಳಿಕೆಯ ಭರವಸೆಗಳನ್ನು ನೀಡಿದ್ದರೂ ಸಹ, ನೀವು ಪಕ್ಷದ ಶಿಸ್ತನ್ನು ಪದೇ ಪದೇ ಉಲ್ಲಂಘಿಸುತ್ತಿರುವುದನ್ನು



ಗಂಭೀರವಾಗಿ ಪರಿಗಣಿಸಿದೆ. ಆದ್ದರಿಂದ, ನಿಮ್ಮನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ತಕ್ಷಣದಿಂದ ಜಾರಿಗೆ ಬರುವಂತೆ 6 ವರ್ಷಗಳ ಅವಧಿಗೆ ಉಚ್ಚಾಟಿಸಲು ನಿರ್ಧರಿಸಲಾಗಿದೆ. ಹಾಗೇ ನೀವು ಇಲ್ಲಿಯವರೆಗೆ ಹೊಂದಿದ್ದ ಪಕ್ಷದ ಯಾವುದೇ ಹುದ್ದೆಯಿಂದ ನಿಮ್ಮನ್ನು ತೆಗೆದುಹಾಕಲಾಗಿದೆ ಎಂದು ಬಿಜೆಪಿ ಕೇಂದ್ರ ಶಿಸ್ತು ಸಮಿತಿಯ ಕಾರ್ಯದರ್ಶಿ ಓಂ ಪಾಠಕ್ ಅವರು ಹೊರಡಿಸಿರುವ ಆದೇಶದಲ್ಲಿ ಉಲ್ಲೇಖಿಸಲಾಗಿದೆ ಉಚ್ಚಾಟನೆ ಆದೇಶ ಹೊರಬೀಳುವ ವೇಳೆ ಬಸನಗೌಡ ■ 6ನೇ ಪುಟಕ್ಕೆ

ಸತ್ಯವಂತರಿಗಿದು ಕಾಲವಲ್ಲ

ಬೆಂಗಳೂರು, ಮಾ.26– ಬಿಜೆಪಿಯಿಂದ ತಮ್ಮನ್ನು 6 ವರ್ಷ ಉಚ್ಚಾಟನೆ ಮಾಡಿದ ಬೆನ್ನಲ್ಲೇ ಪಕ್ಷದ ನಿರ್ಧಾರದ ಕುರಿತು ಯತ್ನಾಳ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಉಚ್ಚಾಟನೆ ಕುರಿತು ಟ್ವೀಟ್ ಮೂಲಕ ಶಾಸಕ ಯತ್ನಾಳ್ ಪ್ರತಿಕ್ರಿಯೆ ನೀಡಿದ್ದು, 'ಸತ್ಯವಂತರಿಗಿದು ಕಾಲವಲ್ಲ.. ದುಷ್ಟಜನರಿಗೆ ಸುಭಿಕ್ಷಕಾಲ... ಉಪಕಾರ ಮಾಡಿದರೆ ಅಪಕರಿಸುವ ಕಾಲ... ಸಕಲವು ತಿಳಿದವಗೆ ದುರ್ಭಿಕ್ಷ ಕಾಲ... ಧರ್ಮ ಮಾಡುವವರಿಗೆ ನಿರ್ಮೂಲವಾಗುವ ಕಾಲ... ಕರ್ಮಿ ಪಾತಕರಿಗೆ ಬಹು ಸೌಖ್ಯಕಾಲ... ಎಂಬ ಪುರಂದರದಾಸರ ಸಾಲುಗಳನ್ನು ಬರೆದು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ವಂಶಪಾರಂಪರ್ಯ ರಾಜಕೀಯ, ಭ್ರಷ್ಟಾಚಾರ, ಪಕ್ಷದೊಳಗಿನ ಸುಧಾರಣೆಗಳ ವಿರುದ್ಧ ■ 6ನೇ ಪುಟಕ್ಕೆ

ಸಹಕಾರ ಸಂಘದಲ್ಲಿ ರೈತರಿಗೆ ಸಾಲ ನೀಡದೇ ಅನ್ಯಾಯ: ಎಂಸಿಡಿಸಿಸಿ ಬ್ಯಾಂಕ್ ಮುಂದೆ

ಶಾಸಕ ಜಿ.ಡಿ.ಹರೀಶ್‌ಗೌಡ ನೇತೃತ್ವದಲ್ಲಿ ಭಾರಿ ಪ್ರತಿಭಟನೆ

- ಸಾಲ ತೀರಿಸಿದ್ದರೂ ನೋಟಿಸ್ ನೀಡುತಿರುವ ಅಧಿಕಾರಿಗಳು
- ನನ್ನನ್ನು ತಡೆಯಲು ಚುನಾವಣೆ ನಡೆಸದೆ ಆಡಳಿತಾಧಿಕಾರಿ ನೇಮಕ
- ರೈತರಿಗೆ ನ್ಯಾಯ ಕೊಡಿಸಿ, ಸಹಕಾರ ಸಂಘದ ಕಡೆ ತಲೆ ಹಾಕಲ್ಲ



ಮೈಸೂರು ಜಿಲ್ಲೆ ಹುಣಸೂರು ಸೇರಿದಂತೆ ಬಹುತೇಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ರೈತರಿಗೆ ಸಾಲ ನೀಡದೇ ಅನ್ಯಾಯ ಮಾಡುತ್ತಿರುವುದನ್ನು ಖಂಡಿಸಿ, ಶಾಸಕ ಜಿ.ಡಿ.ಹರೀಶ್‌ಗೌಡ ನೇತೃತ್ವದಲ್ಲಿ ಅಶೋಕ ರಸ್ತೆಯಲ್ಲಿರುವ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಮುಂದೆ ರೈತರು, ಸಹಕಾರ ಬ್ಯಾಂಕ್ ಸದಸ್ಯರು ಪ್ರತಿಭಟನೆ ನಡೆಸಿದರು.

ಮೈಸೂರು, ಮಾ.26(ಜಿಎ)– ಮೈಸೂರು ಜಿಲ್ಲೆ ಹುಣಸೂರು ಸೇರಿದಂತೆ ಬಹುತೇಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಸಾಲ ಮರು ಪಾವತಿ ಮಾಡಿರುವ ರೈತರಿಗೆ ಸಾಲ ನೀಡದೇ ಅನ್ಯಾಯ ಮಾಡುತ್ತಿರುವುದನ್ನು ಖಂಡಿಸಿ, ಶಾಸಕ ಜಿ.ಡಿ.ಹರೀಶ್‌ಗೌಡ ನೇತೃತ್ವದಲ್ಲಿ ಮೈಸೂರಿನ ಅಶೋಕ ರಸ್ತೆಯಲ್ಲಿರುವ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ (ಎಂಸಿಡಿಸಿಸಿ ಬ್ಯಾಂಕ್) ಮುಂದೆ ರೈತರು, ಸಹಕಾರ ಬ್ಯಾಂಕ್ ಸದಸ್ಯರು ಪ್ರತಿಭಟನೆ ನಡೆಸಿದರು.

> ರಾಜ್ಯ ಸರ್ಕಾರ ಆಡಳಿತ ಹಳಿ ತಪ್ಪಿದ್ದು, ಅಭಿವೃದ್ಧಿ ಕಡೆಗೆ ಗಮನವಿಲ್ಲ. ಮುಖ್ಯಮಂತ್ರಿ ಸ್ಥಾನ, ಹನಿಟ್ರ್ಯಾಪ್ ಬಗ್ಗೆ ಚಿಂತೆ ಹೆಚ್ಚಾಗಿದೆ. ಅಧಿವೇಶನದಲ್ಲಿ ಸಮಸ್ಯೆಗಳ ಬಗೆ ಚರ್ಚೆ ಆಗುತ್ತಿಲ್ಲ. ಸಾರ್ವಜನಿಕರ ಹಣ ಪೋಲು ಮಾಡುತ್ತಿದ್ದಾರೆ. ಕಳೆದ ಐದು ಬಾರಿ ನಡೆದ ಅಧಿವೇಶನದಲ್ಲಿ ರೈತರ ಪರವಾಗಿ ಕೇಳಿದ ಪ್ರಶ್ನೆಗೆ ಸಹಕಾರ ಸಚಿವರು ಏನೂ ಉತ್ತರ ನೀಡಿಲ್ಲ.
> –ಜಿ.ಡಿ. ಹರೀಶ್‌ಗೌಡ

ಬ್ಯಾಂಕ್ ಮುಂಭಾಗ ಕುಳಿತ ಶಾಸಕ ಜಿ.ಡಿ. ಹರೀಶ್‌ಗೌಡ, ಕೃಷಿ ಪತ್ತಿನ ಸಹಕಾರಿ ಸಂಘಗಳ ಸದಸ್ಯರು, ನೂರಾರು ರೈತರು ರಾಜ್ಯ ಸರ್ಕಾರದ ವಿರುದ್ಧ ವಿವಿಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ನಂತರ ಶಾಸಕ ಜಿ.ಡಿ.ಹರೀಶ್‌ಗೌಡ ಮಾತನಾಡಿ, ಹುಣಸೂರು ತಾಲೂಕಿನ ಸಹಕಾರ ಸಂಘದಲ್ಲಿ ರೈತರಿಗೆ ಆಗುತ್ತಿರುವ ಅನ್ಯಾಯ ವಿರೋಧಿಸಿ ಪ್ರತಿಭಟನೆ ಮಾಡಲಾಗುತ್ತಿದೆ. ಧರ್ಮಾಪುರ, ಹನಗೂಡಿನ ಸಹಕಾರ ಬ್ಯಾಂಕ್‌ನಲ್ಲಿ ಸಾಲ ಪಡೆದಿದ್ದ ರೈತರು ಕಳೆದ 6 ತಿಂಗಳ ಹಿಂದೆ ಕೋಟ್ಯಾಂತರ ರೂ. ಮರು ಪಾವತಿ ಮಾಡಿದ್ದಾರೆ. ಆದರೆ ಅವರಿಗೆ ಮರು ಸಾಲ ನೀಡುತ್ತಿಲ್ಲ. ಇದರಿಂದ ರೈತರು ಶೇ.5ರಷ್ಟು ಬಡ್ಡಿ ದರದಲ್ಲಿ ಖಾಸಗಿಯಾಗಿ ಸಾಲ ಪಡೆದು ಸಾಲಗಾರರಾಗುತ್ತಿದ್ದಾರೆ. ಅಧಿಕಾರಿಗಳ ಬಳಿ ಚರ್ಚಿಸಿ, ಮನವಿ ಮಾಡಲಾಗಿದೆ. ಆದರೆ ಅವರು ಯಾವುದಕ್ಕೂ ಸ್ಪಂದಿಸುತ್ತಿಲ್ಲ. ■ 6ನೇ ಪುಟಕ್ಕೆ



ನಕ್ಕರೆ ಅದೇ ಸ್ವರ್ಗ

ಪ್ರಶ್ನೆ : 1983ರ ಕ್ರಿಕೆಟ್ ವಿಶ್ವಕಪ್ ಯಾರಿಗೆ ಸಿಕ್ತು?
ಉತ್ತರ : ಗೆದ್ದವರಿಗೆ

ಮೈಸೂರು ಮಿತ್ರ

ಗುರುವಾರ, 27 ಮಾರ್ಚ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ನಾವು ಬಯಸಿದಂತೆ ಬದುಕುವ ಸ್ವಾತಂತ್ರ್ಯ ಯಾವತ್ತೂ ಭಯಾನಕ ಹೋರಾಟದ ಫಲವೇ ಹೊರತು ಸುಲಭವಾಗಿ ಸಿಕ್ಕುವಂತಹದ್ದಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕುಳಿತು ತಿಂದರೆ ಕುಡಿಕೆ ಹೊನ್ನು ಸಾಲದು

ನಿಮ್ಮ ಪತ್ರಗಳು

ಹಸಿರು ಭೂಮಿಯನ್ನು ಉಳಿಸಿ

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ಗ್ರಾಮಾಂತರ ಪ್ರದೇಶಗಳು ನಗರ ಪ್ರದೇಶಕ್ಕೆ ಸೇರುತ್ತಿರುವುದು ಸರ್ವೇ ಸಾಮಾನ್ಯವಾಗಿದೆ. ದಿನ ಕಳೆದಂತೆ ನಗರ ಪ್ರದೇಶಗಳು ಬೃಹದಾಕಾರವಾಗಿ, ವೇಗವಾಗಿ ಬೆಳೆಯುತ್ತಿರುವುದು ಕಂಡುಬರುತ್ತಿದೆ. ಇದಕ್ಕೆ ಪ್ರಮುಖ ಕಾರಣ ಅತಿಯಾದ ನಗರೀಕರಣ. ಅಭಿವೃದ್ಧಿಯ ಹೆಸರಿನಲ್ಲಿ ದಿನದಿಂದ ದಿನಕ್ಕೆ ಹಸಿರು ಭೂಮಿ ಅಥವಾ ಬೆಳೆ ಬೆಳೆಯುವ ಪ್ರದೇಶವನ್ನು ರಾಷ್ಟ್ರೀಯ ಹೆದ್ದಾರಿ, ಕೈಗಾರಿಕಾಭಿವೃದ್ಧಿ, ಬಡಾವಣೆ ನಿರ್ಮಾಣ, ವಿಮಾನ ನಿಲ್ದಾಣ ಅಥವಾ ರನ್ ವೇ ವಿಸ್ತರಣೆ ಹೀಗೆ ಹಲವಾರು ಕಾರಣಗಳಿಂದಾಗಿ ಸರ್ಕಾರವು ರೈತರಿಂದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುತ್ತಿದೆ. ಹೀಗೆ ಅಭಿವೃದ್ಧಿಪಡಿಸುತ್ತಾ ಹೋದಂತೆ ನಗರಗಳು ಮುಂದೆ ಮುಂದೆ ಸಾಗುತ್ತಾ ಎಲ್ಲಿ ನೋಡಿದರೂ ಬಡಾವಣೆಗಳೇ ಹೊರತು ಬೆಳೆ ಬೆಳೆಯುವ ಪ್ರದೇಶಗಳೇ ಇರುವುದಿಲ್ಲ. ದಿನ ಕಳೆದಂತೆ ಬೆಳೆ ಪ್ರದೇಶಗಳು ಕ್ಷೀಣಿಸುತ್ತಿದ್ದು ಮುಂದೊಂದು ದಿನ ಬೆಳೆ ಪ್ರದೇಶವಿಲ್ಲದೆ ಮನುಕುಲಕ್ಕೆ ಬೇಕಾದ ಆಹಾರ ಪದಾರ್ಥಗಳನ್ನು ಹೊರದೇಶದಿಂದ ಆಮದು ಮಾಡಿಕೊಳ್ಳುವ ಅಥವಾ ರಾಸಾಯನಿಕವಾಗಿ ನಮ್ಮ ದೇಶದಲ್ಲಿಯೇ ತಯಾರಿಸುವ ಪರಿಸ್ಥಿತಿ ಬರುವ ಮುನ್ನ ಸರ್ಕಾರವು ಎಚ್ಚೆತ್ತುಕೊಂಡು ಹಸಿರು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳದೆ ಅದನ್ನು ಉಳಿಸಿ ಕೃಷಿ ಪದಾರ್ಥಗಳಿಗೆ ಉತ್ತಮ ಬೆಲೆಯನ್ನು ನಿಗದಿಪಡಿಸಿ ಗ್ರಾಮೀಣ ಭಾಗದ ಯುವಕರನ್ನು ಕೃಷಿ ಕಾರ್ಯಗಳಿಗೆ ಉತ್ತೇಜಿಸಿದರೆ ಗ್ರಾಮದ ಜನರು ನಗರಗಳಿಗೆ ದಿನದ ಕಾಯಕಕ್ಕಾಗಿ ವಲಸೆ ಬರುವುದು ತಪ್ಪುತ್ತದೆ. ಜೊತೆಗೆ ನಗರಗಳಿಗೂ ಒತ್ತಡ ಕಡಿಮೆಯಾಗುತ್ತದೆ. ಪ್ರಮುಖವಾಗಿ ರೈತರು ತಮ್ಮ ಭೂಮಿಯನ್ನು ಹಲವಾರು ವರ್ಷಗಳ ಹಿಂದೆ ಮಾರಾಟ ಮಾಡಿ ಇಂದು ಆ ಭೂಮಿಗೆ ಭದ್ರತಾ ಸಿಬ್ಬಂದಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವುದು ವಿಷಾದನೀಯ ಸಂಗತಿ. ಹೀಗೆ ಹಲವಾರು ರೈತರು ತಮ್ಮ ಸ್ವಗ್ರಾಮಗಳನ್ನು ತೊರೆಯುತ್ತಿರುವುದು ತಮ್ಮ ಕೃಷಿ ಬೆಳೆಗಳಿಗೆ ಬೆಂಬಲ ಬೆಲೆ ಇಲ್ಲ ಎಂಬ ಕೂಗು ಕೂಡ ಒಂದು.

'ಭಾರತವು ಹಳ್ಳಿಗಳ ನಾಡು, ರೈತ ದೇಶದ ಬೆನ್ನೆಲುಬು' ಎಂಬುದು ಉಳಿಯಬೇಕು ಹಸಿರು ಭೂಮಿ ಇದ್ದರೆ ರೈತ, ಗ್ರಾಮೀಣ ಪ್ರದೇಶಗಳು ಉಳಿದಂತೆ. ಹಾಗಾಗಿ ಸರ್ಕಾರವು ಹಸಿರು ಭೂಮಿಯನ್ನು ಉಳಿಸಿ ಬೆಳೆಸಲಿ ಎಂಬುದು ನನ್ನ ಆಶಯ.

–ಪ್ರದೀಪ್, ಯರಗನಹಳ್ಳಿ, ಮೈಸೂರು

ನೀರಿನ ಪೈಪ್‌ಲೈನ್ ದುರಸ್ತಿಗೊಳಿಸಿ



ಮಾನ್ಯರೆ

ಮೈಸೂರಿನ ಜಯನಗರದಿಂದ ಚಿನ್ನಗಿರಿಕೊಪ್ಪಲಿಗೆ ಹೋಗುವ ರಸ್ತೆಯಲ್ಲಿ ಕುಡಿಯುವ ನೀರಿನ ಪೈಪ್‌ಲೈನ್ ಹಾದು ಹೋಗಿದ್ದು, ಇದು ಹಲವಾರು ದಿನಗಳ ಹಿಂದೆಯೇ ಒಡೆದು ನೀರು ಸೋರಿಕೆಯಾಗುತ್ತಿದೆ. ಜೊತೆಗೆ ನೀರು ರಸ್ತೆಯಲ್ಲಿ ನಿಂತು ರಸ್ತೆಯೂ ಹಾಳಾಗುತ್ತಿದೆ. ಹನಿ.. ಹನಿ ನೀರೂ ಅಮೂಲ್ಯ, ಇದು ಜೀವಜಲ, ನೀರನ್ನು ಮಿತವಾಗಿ ಬಳಸಿ ಎಂದು ಮಾರುದ್ದ ಭಾಷಣ ಬಿಗಿಯುವ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಎಚ್ಚೆತ್ತು ಅತೀ ತುರ್ತಾಗಿ ನೀರಿನ ಪೈಪ್‌ಲೈನ್ ದುರಸ್ತಿಗೊಳಿಸಿ ನೀರು ಪೋಲಾಗುವುದನ್ನು ತಡೆಯಬೇಕಿದೆ.

–ಬಿ. ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ಕೆ.ಎಸ್.ಅಶ್ವಥ್ ಜನ್ಮಶತಾಬ್ಧಿ ಸ್ಮರಣೀಯ

ಮಾನ್ಯರೆ,

ಮಾರ್ಚ್ 25 ರಂದು ಕಲಾಮಂದಿರದಲ್ಲಿ ಹಿರಿಯ ನಟ ಕೆ.ಎಸ್.ಅಶ್ವಥ್ ಅವರ ಜನ್ಮ ಶತಾಬ್ಧಿ ಆಚರಿಸಲಾಯಿತು. ಅಶ್ವಥ್ ಅವರು ಒಬ್ಬ ಅದ್ಭುತ ಕಲಾವಿದ ಅಂತ ಎಲ್ಲರಿಗೂ ಗೊತ್ತು.ಅದಲ್ಲದೇ ಅವರು ಎಷ್ಟು ಪ್ರಾಮಾಣಿಕರು, ವಿನಯವಂತರು, ಸ್ನೇಹ ಜೀವಿ, ಸರಳತೆಯ ಸಾಕಾರಮೂರ್ತಿ ಆಗಿದ್ದರು ಎಂಬುದಾಗಿ ಈ ಕಾರ್ಯಕ್ರಮಕ್ಕೆ ಬಂದ ಅವರನ್ನು ಹತ್ತಿರದಿಂದ ನೋಡಿದ ಪ್ರಣಯರಾಜ ಶ್ರೀನಾಥ್, ದೊಡ್ಡಣ್ಣ, ಕುಮಾರ್ ಬಂಗಾರಪ್ಪ, ಗಿರಿಜಾ ಲೋಕೇಶ್ ಮುಂತಾದವರು ಕೆಲವು ಉದಾಹರಣೆಯೊಂದಿಗೆ ಹಂಚಿಕೊಂಡರು. ಇಂದಿನ ಕಲಾವಿದರು, ಯುವ ಜನಾಂಗ ಚಾಮಯ್ಯ ಮೇಷ್ಟ್ರು ಅಂತವರ ಬಗ್ಗೆ ಕೇಳಿ ತಿಳಿದುಕೊಂಡು ಅಳವಡಿಸಿ ಕೊಳ್ಳುವುದು ಸಾಕಷ್ಟಿದೆ ಎನಿಸಿತು. ಅತ್ಯುತ್ತಮ ಕಲಾವಿದರೊಬ್ಬರಿಗೆ ಅವರ ಜನ್ಮ ಶತಾಬ್ಧಿ ಆಚರಿಸುವುದರ ಮೂಲಕ ಗೌರವ ಸಲ್ಲಿಸಿದ ಅವರ ಕುಟುಂಬದವರಿಗೆ, ನಾಗರಾಜ ಭೈರಿ ಹಾಗೂ ಇದಕ್ಕೆ ಕಾರಣೀಕರ್ತರಾದ ಎಲ್ಲರಿಗೂ ಅಭಿನಂದನೆಗಳು.

–ರಾಘವೇಂದ್ರ ಜೋಯಿಸ್, ಮೈಸೂರು

ಒಳಚರಂಡಿ ವ್ಯವಸ್ಥೆ ಕೇವಲ ಬಿಲ್‌ಗೆ ಮಾತ್ರ ಸೀಮಿತವೇ..!

ಮಾನ್ಯರೆ,

ಮೈಸೂರಿನ ಕೆಲವು ಬಡಾವಣೆಗಳಲ್ಲಿ ಒಳಚರಂಡಿ ವ್ಯವಸ್ಥೆಯೇ ಇಲ್ಲದಿದ್ರೂ ನೀರಿನ ಶುಲ್ಕದ ಜೊತೆ ಒಳಚರಂಡಿ ಶುಲ್ಕ ಮಾತ್ರ ಕಟ್ಟಬೇಕು. ಸಂಬಂಧಪಟ್ಟ ಅಧಿಕಾರಿಗಳಿಗೆ ಒಳಚರಂಡಿ ವ್ಯವಸ್ಥೆ ಬೇಡಿಕೆ ಇಟ್ಟರೂ ಏನು ಪ್ರಯೋಜನವಿಲ್ಲ. ಮಳೆಗಾಲದಲ್ಲಿ ಮಳೆ ಬಂತೆಂದರೆ ರಸ್ತೆಯೆಲ್ಲಾ ಕೆರೆಯಂತಾಗುತ್ತದೆ. ದೂರು ಕೊಟ್ರೆ ತೇಪೆ ಹಾಕೋದಷ್ಟೇ. ಹಾಗಾದ್ರೆ ಶುಲ್ಕ ಯಾತಕ್ಕೆ ಕಟ್ಟಬೇಕು ಸ್ವಾಮಿ.

– ಸತೀಶ್, ಮೈಸೂರು.

ಸಕಾಲಿಕ



ಆರ್.ಪಿ. ಜಗದೀಶ್
ಹಿರಿಯ ಪತ್ರಕರ್ತರು,


ದಿಗ್ಮೂಢರಾಗಿರುವ ರಾಜ್ಯದ ಮತದಾರ ಪ್ರಭುಗಳು



ಸಿದ್ದರಾಮಯ್ಯ



ಡಿ.ಕೆ.ಶಿವಕುಮಾರ್



ಹೆಚ್.ಡಿ.ದೇವೇಗೌಡ




ಹೆಚ್.ಡಿ.ಕುಮಾರಸ್ವಾಮಿ



ಹೆಚ್.ಡಿ.ರೇವಣ್ಣ



ಸತೀಶ್ ಜಾರಕಿಹೊಳಿ



ಬಿ.ಎಸ್.ಯಡಿಯೂರಪ್ಪ



ಯತ್ನಾಳ್

ರಾಜ್ಯದಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಸಂವಿಧಾನಾತ್ಮಕ/ ಕಾನೂನುಬದ್ಧವಾಗಿ ಬಹುಮತವುಳ್ಳ ಸರ್ಕಾರವನ್ನು ವಜಾ ಮಾಡುವುದು ಅಷ್ಟು ಸುಲಭ ಸಾಧ್ಯವಲ್ಲವಾದರೂ, ಪ್ರಜಾಪ್ರಭುತ್ವದಲ್ಲಿ ಜನಾಭಿಪ್ರಾಯ ಪರಿಗಣಿತವಾದರೆ ರಾಜ್ಯದಲ್ಲಿನ ಕಾಂಗ್ರೆಸ್ ಸರ್ಕಾರದ ಉಳಿದ ಅವಧಿಗೆ ರಾಷ್ಟ್ರಪತಿ ಆಡಳಿತ ಜಾರಿ ಮಾಡಲು ಇದು ಸಕಾಲ ಎಂದೆನಿಸದೇ ಇರದು. ಆಗಲಾದರೂ, ಇವರನ್ನು ಅಧಿಕಾರಕ್ಕೆ ತಂದ ಮತದಾರ ಪ್ರಭುಗಳು ನೆಮ್ಮದಿಯಿಂದ ನಿಟ್ಟುಸಿರು ಬಿಡುತ್ತಾರೆ.

> ಈ ಮೂರೂ ಪಕ್ಷಗಳ ರಾಜಕೀಯ ದೊಂಬರಾಟವನ್ನು ನೋಡಿಯೂ ಕಣ್ಮುಚ್ಚಿ ಕೂತಿರುವಂತಿರುವ ಕೇಂದ್ರ ಸರ್ಕಾರ ತಕ್ಷಣವೇ ಕರ್ನಾಟಕದ ವಿಚಾರದಲ್ಲಿ ಸೂಕ್ತ ನಿರ್ಧಾರ ಕೈಗೊಂಡರೆ ಜನರು ನೆಮ್ಮದಿಯಿಂದ ಬದುಕುವಂತೆ ಮಾಡಬಹುದೇನೋ. ಇಲ್ಲಿರುವ ಆಡಳಿತ ಮತ್ತು ವಿರೋಧ ಪಕ್ಷಗಳು 'ಒಡೆದ ಮನೆ'ಗಳಾಗಿವೆ. ಆಡಳಿತವಂತೂ ಬೀದಿಗೆ ಬಿದ್ದಿವೆ.

ಅಗ್ಗದ ಪ್ರಚಾರಕ್ಕಾಗಿ ಐದು ಗ್ಯಾರಂಟಿಗಳನ್ನು ಜಾರಿ ಮಾಡಲು ಹೋಗಿ ಜಾರಿ ಬಿದ್ದಿದೆ ಈ ಸರ್ಕಾರ. ಆಶ್ವಾಸನೆಗಳನ್ನು ಅನುಷ್ಠಾನಕ್ಕೂ ತರಲಾಗದೇ ಕಂಗಾಲಾಗಿ ಕಣ್ಣು–ಬಾಯಿ ಬಿಡುತ್ತಿರುವ ಕಾಂಗ್ರೆಸ್ ಸರ್ಕಾರ ಸವಕಲು ನಾಣ್ಯವಾಗಿ, ಚಲಾವಣೆಗೆ ಯೋಗ್ಯವಲ್ಲದಂತಾಗಿದೆ.

ಒಂದು ವೇಳೆ ರಾಷ್ಟ್ರಪತಿ ಆಡಳಿತ ಜಾರಿಯಾದರೆ ವಿಧಾನಮಂಡಲದ ಉಭಯ ಸದನಗಳ ಎಲ್ಲಾ ಶಾಸಕರ ಸರ್ವ ಸೌಲಭ್ಯಗಳಿಗೂ ಕತ್ತರಿ ಬಿದ್ದು, ಅದರಿಂದಲಾದರೂ ಸ್ವಲ್ಪ ಹಣ ಉಳಿತಾಯ ಆಗಬಹುದು. ಖಾಲಿಯಾದ ಖಜಾನೆಯನ್ನು 'ಕೈ'ಯಲ್ಲಿ ಹಿಡಿದು 'ಪಾಪರ್ ಚೀಟಿ' ಸರ್ಕಾರ ಎಂಬ ನಗೆಪಾಟಲಿಗೆ ಗುರಿಯಾಗಿದೆ. ಆದರೂ, ಸರ್ಕಾರ ಸಮೃದ್ಧವಾಗಿದೆ ಎನ್ನುವ ಪೋಸ್ ನೀಡಲು 'ಪೇಪರ್ ಟೈಗರ್'ನಂತೆ ಪ್ರಚಾರಕ್ಕಾಗಿ ಹಣದ ಹೊಳೆ ಹರಿಸುತ್ತಿದೆ. ಪ್ರಧಾನಿ ಮೋದಿ ಕಾಶಿಯಲ್ಲಿ ಗಂಗಾರತಿ ಮಾಡಿದರೆ ಇವರು ಬೆಂಗಳೂರು ಸಾಂಕಿ ಕೆರೆಯಲ್ಲಿ ಗಂಗಾರತಿ (ಕಾವೇರಿ) ಮಾಡಿ ಜನರ ಕಣ್ಣಿಗೆ ಮಣ್ಣೆರಚುವ ಕೆಲಸ ಮಾಡಿದ್ದಾರೆ. ಈ ಮೂಲಕ ನಗೆಪಾಟಲಿಗೆ ಗುರಿಯಾಗಿದ್ದಾರೆ.

ಹೆಣ್ಣು, ಹೊನ್ನು ಹಾಗೂ ಮಣ್ಣಿನ ಮೋಹಕ್ಕೆ ಬಿದ್ದು ಹಗರಣಗಳ ಸರಮಾಲೆ ಯನ್ನೇ ಮೈಗೆ ಸುತ್ತಿಕೊಂಡು 'ಶಾಪಗ್ರಸ್ಥ' ಸರ್ಕಾರವಾಗಿದೆ. ಸ್ವಪಕ್ಷೀಯರೇ ಸರ್ಕಾರದ ವಿರುದ್ಧ ತಿರುಗಿ ಬಿದ್ದಿದ್ದು, ಬಂಡೇಳುವ ಸ್ಥಿತಿ ತಲುಪಿದ್ದಾರೆ. ಕಾಂಗ್ರೆಸ್ ಹೈಕಮಾಂಡ್ ಅಂತೂ ಎಲ್ಲದಕ್ಕೂ ಮೀನಾ ಮೇಷ ಎಣಿಸುತ್ತಿದೆ.

ಹೈಕಮಾಂಡ್ ಕಂಗಾಲು

ಕಾಂಗ್ರೆಸ್ ಹೈಕಮಾಂಡ್ ಒಂದು ರೀತಿ ಅಡ್ಡ ಕತ್ತರಿಯಲ್ಲಿ ಸಿಲುಕಿಕೊಂಡಿದೆ. ಗುಂಪು, ಜಾತಿ ಕಟ್ಟಿಕೊಂಡು ಕುರ್ಚಿಗೆ ಅಂಟಿಕೊಂಡಿರುವ ಸಿದ್ದರಾಮಯ್ಯನವರನ್ನು ಗದ್ದುಗೆಯಿಂದ ಇಳಿಸುವುದು ಅಷ್ಟು ಸುಲಭವಲ್ಲ ಎಂಬುದು ಹೈಕಮಾಂಡ್‌ಗೆ ಮನದಟ್ಟಾಗಿದೆ. 'ಇಂದಿರಾಗಾಂಧಿ' ಕುಟುಂಬದ ಬಲಗೈ ಭಂಟನೆಂದೇ ಗುರುತಿಸಿಕೊಂಡಿರುವ ಹಾಗೂ ಎಂತಹ ಸಮಯದಲ್ಲೂ ಅವರ ಕಷ್ಟ–ಸುಖಕ್ಕಾಗುವ ಆಪತ್ಬಾಂಧವ ಡಿಕೆಶಿ 'ಕೈಬಿಡಲೂ' ಆಗದೇ 'ಸಿಎಂ ಪಟ್ಟ ಕೊಡಲೂ' ಆಗದೇ ಕಂಗಾಲಾಗಿ ಕೈಕಟ್ಟಿ ಕುಳಿತಿದೆ.

ಈ ನಡುವೆ ಪೈಪೋಟಿ ಎಂಬಂತೆ ಸಿಎಂ ಮತ್ತು ಡಿಸಿಎಂ, ದೆಹಲಿ ಯಾತ್ರೆ ನಡೆಯುತ್ತಲೇ ಇದೆ. ಇತ್ತ ಶಾಸಕರ ಒಳಜಗಳ, ಸಿಎಂ ಮತ್ತು ಡಿಸಿಎಂ ಬಣಗಳ ಪೈಪೋಟಿ ಸಭೆ, ಮತದಾರರಿಗೆ ಮೋಜು ನೀಡುತ್ತಿದೆ. ಮೊದಲು ಬಿಹಾರ ರಾಜ್ಯವನ್ನು ನಿದರ್ಶನ ನೀಡುತಿದ್ದ ಉತ್ತರ ಭಾರತದ ರಾಜ್ಯಗಳು, ಈಗ ಕರ್ನಾಟಕದತ್ತ 'ಕೈ' ಎತ್ತಿ ತೋರಿಸುವಂತಾಗಿದೆ. ಎಲ್ಲಾ ವಿಚಾರಗಳಲ್ಲೂ ಇದೊಂದು ಶಾಪಗ್ರಸ್ಥ ಸರ್ಕಾರ ಎನ್ನಿಸುತ್ತದೆ. ಇಷ್ಟೆಲ್ಲಾ ನಡೆಯುತ್ತಿದ್ದರೂ ರಾಜ್ಯದ ಎಂಪಿಗಳ ಮೌನ ಸೋಜಿಗ ತಂದಿದೆ.

ಪ್ರತಿಯೊಬ್ಬರ ಮೇಲೆ ಹಗರಣ

ಸಿದ್ದರಾಮಯ್ಯನವರ ಮೇಲಿರುವ ಮುಡಾ ಸೈಟ್ ಹಗರಣ ಅವರ ಹೆಸರಿಗೆ ಕಳಂಕ ತಂದಿದೆ. ಡಿಕೆಶಿ ಮೇಲೆ ಹಗರಣಗಳ ಸರಮಾಲೆಯೇ ಇದೆ. ಉಳಿದ ಕೆಲವರು ತಾವು ಸಿಎಂ ಮತ್ತು ಡಿಸಿಎಂಗೆ ಕಡಿಮೆಯೇನಿಲ್ಲ ಎಂಬಂತೆ ಒಂದಾದ ಮೇಲೆ ಒಂದರಂತೆ ಹಗರಣಗಳಲ್ಲಿ ಸಿಕ್ಕಿ ಹಾಕಿಕೊಂಡಿದ್ದಾರೆ.

ನಾನೇನು ಕಡಿಮೆ ಎಂಬಂತೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಮಕ್ಕಳು ಅದರಲ್ಲೂ ಹೆಚ್.ಡಿ.ರೇವಣ್ಣನವರ ಇಡೀ ಕುಟುಂಬ ಕೋರ್ಟ್, ಜೈಲು, ಬೇಲ್‌ನಲ್ಲೇ ಜೀವನ ನಡೆಸುತ್ತಿದ್ದಾರೆ.

ಇತ್ತ ಮಾಜಿ ಸಿಎಂ ಹಾಗೂ ಕೇಂದ್ರ ಮಂತ್ರಿಯಾಗಿರುವ ಹೆಚ್.ಡಿ.ಕುಮಾರಸ್ವಾಮಿ ಭೂ ಕಬಳಿಕೆ ವಿವಾದದಲ್ಲಿ ಸಿಕ್ಕಿ ಕೋರ್ಟ್ ಕಟಕಟೆಯಲ್ಲಿ ನಿಂತಿದ್ದಾರೆ. ಛಲಬಿಡದ ತ್ರಿವಿಕ್ರಮನಂತೆ ರಾಜ್ಯಸಭೆ ಪ್ರವೇಶಿಸಿದ ಹೆಚ್.ಡಿ.ದೇವೇಗೌಡರು 'ವ್ಹೀಲ್‌ಚೇರ್'ನಲ್ಲಿಯೇ ರಾಜ್ಯಸಭೆಗೆ ಹೋಗಿ ರಾಜ್ಯದ ನೆಲ–ಜಲದ ಪರವಾಗಿ ಗುಡುಗುತ್ತಿದ್ದಾರೆ.

ಗೌಡರು ತಾವು ಮಾಜಿ ಪ್ರದಾನಿ ಎಂಬ ಹೆಮ್ಮೆ ಹಾಗೂ ಬಿಜೆಪಿ ಜತೆ ಸಖ್ಯ ಹೊಂದಿರುವುದರಿಂದ ಹಾಲಿ ಪ್ರದಾನಿ ಮೋದಿ ಅವರೊಂದಿಗೆ ಸ್ನೇಹ ಸಂಪಾದಿಸಿದ್ದಾರೆ. ಯಾವೊತ್ತಾದರೂ ಇದನ್ನು ದೊಡ್ಡ ಮಟ್ಟದಲ್ಲಿ ಎನ್‌ಕ್ಯಾಶ್ ಮಾಡಿಕೊಳ್ಳಬಹುದೇ ಎಂಬ ತಂತ್ರಗಾರಿಕೆ ಗೌಡರದ್ದು, ಅದರೆ ಮೋದಿಗೇನು ಬಂತು ಮಂಕು?

ಈ ನಡುವೆ ಸಚಿವ ಜಾರಕಿಹೊಳಿ ದೆಹಲಿಯಲ್ಲಿ ಕೇಂದ್ರ ಸಚಿವ ಕುಮಾರಸ್ವಾಮಿ ಹಾಗೂ ರಾಜ್ಯಸಭಾ ಸದಸ್ಯರೂ ಆದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರನ್ನು ಭೇಟಿಯಾಗಿರುವುದು ರಾಜ್ಯ ಮಾತ್ರವಲ್ಲ ರಾಷ್ಟ್ರ ಮಟ್ಟದಲ್ಲೂ ಕುತೂಹಲಕ್ಕೆ ಕಾರಣವಾಗಿದೆ.

ಯತ್ನಾಳ್ ಉಚ್ಛಾಟನೆ

ರಾಜ್ಯದ ಬಿಜೆಪಿ ನಾಯಕರ ವಿರುದ್ಧ ತಿರುಗಿ ಬಿದ್ದಿರುವ ಯತ್ನಾಳ್ ಅವರನ್ನು ಕೊನೆಗೂ ಬಿಜೆಪಿ ಹೈಕಮಾಂಡ್ ಕಠಿಣ ನಿರ್ಧಾರ ತೆಗೆದುಕೊಂಡು ಪಕ್ಷದಿಂದ ಉಚ್ಛಾಟಿಸಿದೆ. ಇದು ಹೊಸ ಬೆಳವಣಿಗೆಗೆ ನಾಂದಿ ಹಾಡಲೂಬಹುದು.

ದಕ್ಷಿಣ ಭಾರತದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತಂದ ಹೆಮ್ಮೆಯಾಗಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮೇಲಿನ ಹಗರಣಗಳು ಜನತೆ ತಲೆತಿರುಗುವಂತೆ ಮಾಡಿದೆ. ಇನ್ನು ರಾಜ್ಯ ಬಿಜೆಪಿಯಲ್ಲಿ ಭಾರೀ ಬಂಡಾಯ ಭುಗಿಲೆದ್ದಿದೆ.

ಈ ಮೂರೂ ಪಕ್ಷಗಳ ರಾಜಕೀಯ ದೊಂಬರಾಟವನ್ನು ನೋಡಿಯೂ ಕಣ್ಮುಚ್ಚಿ ಕೂತಿರುವಂತಿರುವ ಕೇಂದ್ರ ಸರ್ಕಾರ ತಕ್ಷಣವೇ ಕರ್ನಾಟಕದ ವಿಚಾರದಲ್ಲಿ ಸೂಕ್ತ ನಿರ್ಧಾರ ಕೈಗೊಂಡರೆ ಜನರು ನೆಮ್ಮದಿಯಿಂದ ಬದುಕುವಂತೆ ಮಾಡಬಹುದೇನೋ. ಇಲ್ಲಿರುವ ಆಡಳಿತ ಮತ್ತು ವಿರೋಧ ಪಕ್ಷಗಳು 'ಒಡೆದ ಮನೆ'ಗಳಾಗಿವೆ. ಆಡಳಿತವಂತೂ ಬೀದಿಗೆ ಬಿದ್ದಿವೆ.

ಮುಡಾ ಮಾಜಿ ಆಯುಕ್ತ ನಟೇಶ್ ವಿರುದ್ಧದ ಸಮನ್ಸ್ ರದ್ದು : ಇತರ ಆರೋಪಿಗಳ ವಿಚಾರಣೆ ಕಷ್ಟವಾಗುತ್ತದೆ



ನಟೇಶ್



ಬೆಂಗಳೂರು, ಮಾ.26– ಮುಡಾದಿಂದ ಅಕ್ರಮವಾಗಿ ನಿವೇಶನ ಮಂಜೂರು ಮಾಡಿದ್ದ ಆರೋಪದಲ್ಲಿ ಮಾಜಿ ಆಯುಕ್ತ ನಟೇಶ್‌ಗೆ ಜಾರಿ ಮಾಡಿದ್ದ ಸಮನ್ಸ್ ರದ್ದುಪಡಿಸಿರುವ ಏಕಸದಸ್ಯ ಪೀಠದ ಆದೇಶದಿಂದ ಪ್ರಕರಣದಲ್ಲಿ ಮುಖ್ಯ ಆರೋಪಿಯಾಗಿರುವ ಪಾರ್ವತಿ ಅವರನ್ನು ವಿಚಾರಣೆಗೊಳಪಡಿಸುವುದಕ್ಕೆ ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದ್ದು, ನಮ್ಮ ಕೈಗಳನ್ನು ಕಟ್ಟಿಹಾಕಿದಂತಾಗಿದೆ ಎಂದು ಜಾರಿ ನಿರ್ದೇಶನಾಲಯ ವಾದ ಮಂಡಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿಗೆ ಬದಲಿ ನಿವೇಶನ ಹಂಚಿಕೆ ಮಾಡಿದ್ದ ಆರೋಪದಲ್ಲಿ ಮುಡಾದ ಮಾಜಿ ಆಯುಕ್ತರ ವಿರುದ್ಧ ಸಮನ್ಸ್ ಜಾರಿ ಮಾಡಿದ್ದ ಜಾರಿ ನಿರ್ದೇಶನಾಲಯ(ಇಡಿ) ಕ್ರಮ ರದ್ದುಪಡಿಸಿದ್ದ ಏಕಸದಸ್ಯ ಪೀಠದ ಆದೇಶವನ್ನು ಪ್ರಶ್ನಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಮತ್ತು ನ್ಯಾಯಮೂರ್ತಿ ಕೆ.ವಿ.ಅರವಿಂದ್ ಅವರಿದ್ದ ನ್ಯಾಯಪೀಠಕ್ಕೆ ಇಡಿ ಪರ ವಕೀಲರು ವಿವರಿಸಿದರು.

ವಿಚಾರಣೆ ವೇಳೆ ಜಾರಿ ನಿರ್ದೇಶನಾಲಯದ ಪರವಾಗಿ ವಾದ ಮಂಡಿಸಿದ ಅಡಿಷನಲ್ ಸಾಲಿಸಿಟರ್ ಜನರಲ್ ಎಸ್.ವಿ.ರಾಜು, ನಟೇಶ್ ಪ್ರಕರಣದಲ್ಲಿ ಏಕಸದಸ್ಯ ಪೀಠ ನೀಡಿರುವ ಆದೇಶವು ಜಾರಿ ನಿರ್ದೇಶನಾಲಯದ ಇತರ ಪ್ರಕರಣಗಳ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಈ ಆದೇಶವನ್ನು ಇತರ ಪ್ರಕರಣಗಳಲ್ಲಿಯೂ ಉಲ್ಲೇಖಿಸಲಾಗುತ್ತಿದ್ದು, ಇಡಿ ತನ್ನ ಕಾರ್ಯಮಾಡುವುದಕ್ಕೆ ಕಷ್ಟ ಸಾಧ್ಯವಾಗಲಿದೆ ಎಂದರು.

ಅಲ್ಲದೆ, ಇ.ಡಿ ಶೋಧನೆ ಮಾಡುವುದು ಕಾನೂನು ಬಾಹಿರ ಎಂದು ಘೋಷಣೆ ಮಾಡಿದರೆ ಇದೇ ಪ್ರಕರಣದ ಇತರೆ ಆರೋಪಿಗಳ ಮೇಲೆ ಪರಿಣಾಮ ಬೀರಲಿದ್ದು, ಅವರಿಗೆ ನ್ಯಾಯಾಲಯಗಳು ಜಾಮೀನು ಮಂಜೂರು ಮಾಡಬಹುದಾಗಿದೆ ಎಂದು ತಿಳಿಸಿದರು. ಈ ವೇಳೆ ಪೀಠ ಎಷ್ಟು ಮಂದಿ ಆರೋಪಿಗಳಿದ್ದಾರೆಂದು ಪ್ರಶ್ನಿಸಿತು. ಇದಕ್ಕೆ ಕೇಂದ್ರ ಸರ್ಕಾರದ ಪರ ವಕೀಲರು, ಪ್ರಕರಣದಲ್ಲಿ ನಾಲ್ಕು ಮಂದಿ ಆರೋಪಿಗಳಿದ್ದಾರೆ. ಪ್ರಕರಣದ 2ನೇ ಆರೋಪಿಗೂ ಇಡಿ ಸಮನ್ಸ್ ಜಾರಿ ಮಾಡಿದ್ದು, ಅದನ್ನು ಹೈಕೋರ್ಟ್ ರದ್ದುಪಡಿಸಿದೆಂದು ಪೀಠಕ್ಕೆ ತಿಳಿಸಿದರು.

ಇಡಿ ಸಮನ್ಸ್ ಪ್ರಶ್ನಿಸಿ ಅರ್ಜಿ ಸಲ್ಲಿಸಿದ್ದ ನಟೇಶ್, ಮುಡಾದ ಆಯುಕ್ತರಾಗಿದ್ದು, ಸ್ವತಃ ಬದಲಿ ನಿವೇಶನ ಹಂಚಿಕೆ ಮಾಡುವ ಸಂದರ್ಭದಲ್ಲಿ ವೈಯಕ್ತಿಕವಾಗಿ ಪರಿಶೀಲನೆ ನಡೆಸಿದ್ದರು. ನಿಯಮಗಳನ್ನು ಮೀರಿ ಪ್ರಭಾವಿಗಳಿಗೆ ಹಂಚಿಕೆ ಮಾಡಿದ್ದು, ಇದು ಮೇಲ್ನೋಟಕ್ಕೆ ಅಕ್ರಮ ಹಣ ವರ್ಗಾವಣೆಗೆ ಕಾರಣವಾಗಿರಬಹುದಾಗಿದೆ. 56 ಕೋಟಿ ರೂ.ಗಳ ಅಕ್ರಮ ವರ್ಗಾವಣೆಯಾಗಿದ್ದು, ನಟೇಶ್ ಅವರ ಮೇಲೆ ಸಂಶಯಕ್ಕೆ ಕಾರಣವಾಗಿದೆ. ಈ ರೀತಿಯ ಆರೋಪಗಳಲ್ಲಿ ಮೊದಲ ಹಂತದಲ್ಲಿ ಅವರ ಆಸ್ತಿಗಳ ಮೇಲೆ ದಾಳಿ ಮಾಡಿ ಶೋಧನಾ ಕಾರ್ಯ ಮಾಡಲಿದ್ದು, ಬಳಿಕ ಬಂಧನಕ್ಕೆ ಮುಂದಾಗಬೇಕಾಗುತ್ತದೆ. ಆದರೆ, ಏಕಸದಸ್ಯ ಪೀಠ, ಹಸ್ತಕ್ಷೇಪ ಮಾಡಿದೆ. ಇದು ಸುಪ್ರೀಂ ಕೋರ್ಟ್‌ನ ಆದೇಶಗಳಿಗೆ ವಿರುದ್ಧವಾಗಿದೆ ಎಂದು ತಿಳಿಸಿದರು.

ನಟೇಶ್ ಪರ ವಾದ ಮಂಡಿಸಿದ ಹಿರಿಯ ವಕೀಲ ದುಶ್ಯಂತ್ ದವೆ, ಕಾನೂನು ಬಾಹಿರವಾಗಿ ನಟೇಶ್‌ಗೆ ಇಡಿ ಜಾರಿ ಮಾಡಿದ್ದ ಸಮನ್ಸ್ ರದ್ದುಪಡಿಸಿರುವುದು ಸುಪ್ರೀಂಕೋರ್ಟ್ ಆದೇಶಕ್ಕೆ ಅನುಗುಣವಾಗಿದ್ದು, ಕಾನೂನು ಬದ್ಧವಾಗಿದೆ. ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್‌ಗಳಿಗೆ ಸರ್ಕಾರಗಳ ಯಾವುದೇ ಆದೇಶ ಪರಿಶೀಲಿಸುವುದು ಮತ್ತು ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಅವಕಾಶವಿದೆ.

ಪ್ರಕರಣ ಸಂಬಂಧ ವ್ಯಕ್ತಿಯೊಬ್ಬರು ಸಿದ್ದರಾಮಯ್ಯ ಪತ್ನಿ ತಪ್ಪು ಮಾಡಿದ್ದಾರೆ ಎಂದು ಆರೋಪಿಸಿ ಲೋಕಾಯುಕ್ತ ನ್ಯಾಯಾಲಯಕ್ಕೆ ದೂರು ಸಲ್ಲಿಸಿದ್ದರು. ಆದರೆ, ಈ ಪ್ರಕರಣದಲ್ಲಿ ಹಣ ವರ್ಗಾವಣೆ ಮಾಡಿದ್ದಾರೆ ಎಂಬ ಯಾವುದೇ ಆರೋಪವಿಲ್ಲ. ಆದರೂ ನಟೇಶ್ ಮನೆ ಮೇಲೆ ದಾಳಿ ನಡೆಸಿ ಸಮನ್ಸ್ ಜಾರಿ ಮಾಡಿರುವುದು ಕಾನೂನು ಬಾಹಿರ ಎಂದರು.

ಇಡಿ ಲೋಕಾಯುಕ್ತ ಪೊಲೀಸರು ದಾಖಲಿಸಿದ್ದ ಎಫ್‌ಐಆರ್ ಆಧಾರದಲ್ಲಿ ಪಿಎಂಎಲ್‌ಎ ಕಾಯಿದೆಯಡಿ ಪ್ರಕರಣ ದಾಖಲಿಸಿಕೊಂಡಿದೆ. ಈ ಕಾಯಿದೆಯನ್ನು ಎಲ್ಲ ಪ್ರಕರಣಗಳಲ್ಲಿಯೂ ಬಳಸಲಾಗುತ್ತಿದೆ. ಅಲ್ಲದೆ, ಪ್ರಕರಣದಲ್ಲಿ ಮುಖ್ಯಮಂತ್ರಿಗಳ ಪತ್ನಿ 14 ನಿವೇಶನಗಳಲ್ಲಿ ಹಿಂದಿರುಗಿಸಿದ್ದು, ಅದರಲ್ಲಿ ಅಕ್ರಮದ ಆದಾಯ ಏನು ಎಂಬುದೇ ಗೊತ್ತಿಲ್ಲ. ಇದೊಂದು ಮೂಡಾ ನಿರ್ಣಯವಾಗಿದ್ದು, ಅದನ್ನು ಕ್ರಿಮಿನಲ್ ಚಟುವಟಿಕೆ ಎನ್ನಲಾಗುವುದೇ ಎಂದು ಪ್ರಶ್ನಿಸಿದರು. ವಾದ ಆಲಿಸಿದ ಪೀಠ, ವಿಚಾರಣೆಯನ್ನು ನಾಳೆ(ಗುರುವಾರ)ಗೆ ಮುಂದೂಡಿತು.

ಯತ್ನಾಳ್ ಉಚ್ಛಾಟನೆ ದುಃಖ ತಂದಿದೆ



ಹುಬ್ಬಳ್ಳಿ, ಮಾ.26– ಪಕ್ಷದಿಂದ ಬಸನಗೌಡ ಪಾಟೀಲ್ ಯತ್ನಾಳ್‌ರನ್ನ ಉಚ್ಚಾಟನೆ ಮಾಡಿರುವುದು ಬಹಳಷ್ಟು ದುಃಖ ತಂದಿದೆ ಎಂದು ವಿಧಾನಸಭೆ ವಿಪಕ್ಷ ಉಪನಾಯಕ ಅರವಿಂದ್ ಬೆಲ್ಲದ್ ಹೇಳಿದರು.

ಯತ್ನಾಳ್‌ರನ್ನು ಬಿಜೆಪಿಯಿಂದ 6 ವರ್ಷ ಹೈಕಮಾಂಡ್ ಉಚ್ಚಾಟನೆ ಮಾಡಿರುವ ವಿಚಾರವಾಗಿ ಹುಬ್ಬಳ್ಳಿಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದರು. ಯತ್ನಾಳ್ ಒಬ್ಬ ಪಕ್ಷದ ಹಿರಿಯ ಜನಪ್ರಿಯ ನಾಯಕರು. ಅವರು ಪಕ್ಷದಿಂದ ದೂರವಾಗುತ್ತಿರು ವುದು ನನಗೆ ದುಃಖ ತಂದಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಹೈಕಮಾಂಡ್‌ನ ನಿರ್ಧಾರಕ್ಕೆ ನಾನು ತಲೆ ಬಾಗುತ್ತೇನೆ. ಪಕ್ಷದಲ್ಲಿ ಮುಂದೆ ಎಲ್ಲವೂ ಸರಿಯಾಗುತ್ತದೆ ಎನ್ನುವ ಭರವಸೆ ನನಗಿದೆ. ಯತ್ನಾಳ್ ಅವರಿಗೆ ಕೇಂದ್ರದ ಮಂತ್ರಿ ಯಾಗಿ, ಶಾಸಕರಾಗಿ ಸಾಕಷ್ಟು ಅನುಭವ ವಿದೆ. ಅವರು ಏನೇ ವಿಷಯವಿದ್ದರೂ ನೇರವಾಗಿಯೇ ಹೇಳುತ್ತಾರೆ ಎಂದು ಹೇಳಿದರು.

ನಾನು ಸತ್ಯ ಹೇಳುತ್ತಿದ್ದೇನೆ ಎನ್ನುವ ನಿಲುವಿಗೆ ಅಂಟಿಕೊಂಡಿದ್ದೇ ಯತ್ನಾಳ್‌ಗೆ ತೊಂದರೆಯಾಯಿತು



ಬೆಂಗಳೂರು, ಮಾ.26–ನಾನು ಸತ್ಯ ಹೇಳುತ್ತಿದ್ದೇನೆ ಎನ್ನುವ ನಿಲುವಿಗೆ ಅಂಟಿಕೊಂಡಿದ್ದೇ ಯತ್ನಾಳ್‌ಗೆ ತೊಂದರೆಯಾಯಿತು ಎಂದು ರಾಜಾಜಿ ನಗರದ ಬಿಜೆಪಿ ಶಾಸಕ ಸುರೇಶ್ ಕುಮಾರ್ ಹೇಳಿದ್ದಾರೆ.

ಪಕ್ಷದ ಕಾರ್ಯಕರ್ತರಿಗೆ ಧಕ್ಕೆ ಬರದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಕೆಲಸ. ನಮ್ಮಲ್ಲಿ ಪ್ರಮೋದ್ ಮಹಾಜನ್ ಅಂತ ಒಬ್ಬರು ನಾಯಕರಿದ್ದರು, ಈಗ ಅವರು ನಮ್ಮೊಂದಿಗಿಲ್ಲ. ಅವರು ಹೋಟೆಲ್‌ನಲ್ಲಿ ಕ್ಯಾಷಿಯರ್ ಮುಂದೆ ಬೋರ್ಡ್ ಅನ್ನು ನೋಡಿದ್ದರಂತೆ.

ನಮ್ಮ ಹೋಟೆಲ್‌ನಲ್ಲಿ ಇಡ್ಲಿ, ದೋಸೆ, ಪಲಾವ್ ತಿನ್ನುತ್ತೀರಾ, ಅದು ರುಚಿಕರವಾಗಿದ್ದರೆ ಅದನ್ನು ಊರಿನವರಿಗೆ ಹೇಳಿ, ಹೋಟೆಲ್‌ಗೆ ಹೆಸರು ಬರುತ್ತದೆ. ಅದೇ, ಪಲಾವ್ ಸರಿಯಿಲ್ಲದಿದ್ದರೆ ನನಗೆ ಬಂದು ಹೇಳಿ, ಊರಿನವರಿಗೆ ಹೇಳಬೇಡಿ, ನಾನು ಸರಿ ಪಡಿಸಿಕೊಳ್ಳುತ್ತೇನೆ ಎಂದು ಹೇಳುತ್ತಿದ್ದರು. ಆ ಮೂಲಕ, ಪಕ್ಷದ ಸಮಸ್ಯೆಯನ್ನು ಆಂತರಿಕವಾಗಿ ಇತ್ಯರ್ಥ ಮಾಡಿಕೊಳ್ಳಬೇಕಿತ್ತು ಎಂದು ಸುರೇಶ್ ಕುಮಾರ್ ಹೇಳಿದ್ದಾರೆ.

ನನ್ನ ಪಾರ್ಟಿ ಇದು, ಪಾರ್ಟಿಯ ಗೌರವ ನಮಗೆ ಮುಖ್ಯವಾಗಬೇಕು. ಪಕ್ಷದ ಸಮಸ್ಯೆ ದೊಡ್ಡದಾಗಿ ಹೋದರೆ, ಕಾರ್ಯಕರ್ತರಿಗೆ ಮುಜುಗರ ಎದುರಾಗುತ್ತದೆ. ನಾನು ಸತ್ಯ ಹೇಳುತ್ತಿದ್ದೇನೆ ಎನ್ನುವ ನಿಲುವಿಗೆ ಅಂಟಿಕೊಂಡಿದ್ದವರು, ಅದೇ ಯತ್ನಾಳ್‌ಗೆ ತೊಂದರೆಯಾಯಿತು ಎಂದು ಸುರೇಶ್‌ಕುಮಾರ್ ಹೇಳಿದ್ದಾರೆ.

ಅಟಲ್ ಅವರ ಸರ್ಕಾರದಲ್ಲಿ ಸಚಿವರಾಗಿದ್ದವರು ಯತ್ನಾಳ್ ನಾವು ಮಾತನಾಡುವಾಗ ಜಾಗರೂಕತೆಯಿಂದ ಇರಬೇಕು. ನಮ್ಮ ಮಾತುಗಳು ನಮ್ಮನ್ನು ನಂಬಿರುವ ಕಾರ್ಯಕರ್ತರಿಗೆ, ನಾವು ನಂಬಿರುವ ಪಕ್ಷಕ್ಕೆ ಹಿನ್ನಡೆಯಾಗಬಾರದು ಎಂದು ಸುರೇಶ್ ಕುಮಾರ್ ಹೇಳುವ ಮೂಲಕ ಯತ್ನಾಳ್ ಉಚ್ಚಾಟನೆಯನ್ನು ಸಮರ್ಥಿಸಿಕೊಂಡಿದ್ದಾರೆ.

ನಾಳೆ ಉಪನ್ಯಾಸ ಕಾರ್ಯಕ್ರಮ

ಮೈಸೂರು: 'ಮೈಸೂರು ಇನ್ಲೇ ಆರ್ಟ್' ಕುರಿತು ಮಾಸಿಕ ಸರಣಿ ಉಪನ್ಯಾಸವನ್ನು ಆಯೋಜಿಸಲಾಗಿದ್ದು, ಮಾ.28ರಂದು ಬೆಳಗ್ಗೆ 11 ಗಂಟೆಗೆ ಕರ್ನಾಟಕ ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣ ಇಂದಿರಾನಗರ, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಆಯುಕ್ತರ ಕಚೇರಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಡಾ.ಭಾನು ಪ್ರಕಾಶ್, ಇತಿಹಾಸಕಾರರು ಉಪನ್ಯಾಸ ನೀಡಲಿದಾರೆ. ಸದರಿ ಉಪನ್ಯಾಸ ಕಾರ್ಯಕ್ರಮದಲ್ಲಿ ಆಸಕ್ತ ವಿದ್ಯಾರ್ಥಿಗಳು, ಇತಿಹಾಸ ಆಸಕ್ತರು, ಸಾರ್ವಜನಿಕರು ಭಾಗವಹಿಸಬಹುದಾಗಿದೆ. ಮಾಹಿತಿಗಾಗಿ ಮೊ.ನಂ.7349057976ನ್ನು ಸಂಪರ್ಕಿಸಿ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ ಗುರುವಾರ 27 ಮಾರ್ಚ್ 2025

ಹಾಸನ ಮಿತ್ರ

ಹಾಸನ ಹೊರ ವರ್ತುಲ ರಸ್ತೆ ಯೋಜನೆಗೆ ಕೇಂದ್ರದ ಅನುಮೋದನೆಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಕೋರಿಕೆ

- ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರನ್ನು ಭೇಟಿಯಾದ ಹೆಚ್.ಡಿ.ದೇವೇಗೌಡರು
- ಹಾಸನ ಹೊರ ವರ್ತುಲ ರಸ್ತೆ ನಿರ್ಮಾಣದಿಂದ ಆರ್ಥಿಕ ಅಭಿವೃದ್ಧಿಗೆ ವೇಗದ ಮನವರಿಕೆ



ಹಾಸನ ವರ್ತುಲ ರಸ್ತೆ ಯೋಜನೆಗೆ ಒಪ್ಪಿಗೆ ನೀಡಬೇಕು ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಕೇಂದ್ರ ಹೆದ್ದಾರಿ ಮತ್ತು ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಅವರೊಂದಿಗೆ ಮಹತ್ವದ ಮಾತುಕತೆ ನಡೆಸಿದರು.

ನವದೆಹಲಿ: ಹಾಸನ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಹಾಸನ ವರ್ತುಲ ರಸ್ತೆ ಯೋಜನೆಗೆ ಒಪ್ಪಿಗೆ ನೀಡಬೇಕು ಎಂದು ಮಾಜಿ ಪ್ರಧಾನಿಗಳು, ಹಾಲಿ ರಾಜ್ಯಸಭೆ ಸದಸ್ಯರಾದ ಹೆಚ್.ಡಿ.ದೇವೇಗೌಡರು, ಕೇಂದ್ರ ಹೆದ್ದಾರಿ ಮತ್ತು ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರೊಂದಿಗೆ ಮಹತ್ವದ ಮಾತುಕತೆ ನಡೆಸಿದರು.

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರೊಂದಿಗೆ ಗಡ್ಕರಿ ಅವರನ್ನು ಸಂಸತ್ ಭವನದ ಕಚೇರಿಯಲ್ಲಿ ಭೇಟಿಯಾದ ಮಾಜಿ ಪ್ರಧಾನಿಗಳು; ಹಾಸನ ಬಹಳ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಹಾಗೂ ಕರಾವಳಿ ಮತ್ತು ಒಳನಾಡು ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುವ ಪ್ರಮುಖ ಕೊಂಡಿಯಾಗಿದೆ. ಹೀಗಾಗಿ ಸಂಚಾರ ದಟ್ಟಣೆ ಕಡಿಮೆ ಮಾಡುವ ಅಗತ್ಯವಿದ್ದು, ವರ್ತುಲ ರಸ್ತೆ ನಿರ್ಮಾಣದ ಅಗತ್ಯ ಬಹಳಷ್ಟಿದೆ ಎಂದರು.

ಅಲ್ಲದೆ, ಕರ್ನಾಟಕದ ಮೂಲ ಸೌಕರ್ಯ ವ್ಯವಸ್ಥೆಯನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ತಾವು ಮುತುವರ್ಜಿ ವಹಿಸಿ ಕೆಲಸ ಮಾಡುತ್ತಿದ್ದು, ನಾನಾ ಭಾಗಗಳಲ್ಲಿ ಜಾರಿಯಲ್ಲಿರುವ ಯೋಜನೆಗಳನ್ನು ಕ್ಷಿಪ್ರಗತಿಯ ಪೂರ್ಣಗೊಳಿಸಬೇಕು ಎಂದು ಮಾಜಿ ಪ್ರಧಾನಿಗಳು ಸಚಿವರನ್ನು ಕೋರಿದರು.

ಹಾಸನ ಹೊರವರ್ತುಲ ರಸ್ತೆ ನಿರ್ಮಾಣಕ್ಕೆ ಸಂಬಂಧಿಸಿ ಸಾರಿಗೆ ಸಚಿವರಿಗೆ ಮನವಿ ಪತ್ರ ನೀಡಿದ ದೇವೇಗೌಡರು; ಯೋಜನೆಗೆ ಆದಷ್ಟು ಬೇಗ ಅನುಮೋದನೆ ನೀಡಬೇಕು ಎಂದು ಕೋರಿದರು.

ಪ್ರಸ್ತಾವಿತ ಹೊರವರ್ತುಲ ರಸ್ತೆಯು ಬೆಂಗಳೂರು–ನೆಲಮಂಗಲ–ಮಂಗಳೂರು ರಸ್ತೆ (NH–75) ಅನ್ನು ಹಾಸನ ವಿಮಾನ ನಿಲ್ದಾಣ, ಹಾಸನ–ಅರಸೀಕೆರೆ ರಸ್ತೆ (SH–71), ಹಾಸನ–ಹಳೇಬೀಡು–ಹಾಸನ ರಸ್ತೆ ಮತ್ತು ಹಾಸನ–ಬೇಲೂರು ರಸ್ತೆ (NH–373)ಗೆ ಸಂಪರ್ಕಿಸುತ್ತದೆ. ಈ ಸಂಪರ್ಕವು ಸುಗಮ ಸಾರಿಗೆಗೆ ಅನುಕೂಲವಾಗುತ್ತದೆ. ಅಲ್ಲದೆ, ಹಾಸನ ಜಿಲ್ಲೆಯಲ್ಲಿರುವ ಯುನೆಸ್ಕೋ ವಿಶ್ವ ಪಾರಂಪರಿಕ ತಾಣಗಳು ಮತ್ತು ರಾಷ್ಟ್ರೀಯ ಪ್ರವಾಸಿ ಸರ್ಕ್ಯೂಟ್‌ನ ಭಾಗವಾಗಿರುವ ಹಾಸನ, ಬೇಲೂರು, ಹಳೇಬೀಡು, ಚಿಕ್ಕಮಗಳೂರು, ಶ್ರವಣಬೆಳಗೊಳ, ಮೈಸೂರು, ಮಡಿಕೇರಿ ಮತ್ತು ಮಂಗಳೂರಿನಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸುತ್ತದೆ ಎಂದು ದೇವೇಗೌಡರು ಕೇಂದ್ರ ಸಾರಿಗೆ ಸಚಿವರಿಗೆ ವಿವರಿಸಿದರು.

ಯೋಜನೆ ವಿವರ: ಪ್ರಸ್ತಾವಿತ ವರ್ತುಲ ರಸ್ತೆಯ ಒಟ್ಟು ಉದ್ದ 21.950 ಕಿ.ಮೀ. ದೂರವನ್ನು ಹೊಂದಿದ್ದು, ಯೋಜನೆಗೆ ಸುಮಾರು 120 ಹೆಕ್ಟೇರ್ ಭೂಮಿ ಅಗತ್ಯವಿದೆ. ಜಿಎಸ್‌ಟಿ, ಭೂಸ್ವಾಧೀನ ಮತ್ತು ಸ್ಥಳಾಂತರ ಸೇರಿದಂತೆ ಯೋಜನೆಯ ಅಂದಾಜು ವೆಚ್ಚ ಸುಮಾರು 750 ಕೋಟಿ ಆಗಲಿದೆ ಎಂದು ಮಾಜಿ ಪ್ರಧಾನಿಗಳು ಸಾರಿಗೆ ಸಚಿವರಿಗೆ ವಿವರಿಸಿದರು.

ಯೋಜನೆಯ ಆರ್ಥಿಕ ಪರಿಣಾಮದ ಕುರಿತು ವಿವರಿಸಿದ ದೇವೇಗೌಡರು; ಉತ್ತಮ ರಸ್ತೆ ಮೂಲ ಸೌಕರ್ಯವು ಈ ಪ್ರದೇಶದಲ್ಲಿ ವೇಗಯುತ ಆರ್ಥಿಕ ಬೆಳವಣಿಗೆಗೆ ಕಾರಣವಾಗುತ್ತದೆ. ಈ ವರ್ತುಲ ರಸ್ತೆ ಪ್ರಯಾಣದ ಸಮಯವನ್ನು ಕಡಿಮೆ ಮಾಡುವುದಲ್ಲದೆ; ವ್ಯಾಪಾರ, ಕೃಷಿ ಮತ್ತು ಪ್ರವಾಸೋದ್ಯಮವನ್ನು ಉತ್ತೇಜಿಸುತ್ತದೆ. ಹಾಸನದ ಜನರಿಗೆ ಹೊಸ ಆರ್ಥಿಕ ಅವಕಾಶಗಳನ್ನು ಸೃಷ್ಟಿಸುತ್ತದೆ ಎಂದರು.

ನಿಯೋಗದಲ್ಲಿ ಮಾಜಿ ಸಚಿವ ಸಂಸದ ಹೆಚ್.ಡಿ.ರೇವಣ್ಣ, ಕೋಲಾರದ ಲೋಕಸಭೆ ಕ್ಷೇತ್ರದ ಸದಸ್ಯ ಎಂ.ಮಲ್ಲೇಶ್ ಬಾಬು, ಮಾಜಿ ಸಚಿವ ಎ.ಮಂಜು, ಪರಿಷತ್ ಮಾಜಿ ಸದಸ್ಯರಾದ ಕೆ.ಎ.ತಿಪ್ಪೇಸ್ವಾಮಿ, ಚೌಡರೆಡ್ಡಿ ತೂಪಲ್ಲಿ ಇದ್ದರು.

ಬೈಕ್‌ಗಳ ಕದ್ದಿದ್ದ ಆರೋಪಿ ಬಂಧನ



ಹಾಸನ,ಮಾ.26–ಜಿಲ್ಲೆ ಹಾಗೂ ನೆರೆ ಜಿಲ್ಲೆಗಳಲ್ಲಿ ಬೈಕ್ ಕಳ್ಳತನ ಮಾಡುತ್ತಿದ್ದವನನ್ನು ಬಂಧಿಸಲಾಗಿದ್ದು, ಆತನಿಂದ 12.30 ಲಕ್ಷ ಮೌಲ್ಯದ ವಿವಿಧ ಕಂಪನಿಯ ಸುಮಾರು 26 ಬೈಕ್‌ಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಈ ಮಾಹಿತಿ ನೀಡಿದ ಅವರು, ಬಂಧಿತ ಆರೋಪಿ ಎನ್.ಆರ್.ಗಗನ್, ಆಲೂರು ತಾಲೂಕಿನ ಕೆಂಚಮ್ಮನ ಹೊಸಕೋಟೆ ಹೋಬಳಿಯ ಕೊಡಗತ್ತಾವಳ್ಳಿಯವನು. ಸದ್ಯ ಕೆ.ಆರ್.ಪೇಟೆ ತಾಲೂಕಿನ ಬಂಡಿಹೊಳೆ ಗ್ರಾಮದಲ್ಲಿ ವಾಸವಾಗಿದ್ದ ಎಂದು ತಿಳಿಸಿದರು.

ಮಾ.4ರಂದು ಹಾಸನ ತಾಲೂಕಿನ ಕಂದಲಿ ಗ್ರಾಮದ ಚಂದ್ರಶೇಖರ್ ಅವರು ತಮ್ಮ ಬೈಕ್ ಕಳ್ಳತನವಾಗಿರುವ ಬಗ್ಗೆ ನಗರದ ಬಡಾವಣೆ ಠಾಣೆಯಲ್ಲಿ ದೂರು ನೀಡಿದ್ದರು. ಹಾಸನ ಉಪವಿಭಾಗದ ಡಿವೈಎಸ್ಪಿ ಮುರಳೀಧರ್ ನೇತೃತ್ವದಲ್ಲಿ ಬಡಾವಣೆ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ರಾಘವೇಂದ್ರ ಪ್ರಕಾಶ್, ಸಬ್ ಇನ್‌ಸ್ಪೆಕ್ಟರ್ ಗಿರಿಧರ್ ಹಾಗೂ ತಂಡ ಮಾ.20ರಂದು ಕಾರ್ಯಾಚರಣೆ ನಡೆಸಿದ್ದು, ನಗರದ ಹೊಸ ಬಸ್ ನಿಲ್ದಾಣದ ಬಳಿ ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ಗಗನ್ ಎಂಬಾತನನ್ನು ಬಂಧಿಸಿದೆ ಎಂದರು.

ಆರೋಪಿಯು ಬಹುತೇಕ ಸ್ಪ್ಲೆಂಡರ್ ಬೈಕ್‌ಗಳನ್ನೇ ಕಳ್ಳತನ ಮಾಡಿದ್ದು, ಪಾರ್ಕಿಂಗ್ ಜಾಗದಲ್ಲಿ ಲಾಕ್ ಹಾಕದೇ ನಿಲ್ಲಿಸಿದ ಬೈಕ್‌ಗಳನ್ನು ಕದಿಯುತ್ತಿದ್ದ. ಒಟ್ಟು 26 ಬೈಕ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಇದರಲ್ಲಿ 16 ಬೈಕ್‌ಗಳು ಹಾಸನ ಜಿಲ್ಲೆಯ ಪೊಲೀಸ್ ಠಾಣಾ ವ್ಯಾಪ್ತಿಯ ಪ್ರಕರಣಗಳಿಗೆ ಸೇರಿವೆ. ಮೈಸೂರು ಜಿಲ್ಲೆಯ 9, ದಕ್ಷಿಣ ಕನ್ನಡ ಹಾಗೂ ಮಂಡ್ಯ ಜಿಲ್ಲೆಯ ತಲಾ ಒಂದು ಬೈಕ್ ಪತ್ತೆಯಾಗಿವೆ. 16 ಬೈಕ್ ಕಳ್ಳತನ ಪ್ರಕರಣ ಪತ್ತೆ ಹಚ್ಚಿದ್ದು, 9 ಬೈಕ್ ಕಳ್ಳತನ ಪ್ರಕರಣ ತನಿಖೆಗೆ ಮುಂದುವರಿದಿದೆ ಆರೋಪಿಯ ಪತ್ತೆಗೆ ಸಿಸಿಟಿವಿ ದೃಶ್ಯಾವಳಿ ನೆರವಾಗಿದೆ ಎಂದು ತಿಳಿಸಿದರು.

ಹಾಸನ: ಇಬ್ಬರ ಮಾಂಗಲ್ಯ ಸರ ಅಪಹರಣ

ಹಾಸನ, ಮಾ.26– ಚನ್ನರಾಯಪಟ್ಟಣ ತಾಲೂಕಿನ ಅಂತನಹಳ್ಳಿ ಗ್ರಾಮದಲ್ಲಿ ಕುಡಿಯಲು ನೀರು ಕೇಳುವ ನೆಪದಲ್ಲಿ ಮನೆಯ ಬಾಗಿಲಿಗೆ ಬಂದ ವ್ಯಕ್ತಿಯೊಬ್ಬ, ಮಹಿಳೆಯ ಕೊರಳಲ್ಲಿದ್ದ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದಾನೆ.


ಮಾ.25ರಂದು ಮಧ್ಯಾಹ್ನ ನೀಲಮ್ಮ ಅವರ ಮನೆಗೆ ಬಂದ ಅಪರಿಚಿತ ವ್ಯಕ್ತಿ, ನೀರು ಕೊಡುವಂತೆ ಕೇಳಿದ್ದಾನೆ. ನೀಲಮ್ಮ ನೀರು ತೆಗೆದುಕೊಂಡು ಬಂದು ಕೊಟ್ಟಿದ್ದಾರೆ. ಮತ್ತೆ ಮಧ್ಯಾಹ್ನ ನೀಲಮ್ಮ ಅವರ ಮನೆಗೆ ಬಂದ ಅದೇ ವ್ಯಕ್ತಿ, ಬಾಟಲಿಗೆ ನೀರು ತುಂಬಿಸಿ ಕೊಡಿ ಎಂದು ಕೇಳಿದ್ದಾನೆ. ನೀರು ತುಂಬಿದ ಬಾಟಲಿ ಕೊಡುತ್ತಿರುವ ವೇಳೆ ನೀಲಮ್ಮ ಅವರ ಕೊರಳಿಗೆ ಕೈಹಾಕಿದ ಆರೋಪಿ, ಕೊರಳಿನಲ್ಲಿದ್ದ 1.30 ಲಕ್ಷ ಮೌಲ್ಯದ 20 ಗ್ರಾಂ ಚಿನ್ನದ ಮಾಂಗಲ್ಯ ಸರವನ್ನು ಕಿತ್ತುಕೊಂಡು ಸ್ಕೂಟಿಯಲ್ಲಿ ಪರಾರಿಯಾಗಿದ್ದಾನೆ. ಹಿರೀಸಾವೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಸಕಲೇಶಪುರ ತಾಲೂಕಿನ ಮಠಸಾಗರ ಗ್ರಾಮದಲ್ಲಿ ಗ್ರಾಹಕನ ಸೋಗಿನಲ್ಲಿ ಅಂಗಡಿಗೆ ಬಂದ ಅಪರಿಚಿತ ವ್ಯಕ್ತಿ ಮಹಿಳೆಯ ಕುತ್ತಿಗೆಯಲ್ಲಿದ್ದ ಚಿನ್ನದ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿದ್ದಾನೆ.

ಗ್ರಾಮದ ಸರೋಜ ಅವರು ಮಾ.25ರಂದು ಮಧ್ಯಾಹ್ನ ತಮ್ಮ ಮನೆಯ ಮುಂಭಾಗದಲ್ಲಿರುವ ಅಂಗಡಿಯಲ್ಲಿದ್ದರು. ಈ ಸಮಯದಲ್ಲಿ ಅಂಗಡಿಗೆ ಬಂದ ಅಪರಿಚಿತ ವ್ಯಕ್ತಿ ಕೂಲ್ ಡ್ರಿಂಕ್ಸ್ ನೀಡುವಂತೆ ಕೇಳಿದ್ದ. ಮನೆಯ ಒಳಗಿಂದ ಕೂಲ್ ಡ್ರಿಂಕ್ಸ್ ತಂದು ಅಂಗಡಿ ಬಾಗಿಲು ತೆರೆಯುತ್ತಿದ್ದಂತೆಯೇ ಕೊರಳಿಗೆ ಕೈಹಾಕಿದ ಆರೋಪಿ, ಕುತ್ತಿಗೆಯಲ್ಲಿದ್ದ 2.50 ಲಕ್ಷ ಮೌಲ್ಯದ 24 ಗ್ರಾಂ ಚಿನ್ನದ ಮಾಂಗಲ್ಯ ಸರ ಕಿತ್ತುಕೊಂಡು ಸ್ಕೂಟಿಯಲ್ಲಿ ಪರಾರಿಯಾಗಿದ್ದಾನೆ. ಸಕಲೇಶಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಓ ಶ್ಯಾಮ ಭಟ್, ಡಾ.ಸುಧಾ ರಚಿತ ಅಗಸ್ತ್ಯ ದರ್ಶನ ಕೃತಿಗಳ ಬಿಡುಗಡೆ

ಸುತ್ತೂರು ಶ್ರೀಗಳಿಂದ ಲೋಕಾರ್ಪಣೆ; ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ದತ್ತ ವಿಜಯಾನಂದರಿಂದ ವಿವರಣೆ



'ಅಗಸ್ತ್ಯ ದರ್ಶನ'(ಕನ್ನಡ) ಹಾಗೂ 'ಅಗಸ್ತ್ಯ ದಿ ಯುನಿಫೈರ್'(ಇಂಗ್ಲಿಷ್) ಕೃತಿಗಳನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಬುಧವಾರ ಲೋಕಾರ್ಪಣೆಗೊಳಿಸಿದರು. (ಎಡದಿಂದ)ಖ್ಯಾತ ವಕೀಲರಾದ ಓ ಶ್ಯಾಮ ಭಟ್, 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಮೈಸೂರಿನ ಮಾತಾ ಅಮೃತಮಯಿ ಮಠದ ಮುಖ್ಯಸ್ಥರಾದ ಬ್ರಹ್ಮಚಾರಿ ಪ್ರಸಾದಾಮೃತ ಚೈತನ್ಯ, ಬೆಂಗಳೂರಿನ ಮಿಥಿಕ್ ಸೊಸೈಟಿ ಅಧ್ಯಕ್ಷ ವಿ.ನಾಗರಾಜ, ಡಾ.ಎಂ.ಎನ್.ಸುಧಾ ಉಪಸ್ಥಿತರಿದ್ದಾರೆ.

ಆಶ್ರಯ ಸಂಸ್ಕೃತಿಯ ವಾರಸುದಾರರು...

ನಮ್ಮ ಆಶ್ರಯ ಸಂಸ್ಕೃತಿಯ ವಾರಸುದಾರರಾದ ಅಗಸ್ತ್ಯ ಮಹರ್ಷಿಗಳ ಕುರಿತು ರಚನೆಯಾಗಿರುವ 'ಅಗಸ್ತ್ಯ ದರ್ಶನ' ಮಹತ್ವದ ಕೃತಿಯಾಗಿದೆ. ವಿದ್ವಾಂಸರಿಗೆ, ಬಲ್ಲವರಿಗೆ ಮಾತ್ರ ಸೀಮಿತವಾಗಿದ್ದ ಅಗಸ್ತ್ಯ ಮಹರ್ಷಿಗಳ ಕುರಿತ ಜೀವನ ಕಥಾನಕ ಸರ್ವರಿಗೂ ತಿಳಿಸುವಂತೆ ರಚನೆಯಾಗಿದೆ.

-ಸುತ್ತೂರು ಶ್ರೀ

ಮೈಸೂರು, ಮಾ.26(ಎಂಕೆ)– ಖ್ಯಾತ ವಕೀಲರಾದ ಓ ಶ್ಯಾಮ್‌ಭಟ್ ಹಾಗೂ ಡಾ.ಎಂ.ಎನ್.ಸುಧಾ ಅವರು ರಚಿಸಿರುವ 'ಅಗಸ್ತ್ಯ ದರ್ಶನ'(ಕನ್ನಡ) ಹಾಗೂ 'ಅಗಸ್ತ್ಯ ದಿ ಯುನಿಫೈರ್'(ಇಂಗ್ಲಿಷ್) ಕೃತಿಗಳನ್ನು ಬುಧವಾರ ಲೋಕಾರ್ಪಣೆಗೊಳಿಸಲಾಯಿತು.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಅಯೋಧ್ಯಾ ಪಬ್ಲಿಕೇಷನ್ಸ್ ಹಾಗೂ ಶ್ರೀ ಬ್ರಹ್ಮಶ್ರೀ ಅಗಸ್ತ್ಯ ಲೋಪಾಮುದ್ರಾ ಜ್ಞಾನಪೀಠ ಸಹಯೋಗದೊಂದಿಗೆ ಆಯೋಜಿಸಿದ್ದ ಸಮಾರಂಭದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಲೋಕಾರ್ಪಣೆಗೊಳಿಸಿದರು.

ಬಳಿಕ ಗ್ರಂಥಗಳ ಕುರಿತು ಮಾತನಾಡಿದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಜಗತ್ತಿಗೆ ಜ್ಞಾನ ಮತ್ತು ವಿಜ್ಞಾನ ಎರಡನ್ನು ಕೊಟ್ಟಿರುವ ಅಗಸ್ತ್ಯ ಮಹರ್ಷಿಗಳನ್ನು ಭಾರತೀಯರು, ಅದರಲ್ಲಿಯೂ ದಕ್ಷಿಣ ಭಾರತದವರು, ಅದರಲ್ಲೂ ಮುಖ್ಯವಾಗಿ ಕರ್ನಾಟಕದವರು ನಿರಂತರವಾಗಿ ಸ್ಮರಣೆ ಮಾಡಲೇಬೇಕು. ಅಗಸ್ತ್ಯ ಮಹರ್ಷಿಗಳು 'ಶ್ರೀ ವಿದ್ಯಾ ದೀಪಿಕಾ' ಗ್ರಂಥದ ಮೂಲಕ ಮಂತ್ರ ಶಕ್ತಿ, ತಂತ್ರ ಶಕ್ತಿ, ಮನಸ್ಸಿನ ಶಕ್ತಿ, ಬುದ್ಧಿ ಶಕ್ತಿ ಹಾಗೂ ಸಮಾಜಕ್ಕೆ ಬೇಕಾದಂತಹ ವಿಜ್ಞಾನವನ್ನೆಲ್ಲಾ ಕೊಟ್ಟಿದ್ದಾರೆ. ಸಾಗರದಾಚೆಗೆ ಭಾರತದ ಸಂಸ್ಕೃತಿ ಮತ್ತು ಪರಂಪರೆಯನ್ನು ಸಾರಿದ ಮೊಟ್ಟ ಮೊದಲಿಗರು ಅಗಸ್ತ್ಯರು ಎಂದು ಸ್ಮರಿಸಿದರು.

ಸಾಗರದಾಚೆಗೂ ನಮ್ಮ ಸಂಸ್ಕೃತಿ ತೆಗೆದುಕೊಂಡು ಹೋದವರು ಅಗಸ್ತ್ಯರು...

ಎಲ್ಲವೂ ಶಕ್ತಿಯಿಂದಲೇ ಉದ್ಭವವಾಗಲಿದೆ ಎಂದು ತಿಳಿಸಿಕೊಟ್ಟ ಅಗಸ್ತ್ಯ ಮಹರ್ಷಿಗಳು, ನೀರಿನ ಸಂಶೋಧನೆ ಬಗ್ಗೆ ಹಿಡಿತ ಸಾಧಿಸಿದ್ದರು. ಲೋಹಗಳ ಬಗ್ಗೆಯೂ ತಿಳಿಸಿಕೊಟ್ಟಿದ್ದಾರೆ. ಕರ್ನಾಟಕಕ್ಕೆ ಅಗಸ್ತ್ಯರ ಕೊಡುಗೆ ಸಾಲು ಸಾಲು ಇದ್ದು, ಕರ್ನಾಟಕವನ್ನು ಕರಿನಾಡು ಎಂತಲೂ ಕರೆದಿದ್ದಾರೆ. ಭೌತಶಾಸ್ತ್ರಕ್ಕೂ ಕೊಡುಗೆ ನೀಡಿರುವ ಅವರು ಹಲವು ಭಾಷೆಗಳನ್ನು ಪರಿಚಯಿಸಿರುವುದು ಮಾತ್ರವಲ್ಲದೆ ವಿಶ್ವದ ಮೊದಲ ಗ್ರಂಥಪಾಲಕರಾಗಿದ್ದಾರೆ. ನಮ್ಮ ಸಂಸ್ಕೃತಿಯನ್ನು ಸಾಗರದಾಚೆಗೆ ತೆಗೆದುಕೊಂಡು ಹೋದವರು ಅಗಸ್ತ್ಯರು.

- ಓ ಶ್ಯಾಮಭಟ್, ಖ್ಯಾತ ವಕೀಲರು

ಅಗಸ್ತ್ಯರ ತತ್ವವನ್ನು ತಿಳಿದುಕೊಂಡಾಗ ನಾವು ನಮ್ಮ ಮನಸ್ಸಿನ ಪರಿವರ್ತನೆಯನ್ನು ಕಂಡುಕೊಳ್ಳಬಹುದು. ಬುದ್ಧಿಯ ವಿಕಾಸವನ್ನು ನೋಡಬಹುದು. ಅಗಸ್ತ್ಯರ ಕುರಿತು ಸೃಷ್ಟಿಯಲ್ಲೇ ಬಹಳ ಹಳೆಯ ಗ್ರಂಥವೆಂಬ ವೇದಗಳಲ್ಲಿ ಉಲ್ಲೇಖವಿದೆ. ಎಲ್ಲಾ ಪುರಾಣಗಳಲ್ಲಿಯೂ ಅಗಸ್ತ್ಯರ ಬಗ್ಗೆ ಕೇಳಿದ್ದೇವೆ. ಇವತ್ತು ದಕ್ಷಿಣ ಭಾರತ ಈ ರೀತಿ ಸುಸ್ಥಿತಿಯಲ್ಲಿ ಇರಲು ಅಗಸ್ತ್ಯರೇ ಕಾರಣ ಎಂದು ಹೇಳಬಹುದು. ಎಲ್ಲಾ ದೇವತೆಗಳಿಗೂ ದೇವಸ್ಥಾನ ಕಟ್ಟಿದ್ದ ಅಗಸ್ತ್ಯರು, ವಿದ್ಯುತ್ ಶಾಸ್ತ್ರವನ್ನು ನಮಗೆ ಕೊಟ್ಟಿದ್ದಾರೆ ಎಂದು ತಿಳಿಸಿದರು.

ನಾಸ್ತಿಕರೆಲ್ಲರೂ ಆಸ್ತಿಕರೇ...

ಈಗೊಮ್ಮೆ ನಾಸ್ತಿಕರು ಎಂದುಕೊಂಡು ಎಲ್ಲರೂ ಸಭೆ ನಡೆಸಿ, ಹೊರಗೆ ಬಂದು 'ದೇವರ ದಯೆ ಮಳೆ ಬರಲಿಲ್ಲ' ಸಭೆ ಚೆನ್ನಾಗಿಯೇ ಆಯಿತು ಎನ್ನುವ ಮೂಲಕ ದೇವರನ್ನು ಸ್ಮರಿಸುತ್ತಾರೆ. ಸಾಮಾನ್ಯವಾಗಿ ನಾಸ್ತಿಕರು ಸೂರ್ಯ ನಮಸ್ಕಾರ ಮಾಡುವುದನ್ನು ನೋಡುತ್ತೇವೆ. ಹಾಗಾಗಿ ಸೂರ್ಯ ನಮಸ್ಕಾರ ಮಾಡುವ ಎಲ್ಲರೂ ಆಸ್ತಿಕರೇ. ಯಾರು ಸೂರ್ಯನನ್ನು ನೋಡಿ ನಮಸ್ಕಾರ ಮಾಡುತ್ತಾರೋ ಅವರಿಗೆ ಜಯವೇ ಜಯ ಎಂದು ಹೇಳಿಕೊಟ್ಟವರು ಅಗಸ್ತ್ಯ ಮಹರ್ಷಿಗಳು.

- ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ.

ಕಾವೇರಿ ಬಂದಿದ್ದು ಅಗಸ್ತ್ಯರಿಂದಲೇ!: ಅಗಸ್ತ್ಯ ಮಹರ್ಷಿಗಳಿಗೆ ಇಬ್ಬರು ಹೆಂಡತಿಯರು. ಲೋಪ ಮುದ್ರಾ ಮತ್ತು ಕಾವೇರಿ. ಈ ಇಬ್ಬರು ಒಂದೇ ಶಕ್ತಿಯ ಎರಡು ರೂಪ. ಕವೇರನ ಮಗಳಾದ ಕಾವೇರಿ ಜಲದ ರೂಪದಲ್ಲಿ ಹರಿಯುತ್ತಿರುವುದಕ್ಕೆ ಅಗಸ್ತ್ಯರೇ ಕಾರಣ. ಆದ್ದರಿಂದ ಕಾವೇರಿ ಪ್ರಾಂತದಲ್ಲಿರುವವರು, ಕಾವೇರಿ ನೀರನ್ನು ಕುಡಿಯುವವರು, ಕಾವೇರಿ ತೀರದಲ್ಲಿರುವ ಶ್ರೀರಂಗನನ್ನ ಪೂಜಿಸುವವರು, ಕಾವೇರಿ ತೀರದಲ್ಲಿರುವ ಅಗಸ್ತ್ಯೇಶ್ವರ ಸ್ವಾಮಿಯನ್ನು ಕೊಂಡಾಡುವ ನಾವೆಲ್ಲರೂ ಕೂಡ ಪ್ರತೀ ದಿನ ಅಗಸ್ತ್ಯರನ್ನು ಸ್ಮರಣೆ ಮಾಡಲೇಬೇಕು ಎಂದು ತಿಳಿಸಿದ ಶ್ರೀಗಳು ಕಾವೇರಿ ಮಾತೆಯ ಉಗಮದ ಕುರಿತು ತಿಳಿಸಿಕೊಟ್ಟರು.

ಕಾವೇರಿ ನದಿಯ ಒಂದು ತೀರದಲ್ಲಿ ವಿಷ್ಣುವಿನ ದೇವಾಲಯಗಳು, ಮತ್ತೊಂದು ತೀರದಲ್ಲಿ ಶಿವನ ದೇವಾಲಯಗಳನ್ನು ನಿರ್ಮಾಣ ಮಾಡಿದ ಅಗಸ್ತ್ಯರಿಂದಾಗಿ ಎಲ್ಲೆಲ್ಲಿ ಸಂಗಮ ಇದೆಯೋ ಅಲ್ಲೆಲ್ಲಾ ಸಂಗಮೇಶ್ವರ ದೇವಸ್ಥಾನಗಳಿವೆ. ಆ ದೇವಸ್ಥಾನಗಳು ಎಷ್ಟೋ ಜನರಿಗೆ ಜೀವನೋಪಾಯವಾಗಿದೆ. ರಾಮಾಯಣದಲ್ಲಿ ಶ್ರೀ ರಾಮನು, ರಾವಣನೊಂದಿಗೆ ಯುದ್ಧ ಮಾಡುವಾಗ ಎಷ್ಟು ಬಾರಿ ಬಾಣ ಪ್ರಯೋಗ ಮಾಡಿದರೂ ರಾವಣನನ್ನು ಸಂಹಾರ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಕಷ್ಟದಲ್ಲಿದ್ದಾಗ ಬರುವವರೇ ನಿಜವಾದ ಗುರುಗಳು ಎಂಬಂತೆ ಬಂದ ಅಗಸ್ತ್ಯರು ರಾಮದೇವರಿಗೆ ಆದಿತ್ಯ ಹೃದಯ (ಸೂರ್ಯ ನಮಸ್ಕಾರ)ವನ್ನು ಜಪಿಸುವಂತೆ, ಅಲ್ಲದೆ ರಾವಣನ ಹೃದಯ (ಅಮೃತ ಕಳಸ)ದ ಭಾಗಕ್ಕೆ ಬಾಣ ಬಿಡುವಂತೆ ತಿಳಿಸಿದ್ದರು ಎಂದು ವಿವರಿಸಿದರು.

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಸಪ್ತ ಋಷಿಗಳಲ್ಲಿ ಒಬ್ಬರಾದ ಅಗಸ್ತ್ಯರು ಉತ್ತರದಿಂದ ದಕ್ಷಿಣಕ್ಕೆ ಬಂದು, ಉತ್ತರ ಮತ್ತು ದಕ್ಷಿಣದ ಸೇತುಬಂಧವಾಗಿದ್ದರು. ಕಾವೇರಿ ಮಾತೆಯ ಉದ್ಭವಕ್ಕೂ ಕಾರಣರಾದ ಅಗಸ್ತ್ಯರು, ಕರ್ನಾಟಕ ಶಾಸ್ತ್ರೀಯ ಸಂಗೀತಕ್ಕೂ ಚಾಲನೆ ಕೊಡುವ ಮೂಲಕ ಸಂಗೀತಗಾರರ ಮೂಲ ಪುರುಷರೂ ಆಗಿದ್ದಾರೆ. ಅವರ ಬಗ್ಗೆ ಸಂಗ್ರಹಿಸಿರುವ ಮಾಹಿತಿ ಅರ್ಥಪೂರ್ಣವಾಗಿದೆ ಎಂದು ತಿಳಿಸಿದರು.

ಗೋವಿಂದ... ಗೋವಿಂದ... ಬಂದಿದ್ದು ಅಗಸ್ತ್ಯರಿಂದ...: ತಿರುಪತಿಗೆ ಹೋಗುವವರೆಲ್ಲಾ ಗೋವಿಂದ... ಗೋವಿಂದ... ಎಂದು ಜಪಿಸುತ್ತಾರೆ. ಈ ಜಪ ಬಂದಿದ್ದರೂ ಅಗಸ್ತ್ಯ ಮಹರ್ಷಿಗಳಿಂದಲೇ. ಗೋ ಶಾಲೆಯನ್ನು ಸ್ಥಾಪಿಸಿದ್ದ ಅವರಲ್ಲಿ ಸಾಕ್ಷಾತ್ ವಿಷ್ಣು ಬಂದು ಗೋವನ್ನು ಕೇಳುತ್ತಾರೆ. ಆಗ ಮಹರ್ಷಿಗಳು, ದಂಪತಿ ಸಮೇತ ಬಂದರೆ ಕೊಡುವುದಾಗಿ ಹೇಳುತ್ತಾರೆ. ನಂತರ ಶ್ರೀನಿವಾಸ ಹಾಗೂ ಪದ್ಮಾವತಿ ದಂಪತಿ ಸಮೇತ ಅಗಸ್ತ್ಯರ ಗೋ ಶಾಲೆಗೆ ಬಂದು ನೋಡಿದಾಗ ಅವರು ಇರುವುದಿಲ್ಲ. ಶ್ರೀನಿವಾಸ ಮತ್ತು ಪದ್ಮಾವತಿ ವಾಪಸ್ ತೆರಳುವಾಗ ಬಂದ ಅಗಸ್ತ್ಯರು ಅವರಿಬ್ಬರನ್ನು ಹಿಂಬಾಲಿಸುತ್ತಾ ಹಸು ಮತ್ತು ಕರುವನ್ನು ಕೊಡಲು ಹೋಗುವಾಗ ಗೋ.. ಇಂದ ಎಂದು ಕರೆಯುತ್ತಾರೆ. ಗೋ.. ಇಂದ ಎಂಬುದೇ ಗೋವಿಂದವಾಯಿತು ಎಂಬ ಉಲ್ಲೇಖಗಳಿವೆ ಎಂದು ತಿಳಿಸಿದರು.

ಬೆಂಗಳೂರಿನ ಮಿಥಿಕ್ ಸೊಸೈಟಿ ಅಧ್ಯಕ್ಷ ವಿ.ನಾಗರಾಜ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮೈಸೂರಿನ ಮಾತಾ ಅಮೃತಮಯಿ ಮಠದ ಮುಖ್ಯಸ್ಥರಾದ ಬ್ರಹ್ಮಚಾರಿ ಪ್ರಸಾದಾಮೃತ ಚೈತನ್ಯ, ಖ್ಯಾತ ವಕೀಲರಾದ ಓ ಶ್ಯಾಮ್‌ಭಟ್ ಹಾಗೂ ಡಾ.ಎಂ.ಎನ್.ಸುಧಾ ಉಪಸ್ಥಿತರಿದ್ದರು.

ಅಗಸ್ತ್ಯರಂತೆ ಇತರೆ ಋಷಿಗಳ ಕೃತಿ ಹೊರ ತಂದರೆ ನಾಡಿನ ಸಂಸ್ಕೃತಿ ಉಳಿಯಲಿದೆ

'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕ ಡಾ.ಕೆ.ಬಿ.ಗಣಪತಿ ಅಭಿಮತ

ಮೈಸೂರು, ಮಾ.26(ಎಂಕೆ)– ದಕ್ಷಿಣ ಭಾರತಕ್ಕೆ ಸಂಸ್ಕೃತ ಭಾಷೆಯನ್ನು ತಂದ ಅಗಸ್ತ್ಯರು, ಸರ್ವವ್ಯಾಪಿ ಋಷಿಯಾಗಿದ್ದಾರೆ. ಅಗಸ್ತ್ಯರಂತೆ ಇತರೆ ಋಷಿಗಳ ಕೃತಿ ಹೊರ ತಂದರೆ ನಾಡಿನ ಸಂಸ್ಕೃತಿ ಉಳಿಯಲಿದೆ ಎಂದು 'ಮೈಸೂರು ಮಿತ್ರ ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಹೇಳಿದರು.

ಅಗಸ್ತ್ಯರ ಕುರಿತು ನಾಲ್ಕು ವೇದ, ಉಪನಿಷತ್ತುಗಳಲ್ಲಿ ಮಾತ್ರವಲ್ಲದೆ ನಮ್ಮ ಪವಿತ್ರ ಗ್ರಂಥಗಳಲ್ಲಿ ಉಲ್ಲೇಖವಾಗಿದೆ. ಇವೆಲ್ಲವೂ ಅರ್ಥಗರ್ಭಿತವಾದ ಜೀವನ ಗ್ರಂಥಗಳಾಗಿವೆ. ಓ ಶ್ಯಾಮಭಟ್ ಮತ್ತು ಡಾ.ಸುಧಾ ಅವರು, ಅಗಸ್ತ್ಯರ ಕುರಿತ ಕೃತಿ ರಚನೆ ಮಾಡಿರುವಂತೆ ಇನ್ನಿತರೆ ಋಷಿಗಳ ಕುರಿತ ಕೃತಿಗಳನ್ನು ಹೊರತಂದರೆ ನಾಡಿನ ಸಂಸ್ಕೃತಿ ಉಳಿಯಲಿದೆ. ನಮ್ಮ ಸಂಸ್ಕೃತಿಯೇ ನಾಶವಾಗುವ ಸಂದರ್ಭ ಒದಗಿ ಬಂದಿರುವುದರಿಂದ ಅದನ್ನು ಪುನರ್‌ಸ್ಥಾಪನೆ ಮಾಡಬೇಕಿದೆ ಎಂದು ಕರೆ ನೀಡಿದರು.

ನನಗೆ ಮೊದಲು ಅಗಸ್ತ್ಯರ ಬಗ್ಗೆ ಪರಿಚಯ ಮಾಡಿಕೊಟ್ಟವರು ನನ್ನ ತಾಯಿ. ನಾನು ಕೊಡಗಿನಿಂದ ಬಂದವನಾಗಿದ್ದು, ಕೊಡಗಿನವರಿಗೆ ಕಾವೇರಿ, ತಲಕಾವೇರಿ ಎಂದರೆ ಬಹಳ ಭಕ್ತಿ. ಈ ಪುಸ್ತಕದಲ್ಲಿ ಕಾವೇರಿ ಉಗಮ ಕುರಿತು ಇರುವುದರ ಬಗ್ಗೆ ಲೇಖಕರೊಂದಿಗೆ ಚರ್ಚಿಸಿದ್ದೆವು. ಅಗಸ್ತ್ಯ ಮಹರ್ಷಿಗಳು, ಕವೇರ ಮುನಿಯ ಮಗಳ(ಕಾವೇರಿ)ನ್ನು ಮದುವೆಯಾಗಬೇಕಾದರೆ, ನನ್ನನ್ನು ಯಾವತ್ತೂ ಬಿಟ್ಟು ಹೋಗುವಂತಿಲ್ಲ, ಸದಾ ಒಟ್ಟಿಗೆ ಇರಬೇಕು ಎಂಬ ಷರತ್ತು ಹಾಕುತ್ತಾಳೆ. ಆದರೆ, ಒಂದು ದಿನ ಇವರು ಪೂಜೆಗಾಗಿ ಸ್ನಾನಕ್ಕೆ ಹೋಗುವಾಗ ಕಾವೇರಿಯನ್ನು ತಮ್ಮ ಕಮಂಡಲದಲ್ಲಿಟ್ಟು ಹೋಗುತ್ತಾರೆ. ವಾಪಸ್ ಬಂದು ನೋಡಿದಾಗ ಕಾವೇರಿ ಇರುವುದಿಲ್ಲ ಕಾವೇರಿ ಕಮಂಡಲವನ್ನು ಮಗುಚಿ ಹೊಳೆಯಾಗಿ ಹರಿದಳು ಎಂಬ ಉಲ್ಲೇಖವನ್ನು ನನಗೆ ನನ್ನ ತಾಯಿ ಪರಿಚಯ ಮಾಡಿಕೊಟ್ಟಿದ್ದು ಎಂದು ತಿಳಿಸಿದರು.

ಅಗಸ್ತ್ಯ ಋಷಿಗಳನ್ನು ನಾನು ನೋಡಿದ್ದೇನೆ...!: ಅಗಸ್ತ್ಯ ಋಷಿಯನ್ನು ತೋರಿಸಿಕೊಟ್ಟವರು ನನ್ನ ಗುರುಗಳು ಪ್ರೊ.ಜಿ.ಟಿ.ನಾರಾಯಣರಾಯರು. ಅವರಿಗೆ ಮೂಢನಂಬಿಕೆಯಲ್ಲಿ ನಂಬಿಕೆ ಇಲ್ಲ. ಖಗೋಳ ಶಾಸ್ತ್ರದಲ್ಲಿ ಅಪಾರ ನಂಬಿಕೆ ಇತ್ತು. ಮನೆಗೆ ಹೋಗಿದ್ದಾಗ ಮನೆ ಮೇಲೆ ಕರೆದುಕೊಂಡು ಹೋಗಿ ಆಕಾಶದತ್ತ ತೋರಿಸಿ, ಸಪ್ತ ಋಷಿಗಳಲ್ಲಿ ಅವನು ಅಗಸ್ತ್ಯ ಎಂದು ತೋರಿಸಿದ್ದರು ಎಂದು ಹಾಸ್ಯ ಚಟಾಕಿ ಹಾರಿಸಿದರಲ್ಲದೆ ನಮ್ಮ ಸನಾತನ ಸಂಸ್ಕೃತಿ ಉಳಿದರೆ ನಾಗರಿಕತೆ ಉಳಿಯಲಿದೆ ಎಂದು ಹೇಳಿದರು.

ಐಸ್ ಕ್ರೀಂ, ಕೂಲ್ ಡ್ರಿಂಕ್ಸ್ ಘಟಕಗಳ ಮೇಲೆ ಆಹಾರ ಇಲಾಖೆ ಅಧಿಕಾರಿಗಳ ದಾಳಿ: ಪನ್ನೀರ್‌ನಲ್ಲಿ ಬ್ಯಾಕ್ಟೀರಿಯಾ ಅಂಶ ಪತ್ತೆ




ಬೆಂಗಳೂರು, ಮಾ.26– ಆಹಾರ ಕಲಬೆರಕೆಯ ಆರೋಪ ಸಾಕಷ್ಟು ಕೇಳಿಬರುತ್ತಿರುವ ಹೊತ್ತಿನಲ್ಲಿ ಆಹಾರ ಇಲಾಖೆ ಅಧಿಕಾರಿಗಳು ಐಸ್ ಕ್ರೀಂ ಮತ್ತು ತಂಪು ಪಾನೀಯ ಘಟಕಗಳ ಮೇಲೆ ದಾಳಿ ನಡೆಸಿ ಪರಿಶೀಲಿಸಿದ್ದಾರೆ.

ಬೇಸಿಗೆಯಲ್ಲಿ ಐಸ್ ಕ್ರೀಂ, ತಂಪು ಪಾನೀಯಗಳಿಗೆ ಮುಗಿಬೀಳುವ ಜನರು ಹೆಚ್ಚು. ಬೇಸಿಗೆ ಹಿನ್ನೆಲೆ ಅಲರ್ಟ್ ಆಗಿರುವ ಅಧಿಕಾರಿಗಳು ಐಸ್ ಕ್ರೀಂ, ಕೂಲ್ ಡ್ರಿಂಕ್ಸ್ ಘಟಕಗಳ ಮೇಲೆ ಎಫ್‌ಎಸ್‌ಎಸ್‌ಎಐ ದಾಳಿ ಮಾಡಿದೆ. ನಗರದ ಹಾಗೂ ವಿವಿಧ ಜಿಲ್ಲೆಗಳಲ್ಲಿ ಕಾರ್ಯಾಚರಣೆ ಮಾಡಲಾಗಿದ್ದು, ಆಹಾರ ಇಲಾಖೆ ಅಧಿಕಾರಿಗಳು ಸ್ಯಾಂಪಲ್ ಕಲೆಕ್ಟ್ ಮಾಡಿ ಪ್ರಯೋಗಾಲಯಕ್ಕೆ ಕಳುಹಿಸಿದ್ದಾರೆ. ಇತ್ತೀಚೆಗೆ ಹೊಟೇಲ್‌ಗಳಲ್ಲಿ ಪ್ಲಾಸ್ಟಿಕ್ ಬಳಸಿ ಇಡ್ಲಿ ಹಿಟ್ಟು ಬೇಯಿಸುವುದು, ಹಸಿರು ಬಣ್ಣ ಹಾಕಿಟ್ಟ ಬಟಾಣಿ ಕಾಳುಗಳು ತಿನ್ನಲು ಅಸುರಕ್ಷಿತ ಎಂದು ಆರೋಗ್ಯ ಇಲಾಖೆ ವರದಿ ನೀಡಿತ್ತು.

ಖುಷಿಯಿಂದ ತಿನ್ನುವ ಪನ್ನೀರ್ ಕೂಡ ಡೇಂಜರ್!: ಆಹಾರ ಪದಾರ್ಥಗಳಲ್ಲಿ ರಾಸಾಯನಿಕ ಬಳಕೆಗಳ ಆರೋಪ ಕೇಳಿಬರುತ್ತಿದ್ದು, ಪನ್ನೀರ್ ಸೇರಿ ಇತರೆ ಆಹಾರ ಉತ್ಪನ್ನಗಳ ಸ್ಯಾಂಪಲ್ ಪಡೆದು ಟೆಸ್ಟ್‌ಗೆ ಒಳಪಡಿಸಲಾಗಿತ್ತು. ಇದೀಗ ಅದರ ವರದಿ ಬಂದಿದ್ದು, ಪನ್ನೀರ್‌ನಲ್ಲಿ ಬ್ಯಾಕ್ಟೀರಿಯಾ ಅಂಶಗಳು ಪತ್ತೆಯಾಗಿರುವುದು ದೃಢವಾಗಿದೆ. ಆ ಮೂಲಕ ಪನ್ನೀರ್ ಪ್ರಿಯರಿಗೆ ಆಹಾರ ಇಲಾಖೆ ಶಾಕ್ ನೀಡಿದೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಮಾ.26– ವಿ.ವಿ.ಮೊಹಲ್ಲಾ ವಿಭಾಗ ವ್ಯಾಪ್ತಿಯಲ್ಲಿ ನಿರ್ವಹಣಾ ಕೆಲಸದ ನಿಮಿತ್ತ ಮಾರ್ಚ್ 27 ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆವರೆಗೆ ವಿಜಯನಗರ 4ನೇ ಹಂತ, ಕೆ.ಹೆಚ್.ಬಿ ಕಾಲೋನಿ, ಹೂಟಗಳ್ಳಿ, ಬೆಳವಾಡಿ, ಬಸವನಪುರ, ಮರಟಿಕ್ಯಾತನಹಳ್ಳಿ, ಪಂಚಚಾರ್ಯ ಲೇಔಟ್, ಕೆ.ಹೆಮ್ಮನಹಳ್ಳಿ, ಲಿಂಗದೇವರ ಕೊಪ್ಪಲು, ಇಲವಾಲ, ಹೂಟಗಳ್ಳಿ ಕೆಆರ್‌ಎಸ್ ರೋಡ್, ಆದಿತ್ಯಾ ಬಡಾವಣೆ, ಎಸ್‌ಆರ್‌ಎಸ್ ಕಾಲೋನಿ, ಕೂರ್ಗಳ್ಳಿ, ಎನ್‌ಹೆಚ್‌ಬಿ ಕಾಲೋನಿ, ಬೆಳವಾಡಿ ಕೈಗಾರಿಕಾ ಪ್ರದೇಶ, ಶಾಹಿ ಗಾರ್ಮೆಂಟ್ಸ್, ಹೂಟಗಳ್ಳಿ ಕೈಗಾರಿಕಾ ಪ್ರದೇಶ, ಕೂರ್ಗಳ್ಳಿ ಕೈಗಾರಿಕಾ ಪ್ರದೇಶ, ಗ್ರ್ಯಾಂಡ್ ಮೌರ್ಯ ಹೋಟೆಲ್, ರಿಲಾಯನ್ಸ್, ಮಾಸ್ ಫರ್ನಿಚರ್ಸ್, ಯಶಸ್ವಿನಿ ಕಲ್ಯಾಣ ಮಂಟಪ, ಸೌಪರ್ಣಿಕ ಅಪಾರ್ಟ್‌ಮೆಂಟ್ ಹಿನಕಲ್, ಎಸ್‌ವಿಇಐ ಕಾಲೇಜು ಸುತ್ತಮುತ್ತ ಜಟ್ಟಿಹುಂಡಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಮಹಿಳಾ ಪೊಲೀಸರ ಬೈಕ್, ಸ್ಕೂಟರ್ ಸವಾರಿ

ಮೈಸೂರು ಪೊಲೀಸ್ ತರಬೇತಿ ಶಾಲೆಯಲ್ಲಿ ಮಹಿಳಾ ಪ್ರಶಿಕ್ಷಣಾರ್ಥಿಗಳಿಗೆ ದ್ವಿಚಕ್ರ ವಾಹನ ಚಾಲನಾ ತರಬೇತಿ



ಮೈಸೂರಿನ ಪೊಲೀಸ್ ತರಬೇತಿ ಶಾಲೆಯಲ್ಲಿ ಪ್ರಶಿಕ್ಷಣಾರ್ಥಿಗಳಿಗೆ ಗೇರ್ ಮತ್ತು ಗೇರ್‌ರಹಿತ ದ್ವಿಚಕ್ರ ವಾಹನಗಳ ಚಾಲನಾ ತರಬೇತಿಗೆ ದಕ್ಷಿಣ ವಲಯ ಡಿಐಜಿಪಿ ಡಾ.ಎಂ.ಬಿ.ಬೋರಲಿಂಗಯ್ಯ, ಚಾಲನೆ ನೀಡಿದರು. ಈ ವೇಳೆ ಶಾಲೆ ಪ್ರಾಂಶುಪಾಲರಾದ ಗೀತಾ ಪ್ರಸನ್ನ, ಎಸ್ಪಿ ಎನ್.ವಿಷ್ಣುವರ್ಧನ ಇನ್ನಿತರರಿದ್ದರು.

ಮೈಸೂರು, ಮಾ.26(ಆರ್‌ಕೆ)–ಇದೇ ಮೊದಲ ಬಾರಿಗೆ ಮೈಸೂರಿನ ಜ್ಯೋತಿ ನಗರದಲ್ಲಿರುವ ಪೊಲೀಸ್ ತರಬೇತಿ ಶಾಲೆಯಲ್ಲಿ ಪ್ರಶಿಕ್ಷಣಾರ್ಥಿಗಳಿಗೆ ಗೇರ್ ಮತ್ತು ಗೇರ್‌ರಹಿತ ದ್ವಿಚಕ್ರ ವಾಹನಗಳ ಚಾಲನಾ ತರಬೇತಿ ಇಂದಿನಿಂದ ಆರಂಭವಾಗಿದೆ.

ಶಾಲೆಯ ಕವಾಯತು ಮೈದಾನದಲ್ಲಿ ಇಂದು ದಕ್ಷಿಣ ವಲಯ ಡಿಐಜಿಪಿ ಡಾ.ಎಂ.ಬಿ.ಬೋರಲಿಂಗಯ್ಯ, ತರಬೇತಿಗೆ ಚಾಲನೆ ನೀಡಿದರು. ಈ ಸಂದರ್ಭ ಪ್ರಶಿಕ್ಷಣಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಬೈಕ್, ಸ್ಕೂಟರ್ ಚಾಲನಾ ತರಬೇತಿ ಪಡೆಯುವುದರಿಂದ ಕರ್ತವ್ಯದ ವೇಳೆ ತಾವೇ ನಿಗದಿತ ಸ್ಥಳಗಳಿಗೆ ತೆರಳಬಹುದಾಗಿದೆ. ಅಲ್ಲದೆ ಪುರುಷರ ಮೇಲಿನ ಅವಲಂಬನೆ ತಪ್ಪಿದಂತಾಗುತ್ತದೆ ಎಂದರು.

ಎಡಿಜಿಪಿ (ತರಬೇತಿ) ಅಲೋಕ್ ಕುಮಾರ್ ಅವರ ಪರಿಕಲ್ಪನೆಯಂತೆ ಬುನಾದಿ ತರಬೇತಿ ಪಡೆಯುವ ವೇಳೆ ಮಹಿಳಾ ಪೊಲೀಸರಿಗೆ ದ್ವಿಚಕ್ರವಾಹನ ಚಾಲನಾ ತರಬೇತಿ ನೀಡಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಹಂತಹಂತವಾಗಿ ಕಾರು ಚಾಲನಾ ತರಬೇತಿಯನ್ನು ಕಲಿತರೆ ನಿಮ್ಮ ಕರ್ತವ್ಯ ನಿರ್ವಹಣೆ ವೇಳೆ ಅನುಕೂಲವಾಗಲಿದೆ. ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸುತ್ತಿದ್ದು, ಅದರಂತೆ ಪೊಲೀಸ್ ಇಲಾಖೆಯಲ್ಲೂ ಉನ್ನತ ವ್ಯಾಸಂಗ ಮಾಡಿದ ಹಾಗೂ ತಾಂತ್ರಿಕ ಪದವಿ ಪಡೆದವರೂ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಇಲಾಖೆಗೆ ಅನುಕೂಲವಾಗುತ್ತಿದೆ. ಪ್ರತಿಯೊಬ್ಬರೂ ಕ್ಲೈಂಬಿಂಗ್, ಸ್ವಿಮ್ಮಿಂಗ್ ಹಾಗೂ ಡ್ರೈವಿಂಗ್ ಕಲಿತರೆ ತಮ್ಮ ಹಾಗೂ ಇತರರ ರಕ್ಷಣೆಗೆ ಸಹಕಾರಿಯಾಗಲಿದೆ ಎಂದರು.

ಇತರರನ್ನು ಅವಲಂಬಿಸದೆ ಮಹಿಳೆಯರು ಇಂದು ಎಲ್ಲಾ ರಂಗಗಳಲ್ಲೂ ದಾಪುಗಾಲಿಡುತ್ತಿದ್ದಾರೆ. ಸ್ವಸಾಮರ್ಥ್ಯದಿಂದ ಸ್ವಾವಲಂಬಿಗಳಾಗುತ್ತಿರುವ ಇಂದಿನ ದಿನಗಳಲ್ಲಿ ಪುರುಷರಿಗೇನೂ ಕಡಿಮೆಯಿಲ್ಲ ಎಂಬಂತೆ ಕೆಲಸ ಮಾಡುತ್ತಿರುವುದು ಶ್ಲಾಘನೀಯ. ಪೊಲೀಸ್ ಇಲಾಖೆಗೆ ಸೇರಿದ ಮೇಲೆ ಪ್ರತಿಯೊಂದು ವಿಷಯದಲ್ಲೂ ತರಬೇತಿ ಪಡೆದು ಕೌಶಲ ಬೆಳೆಸಿಕೊಳ್ಳಬೇಕು. ಆಗ ಮಾತ್ರ ಎಂತಹ ಕ್ಲಿಷ್ಟ ಸಂದರ್ಭದಲ್ಲೂ ಯಶಸ್ವಿಯಾಗಿ ಕರ್ತವ್ಯ ನಿರ್ವಹಿಸಬಹುದು ಎಂದು ಡಾ.ಬೋರಲಿಂಗಯ್ಯ ಇದೇ ಸಂದರ್ಭ ಮಹಿಳಾ ಪ್ರಶಿಕ್ಷಣಾರ್ಥಿಗಳಿಗೆ ಕಿವಿಮಾತು ಹೇಳಿದರು.

ಮೈಸೂರಿನ ಪೊಲೀಸ್ ತರಬೇತಿ ಶಾಲೆಯಲ್ಲಿ ಕೇವಲ ಮಹಿಳಾ ಪ್ರಶಿಕ್ಷಣಾರ್ಥಿಗಳಿಗೆ ಮಾತ್ರ ಬುನಾದಿ ತರಬೇತಿ ನೀಡುತ್ತಿದ್ದು, ಇದು ರಾಜ್ಯದ ಏಕೈಕ ಶಾಲೆಯಾಗಿದೆ. ಅದೇ ರೀತಿ ರಾಜ್ಯದಲ್ಲಿ ಇದೇ ಪ್ರಥಮ ಬಾರಿಗೆ ಮಹಿಳಾ ಪ್ರಶಿಕ್ಷಣಾರ್ಥಿಗಳಿಗೆ ವಾಹನ ಚಾಲನಾ ತರಬೇತಿ ಕಾರ್ಯಕ್ರಮ ಆರಂಭವಾಗಿದ್ದು, ಕಳೆದ ಜನವರಿಯಿಂದ ಅಕ್ಟೋಬರ್‌ವರೆಗೆ ನಡೆಯುವ ಬುನಾದಿ ತರಬೇತಿಯಲ್ಲಿ ಪಾಲ್ಗೊಂಡಿದ್ದ 257 ಮಹಿಳಾ ಪೊಲೀಸ್ ಕಾನ್‌ಸ್ಟೇಬಲ್‌ಗಳಿಗೆ ಗೇರ್ ಹಾಗೂ ಗೇರ್‌ರಹಿತ ದ್ವಿಚಕ್ರ ವಾಹನಗಳ ಚಾಲನಾ ತರಬೇತಿ ನೀಡಲಾಗುತ್ತಿದೆ. ಒಂದು ತಂಡದ 40 ಮಂದಿಗೆ 20 ದಿನಗಳ ಕಾಲ ವಾಹನ ಚಾಲನಾ ತರಬೇತಿ ನೀಡಲಾಗುವುದು ಎಂದು ಶಾಲೆಯ ಪ್ರಾಂಶುಪಾಲರಾದ ಗೀತಾ ಪ್ರಸನ್ನ ತಿಳಿಸಿದ್ದಾರೆ.

ಈ ಸಂದರ್ಭ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಎಸ್ಪಿ ಎನ್.ವಿಷ್ಣುವರ್ಧನ ಅವರು ತರಬೇತಿಗೆ ಅಗತ್ಯವಿರುವ ಬೈಕ್, ಸ್ಕೂಟರ್‌ಗಳನ್ನು ನಮ್ಮ ಜಿಲ್ಲಾ ಪೊಲೀಸ್ ಘಟಕದಿಂದ ಒದಗಿಸಲಾಗಿದ್ದು, ಈ ಅವಕಾಶವನ್ನು ಬಳಸಿಕೊಂಡು ಪ್ರಶಿಕ್ಷಣಾರ್ಥಿಗಳು ತಮ್ಮ ವೃತ್ತಿ ಜೀವನಕ್ಕೆ ಸಜ್ಜಾಗುವಂತೆ ಸಲಹೆ ನೀಡಿದರು.

ಮೈಸೂರು ಮಿತ್ರ

ಗುರುವಾರ 27 ಮಾರ್ಚ್ 2025

ಶಾಂತಿಯುತ ರಂಜಾನ್ ಆಚರಣೆಗೆ ಮನವಿ



ಹಲಗೂರು,ಮಾ.26– ಪವಿತ್ರ ರಂಜಾನ್ ಹಬ್ಬದ ಅಂಗವಾಗಿ ಹಲಗೂರು ಹೋಬಳಿಯ ಮುಸ್ಲಿಂ ಸಮುದಾಯದ ಮುಖಂಡರೊಂದಿಗೆ ಹಲಗೂರು ಪೊಲೀಸ್ ಠಾಣೆಯಲ್ಲಿ ಶಾಂತಿ ಸಭೆ ನಡೆಸಲಾಯಿತು.

ಈ ವೇಳೆ ಮಾತನಾಡಿದ ಹಲಗೂರು ವೃತ್ತ ನಿರೀಕ್ಷಕರಾದ ಶ್ರೀಧರ್, ಪವಿತ್ರ ರಂಜಾನ್ ಹಬ್ಬವನ್ನು ಕಳೆದ ಹಲವು ವರ್ಷಗಳಿಂದ ಹೇಗೆ ಶಾಂತಿಯುತವಾಗಿ ನಡೆಸಿಕೊಂಡು ಬಂದಿದ್ದೀರಿ ಹಾಗೆ ಈ ಬಾರಿಯು ಯಾವುದೇ ಅಹಿ ತಕರ ಘಟನೆಗಳು ನಡೆಯದಂತೆ ಎಚ್ಚರ ವಹಿಸಬೇಕು ಹಾಗೂ ಪ್ರಮುಖ ಬೀದಿಗಳಲ್ಲಿ ಸಂಚರಿಸುವಾಗ ಯಾವುದೇ ಘೋಷಣೆಗಳನ್ನು ಕೂಗಬಾರದು. ಹಬ್ಬದ ದಿನದಲ್ಲಿ ನಿಮ್ಮ ಮಕ್ಕಳು ಬೈಪಾಸ್‌ನಲ್ಲಿ ವೀಲಿಂಗ್ ಮಾಡುತ್ತಾರೆ. ನಿಮ್ಮ ಮಕ್ಕಳಿಗೆ ವೀಲಿಂಗ್ ಮಾಡದಂತೆ ಬುದ್ದಿವಾದ ಹೇಳಿ, ಇಲ್ಲವಾದರೆ ಅಂತವರ ವಿರುದ್ದ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು.

ಶೀಘ್ರದಲ್ಲೆ ಜಿಪಂ, ತಾಪಂ ಚುನಾವಣೆ

ಮಂಡ್ಯ, ಮಾ.26– ರಾಜ್ಯದಲ್ಲಿ ಶೀಘ್ರದಲ್ಲೇ ಜಿಪಂ, ತಾಪಂ ಚುನಾವಣೆ ನಡೆಯಲಿದ್ದು, ಪಕ್ಷದಿಂದ ಸಿದ್ಧತೆ ಕೈಗೊಳ್ಳುವಂತೆ ಆದೇಶ ಬಂದಿದೆ ಎಂದು ತಿಳಿಸಿದ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಆ ನಿಟ್ಟಿನಲ್ಲಿ ಕ್ಷೇತ್ರವಾರು ಸಭೆ ಮಾಡುತ್ತಿದ್ದು, ಈ ವರ್ಷ ಮಾರ್ಚ್‌ನಿಂದ ಮುಂದಿನ ಮಾರ್ಚ್‌ವರೆಗೆ ಸ್ಥಳೀಯ ಚುನಾವಣೆಗಳು ನಡೆಯುತ್ತವೆ. ಎಲ್ಲಾ ಚುನಾವಣೆ ಗಮನದಲ್ಲಿಟ್ಟುಕೊಂಡು ತಯಾರಿ ಮಾಡುತ್ತಿದ್ದೇವೆ ಎಂದರು.

ಮಂಡ್ಯ ಜಿಲ್ಲೆಯಲ್ಲಿ ಎರಡೂವರೆ ಲಕ್ಷ ಮತಗಳು ಬಿಜೆಪಿಗೆ ಇವೆ. ಸಂಸತ್ ಚುನಾವಣೆ ಬಂದಾಗ ಮೋದಿ ಮುಖ ನೋಡಿಕೊಂಡು ಅವರು ಮತ ಹಾಕುತ್ತಾರೆ. ಸ್ಥಳೀಯ ಚುನಾವಣೆ ಬಂದಾಗ ಅಭ್ಯರ್ಥಿ ನೋಡಿಕೊಂಡು ಮತ ಹಾಕುತ್ತಾರೆ. ಮಂಡ್ಯದಲ್ಲಿ ಜೆಡಿಎಸ್ ಕಾಂಗ್ರೆಸ್‌ಗೆ ಫೈಟ್ ಇದೆ. ಜೆಡಿಎಸ್ ನಾಯಕರ ರೀತಿ ಅವರು ಲೆಕ್ಕಕ್ಕೆ ಇಲ್ಲ ಎಂದು ನಾವು ಹೇಳಲ್ಲ. ಜೆಡಿಎಸ್‌ಗೆ ರಾಜ್ಯದಲ್ಲಿ ಶಕ್ತಿ ಇರುವ ಜಿಲ್ಲೆ ಇದ್ದರೆ ಮಂಡ್ಯ ಮಾತ್ರ. ನಮಗೂ ಸಹ ಇಲ್ಲಿ ಶಕ್ತಿ ಇದೆ. ನಾವು ಈ ಬಾರಿ ಮಾಡಿರುವ ಕೆಲಸದಿಂದ ಜನರು ಒಲವು ತೋರಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಹನಿಟ್ರ್ಯಾಪ್ ಬಗ್ಗೆ ಉನ್ನತ ಮಟ್ಟದ ತನಿಖೆ

ಎಐಸಿಸಿಯಿಂದ ಸಭೆ ನಡೆಸಲು ಆದೇಶ



ಸುದ್ದಿಗಾರರೊಂದಿಗೆ ಮಾತನಾಡುತ್ತಿರುವ ಸಚಿವ ಚಲುವರಾಯಸ್ವಾಮಿ.

ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರ ಹನಿ ಟ್ರ್ಯಾಪ್ ವಿಚಾರದ ಬಗ್ಗೆ ಮಾತನಾಡಿ, ರಾಜಣ್ಣ ಮನೆಯಲ್ಲಿ ಸಿಸಿ ಕ್ಯಾಮರಾ ಇಲ್ಲದಿರೋದು ನನಗೆ ಗೊತ್ತಿಲ್ಲ. ಗೃಹ ಸಚಿವರು ತನಿಖಾ ಅಧಿಕಾರಿಗೆ ದೂರು ಕೊಡಿ ಎಂದಿದ್ದಾರೆ. ದೂರು ಕೊಟ್ಟ ಬಳಿಕ ಕಾನೂನು ಬದ್ಧವಾಗಿ ತನಿಖೆ ಮಾಡಲು ಸಿಎಂ ಜೊತೆ ಮಾತಾಡುತ್ತೇವೆ ಎಂದಿದ್ದಾರೆ. ಸಿಎಂ ಸಹ ಉನ್ನತ ಮಟ್ಟದ ತನಿಖೆ ಮಾಡಿಸುತ್ತೇವೆ ಎಂದಿದ್ದು, ಈ ಬಗ್ಗೆ ತನಿಖೆ ಯಾಗುವುದು ಶತಸಿದ್ಧ ಎಂದರು.

ಹೆಚ್ಡಿಕೆ–ಜಾರಕಿಹೊಳಿ ಭೇಟಿ ವೈಯಕ್ತಿಕ: ಸಚಿವ ಸತೀಶ್ ಜಾರಕಿಹೋಳಿ ಮತ್ತು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಭೇಟಿಯಾಗಿದ್ದಾರೆ. ಯಾರು ಯಾರನ್ನೂ ಭೇಟಿ ಮಾಡಬೇಡಿ ಅನ್ನೋಕೆ ಆಗಲ್ಲ. ಅವರ ವೈಯಕ್ತಿಕ ಭೇಟಿಯಾಗಿದ್ದು, ಸತೀಶ್ ಜಾರಕಿಹೋಳಿ ನಮ್ಮ ಪಕ್ಷದ ಮುಖಂಡರು, ಮಂತ್ರಿಯಾಗಿದ್ದಾರೆ. ಕುಮಾರಸ್ವಾಮಿ ಮತ್ತು ಸತೀಶ್ ಜಾರಕಿಹೋಳಿ ಭೇಟಿ ರಾಜಕೀಯ ಭೇಟಿ ಆಗಿರಲ್ಲ. ರಾಜಕೀಯವಾಗಿ ಕುಮಾರಸ್ವಾಮಿಯನ್ನು ಸತೀಶ್ ಜಾರಕಿಹೋಳಿ ಭೇಟಿ ಮಾಡೋ ಅವಶ್ಯಕತೆ ಇಲ್ಲ. ಹಾಗೆ ಸತೀಶ್ ಜಾರಕಿಹೋಳಿಯನ್ನು ಕುಮಾರಸ್ವಾಮಿ ಭೇಟಿ ಮಾಡೋ ಅವಶ್ಯಕತೆ ಇಲ್ಲ ಇವರ ಭೇಟಿ ಯಾಕೆ ಆಯಿತು ಎಂಬುದು ನನಗೂ ಸಹ ಗೊತ್ತಿಲ್ಲ ಎಂದು ಹೇಳಿದರು.

ಮಂಡ್ಯ ವಿವಿಗೆ ಹಾಸನ ಸೇರಿದರೆ ತಪ್ಪೇನು?

ಮಂಡ್ಯ ಅಭಿವೃದ್ಧಿಯನ್ನು ದೇವೇಗೌಡ, ಕುಮಾರಸ್ವಾಮಿ, ರೇವಣ್ಣ ಸಹಿಸುವುದಿಲ್ಲ. ಕೃಷಿ ವಿವಿಯನ್ನು ಹಾಸನಕ್ಕೆ ತಗೊಂಡು ಹೋಗಬೇಕು ಅಂತ ಆಸೆ ಇಟ್ಟುಕೊಂಡಿದ್ದ ರೇವಣ್ಣ ಆಸೆ ನಿರಾಸೆ ಆಗಿದೆ. ಮಂಡ್ಯ ಕೃಷಿ ವಿವಿಗೆ ಹಾಸನದ ವಿವಿ ವಿಲೀನಕ್ಕೆ ಹೆಚ್.ಡಿ.ರೇವಣ್ಣ ವಿರೋಧ ವ್ಯಕ್ತಪಡಿಸಿದ್ದಾರೆ. ಅವರ ತಂದೆ ಮಂಡ್ಯ ನನ್ನ ಹೃದಯ ಅಂತಾರೆ. ಅವರ ತಮ್ಮ ಮಂಡ್ಯ–ಹಾಸನ ನನ್ನ ಎರಡೂ ಕಣ್ಣು ಅಂತಾರೆ. ರೇವಣ್ಣ ಮಂಡ್ಯಕ್ಕೆ ಬರಲ್ಲ, ಮಂಡ್ಯಕ್ಕೆ ನಮಗೂ ಸಂಬಂಧ ಇಲ್ಲ ಅಂತಾರೆ. ಇದು ಯಾವ ನ್ಯಾಯ.

– ಚಲುವರಾಯಸ್ವಾಮಿ

ಕೆಆರ್‌ಎಸ್ ಡ್ಯಾಂನಿಂದ ನದಿಗೆ ನೀರು ಹರಿದ ವಿಚಾರ

ಡ್ಯಾಂ ನಿರ್ವಹಣೆ ವೇಳೆ ಗೇಟ್ ಓಪನ್ ಆಗಿ ನೀರು ಹರಿದಿದೆ

ಮಂಡ್ಯ, ಮಾ.26– ಶ್ರೀರಂಗಪಟ್ಟಣ ತಾಲೂಕಿನಲ್ಲಿರುವ ಕೃಷ್ಣರಾಜ ಸಾಗರದ ಡ್ಯಾಂನ ನಿರ್ವಹಣೆ ವೇಳೆ ಅಕಸ್ಮಾತಾಗಿ ಗೇಟ್ ತೆರೆದು ನೀರು ನದಿಗೆ ಹರಿದಿದೆ ಹೊರತು ತಮಿಳುನಾಡಿಗೆ ನೀರು ಬಿಡುವ ಉದ್ದೇಶದಿಂದ ನೀರನ್ನು ಬಿಡಲಾಗಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಸ್ಪಷ್ಟಪಡಿಸಿದರು.



ಬುಧವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರತಿ ವರ್ಷ ಡ್ಯಾಂ ಅನ್ನು ನಿರ್ವಹಣೆ ಮಾಡಬೇಕು. 80 ಅಡಿಗೆ ಬರುವ ಮುಂಚೆ ನಿರ್ವಹಣೆ ಮಾಡು ವುದು ವಾಡಿಕೆಯಾಗಿದೆ. ಸದ್ಯ ಡ್ಯಾಂನಲ್ಲಿ 107 ಅಡಿ ನೀರಿದ್ದು, ಇನ್ನೇನು ಮಳೆ ಬರುವ ವಾತಾವರಣ ಸಹ ಇರುವುದರಿಂದ ನಿರ್ವಹಣೆ ಮಾಡುವ ವೇಳೆ ಗೇಟ್ ಓಪನ್ ಆಗಿದೆ ಎಂದು ಹೇಳಿದರು.

ಬೆಳಗ್ಗೆ 8 ಗಂಟೆಗೆ ಗೇಟ್ ಓಪನ್ ಆಗಿರೋದು ತಿಳಿದಿದೆ. ಇದರಿಂದ ಸ್ವಲ್ಪ ನೀರು ಹೋಗಿರುವುದು ಸತ್ಯ. ಸಂಜೆ 5 ಗಂಟೆ ಒಳಗೆ ತಾಂತ್ರಿಕ ತಂಡ ಈ ಗೇಟ್ ಬಂದ್ ಮಾಡಿದ್ದಾರೆ. ಸುಮಾರು 600 ರಿಂದ 700 ಕ್ಯೂಸೆಕ್ ನೀರು ಹೋಗಿರಬೇಕು ಅಷ್ಟೇ. ಡ್ಯಾಂ ನಿರ್ಮಾಣ ಮಾಡಿದಾಗಿನಿಂದ ಬೇರೆ ಯಾವ ಕೆಲಸ ಆಗಿಲ್ಲ. ಹೀಗಾಗಿ ಈ ರೀತಿ ಆಗಿದೆ. ಅದನ್ನು ಸರಿಪಡಿಸುವ ಕೆಲಸವನ್ನು ಮಾಡಲಾಗಿದೆ ಎಂದು ತಿಳಿಸಿದರು.

ಅಧಿಕಾರಿಗಳಿಗೆ ಅವರದ್ದೇ ಆದ ಲಿಮಿಟ್ ಇರುತ್ತದೆ. ಅಧಿಕಾರಿಗಳು ನೀರಾವರಿ ಸಚಿವರು ಮತ್ತು ನಮ್ಮ ಗಮನಕ್ಕೆ ತಂದಿದ್ದಾರೆ. ತಮಿಳುನಾಡಿಗೆ ನೀರು ಬಿಡಲು ಹೀಗೆ ಮಾಡಿಲ್ಲ. ತಮಿಳುನಾಡಿನವರು ನೀರು ಕೇಳದೇ ಹೇಗೆ ಬಿಡೋಕೆ ಸಾಧ್ಯ. ಕಣ್ತಪ್ಪಿನಿಂದ ಗೇಟ್ ಓಪನ್ ಆಗಿದೆ ಅಷ್ಟೇ. ಅಧಿಕಾರಿಗಳು ಸಮಯ ಪ್ರಜ್ಞೆ ಮೆರೆದು ಬೇಗ ಸರಿಪಡಿಸಿದ್ದಾರೆ. ಮಾತನಾಡುವವರು ನೋಡಿಕೊಂಡು ಮಾತಾಡಬೇಕು. ನೂರಾರು ವರ್ಷಗಳು ಆಗಿರೋ ಕಾರಣ ಗೇಟ್‌ಗಳ ರಿವ್ಯೂ ಮಾಡಬೇಕು ಎಂದು ಸ್ಪಷ್ಟಪಡಿಸಿದರು.

ಪಿಎಲ್‌ಡಿ ಬ್ಯಾಂಕ್: ಕಾಂಗ್ರೆಸ್ ಬೆಂಬಲಿಗರ ಗೆಲುವು

ಕೆ.ಆರ್.ಪೇಟೆ,ಮಾ.26– ಫೆ.8ರಂದು ನಡೆದಿದ್ದ ತಾಲೂಕು ಪ್ರಾಥಮಿಕ ಕೃಷಿ ಭೂ ಅಭಿವೃದ್ಧಿ ಸಹಕಾರ ಬ್ಯಾಂಕ್ (ಪಿಎಲ್‌ಡಿ ಬ್ಯಾಂಕ್) ನೂತನ ಆಡಳಿತ ಮಂಡಳಿಯ ಚುನಾವಣೆಯ ಫಲಿತಾಂಶವು ರಾಜ್ಯ ಉಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಸುಮಾರು ಒಂದೂವರೆ ತಿಂಗಳ ನಂತರ ಇಂದು ಮತ ಎಣಿಕೆ ನಡೆದು ಫಲಿತಾಂಶ ಹೊರಬಿದ್ದಿದ್ದು, ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು 10 ಸ್ಥಾನಗಳಲ್ಲಿ ಗೆಲ್ಲುವ ಮೂಲಕ ಅಧಿಕಾರದ ಚುಕ್ಕಾಣಿ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.



ಪಿಎಲ್‌ಡಿ ಬ್ಯಾಂಕ್ ನೂತನ ಆಡಳಿತ ಮಂಡಳಿಯ ನಿರ್ದೇಶಕರಾಗಿ ಆಯ್ಕೆಯಾದ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳನ್ನು ಅಭಿನಂದಿಸಲಾಯಿತು.

ಜೆಡಿಎಸ್–ಬಿಜೆಪಿ ಮೈತ್ರಿ ಕೂಟವು ಕೇವಲ 4 ಸ್ಥಾನಗಳಿಗೆ ತೃಪ್ತಿ ಪಟ್ಟುಕೊಂಡಿದೆ. ಸಾಲಗಾರರಲ್ಲದ ಸಾಮಾನ್ಯ ಕ್ಷೇತ್ರದ 14ನೇ ವೃತ್ತದಿಂದ ಸ್ಪರ್ಧಿಸಿದ್ದ ಕೆ.ಟಿ.ಚಕ್ರಪಾಣಿ ಅವರು 477 ಮತಗಳನ್ನು ಪಡೆದು ವಿಜಯದ ನಗೆ ಬೀರುವ ಮೂಲಕ, ತಮ್ಮ ಹತ್ತಿರದ ಪ್ರತಿಸ್ಪರ್ಧಿ ಎ.ಎನ್.ದೇವರಾಜು(404) ಅವರನ್ನು 73 ಮತಗಳ ಅಂತರದಿಂದ ಸೋಲಿಸಿದ್ದಾರೆ.

ವಿಜೇತ ಅಭ್ಯರ್ಥಿಗಳ ವಿವರ: ಸಾಲಗಾರರ 1 ವೃತ್ತದಿಂದ ಅರೆಬೊಪ್ಪನಹಳ್ಳಿ ಸುನಿಲ್, 2ನೇ ವೃತ್ತದಿಂದ ಅಣ್ಣೇಚಾಕನಹಳ್ಳಿ ನಾಗರಾಜು, 3ನೇ ವೃತ್ತದಿಂದ ಬಂಡಿಹೊಳೆ ನಾಗೇಶ್, 4ನೇ ವೃತ್ತ ಬಿ.ಎಸ್.ಸುರೇಶ್, 5ನೇ ವೃತ್ತದಿಂದ ಸಿಮೆಂಟ್ ಮಂಜು ಅವಿರೋಧ ಆಯ್ಕೆ, 6ನೇ ವೃತ್ತದಿಂದ ಮಾಳಗೂರು ಜಗದೀಶ್ ಅವಿರೋಧ ಆಯ್ಕೆ, 7ನೇ ವೃತ್ತದಿಂದ ಶೀಳನೆರೆ ರಾಮೇಗೌಡ, 8ನೇ ವೃತ್ತದಿಂದ ಕಬ್ಬಲಗೆರೆಪುರ ಪುಟ್ಟಸ್ವಾಮಿಗೌಡ, 9ನೇ ವೃತ್ತದಿಂದ ಮಂಜುಳಾ ಕೃಷ್ಣೇಗೌಡ, 10ನೇ ವೃತ್ತದಿಂದ ಬಣ್ಣೇನಹಳ್ಳಿ ಧನಂಜಯ, 11ನೇ ವೃತ್ತದಿಂದ ಅರಳಕುಪ್ಪೆ ಎ.ಸಿ.ಮೋಹನ್, 12ನೇ ವೃತ್ತದಿಂದ ಅಕ್ಕಿಹೆಬ್ಬಾಳು ರಾಜಾನಾಯಕ್, 13ನೇ ವೃತ್ತದಿಂದ ಕವಿತಚಂದ್ರೇಗೌಡ, 14ನೇ ವೃತ್ತದಿಂದ ಕೆ.ಟಿ.ಚಕ್ರಪಾಣಿ ಅವರುಗಳು ಗೆಲುವು ಸಾಧಿಸಿದ್ದಾರೆ.

ಈ ಪೈಕಿ ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿಗಳಾದ 1ನೇ ವೃತ್ತದ ಸುನಿಲ್, 4ನೇ ವೃತ್ತದ ಬಿ.ಎಸ್.ಸುರೇಶ್, 10ನೇ ವೃತ್ತದ ಬಿ.ಜಿ.ಧನಂಜಯ, 2ನೇ ವೃತ್ತ ಅಣ್ಣೇಚಾಕನಹಳ್ಳಿ ನಾಗರಾಜು ಆಯ್ಕೆಯಾಗಿದ್ದಾರೆ.

ಚುನಾವಣಾಧಿಕಾರಿಯಾಗಿ ತಾ.ಪಂ. ಇಓ ಕೆ.ಸುಷ್ಮ ಮತ್ತು ತಾಲೂಕು ಸಹಕಾರ ಅಭಿವೃದ್ದಿ ಅಧಿಕಾರಿ ಹೆಚ್.ಬಿ.ಭರತ್ ಕುಮಾರ್, ಬ್ಯಾಂಕಿನ ಕಾರ್ಯದರ್ಶಿ ರವಿಕುಮಾರ್ ಕಾರ್ಯನಿರ್ವಹಿಸಿದರು. ಕಾಂಗ್ರೆಸ್ ಬೆಂಬಲಿತರಾದ 4ನೇ ವೃತ್ತದಿಂದ ಸಿಮೆಂಟ್ ಮಂಜು, 5ನೇ ವೃತ್ತದಿಂದ ಮಾಳಗೂರು ಜಗದೀಶ್ ಅವಿರೋಧ ಆಯ್ಕೆಗೊಂಡಿದ್ದರು.

ಗೌರವಿಸುವುದು, ಸ್ಮರಿಸುವುದು ಪುಣ್ಯದ ಕೆಲಸ: ಮಾಧುಸ್ವಾಮಿ

ಮೈಸೂರಿನ ಡಿ.ಮಾದೇಗೌಡರಿಗೆ ಜಿ.ಎಸ್.ಬೊಮ್ಮೇಗೌಡ ಸಮಾಜ ಸೇವಾ ಪ್ರಶಸ್ತಿ ಪ್ರದಾನ

ಮಂಡ್ಯ,ಮಾ.26– ಒಬ್ಬರನ್ನು ಗೌರವಿಸುವುದು ಮತ್ತು ಸ್ಮರಿಸುವುದು ಶ್ರೇಷ್ಠ ಕೆಲಸ. ಇಂದು ಡಿ.ಮಾದೇಗೌಡರನ್ನು ಗೌರವಿಸುವುದರ ಜೊತೆಗೆ ಜಿ.ಎಸ್. ಬೊಮ್ಮೇಗೌಡರನ್ನು ಸ್ಮರಿಸುತ್ತಿರುವುದು ಪುಣ್ಯದ ಕೆಲಸ ಎಂದು ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ ಅಭಿಪ್ರಾಯಪಟ್ಟರು.

ನಗರದ ಕರ್ನಾಟಕ ಸಂಘದ ವತಿಯಿಂದ ಕರ್ನಾಟಕ ಸಂಘದಲ್ಲಿ ನಡೆದ ಜಿ.ಎಸ್.ಬೊಮ್ಮೇಗೌಡ ಸಮಾಜಸೇವಾ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ನಮ್ಮಲ್ಲಿರುವ ಒಳ್ಳೆಯದನ್ನು ಒಳ್ಳೆಯ ಗುಣಗಳನ್ನು ಅರ್ಥ ಮಾಡಿಕೊಂಡು ಅದಕ್ಕೊಂದು ರೂಪು ಕೊಡುವ ಕೆಲಸವನ್ನು ಸಂಸ್ಕಾರ ಎನ್ನುತ್ತಾರೆ. ಹಾಗೆ ಮಾಡುವವರ ಸಂಸ್ಕಾರವಂತಾದರೆ ಅದನ್ನು ಬೆಳೆಸಿಕೊಳ್ಳುವವರಲ್ಲಿ ನಮ್ಮಲ್ಲಿ ಸಂಸ್ಕೃತಿ ರೂಪಗೊಳ್ಳುತ್ತದೆ. ನಮ್ಮ ಸಂಸ್ಕೃತಿ ಉಳಿಯಬೇಕು ಅಂದರೆ ನಮ್ಮಲ್ಲಿರುವ ಒಳ್ಳೆಯತನಕ್ಕೆ ಹೊಳಪು ಕೊಟ್ಟು ಮಿಂಚುವಂತೆ ಮಾಡಿದರೆ ವ್ಯಕ್ತಿತ್ವ ಉಳಿಯುತ್ತದೆ. ಬೇರೆಯದ್ದು ಶ್ರೇಷ್ಠ ಎಂದು ನಮ್ಮನ್ನು ನಾವು ಕಡೆಗಣಿಸುವುದು ಶ್ರೇಯಸ್ಸು ತರುವ ಕೆಲಸವಲ್ಲ ಎಂದರು.



ಸಿಐಡಿಬಿ ಮಾಜಿ ಅಧ್ಯಕ್ಷ ಡಿ.ಮಾದೇಗೌಡ ಅವರಿಗೆ ಜಿ.ಎಸ್.ಬೊಮ್ಮೇಗೌಡ ಸಮಾಜ ಸೇವಾ ಪ್ರಶಸ್ತಿಯನ್ನು ಪ್ರದಾನ ಮಾಡಿ ಗೌರವಿಸಲಾಯಿತು.

ಹಳೆ ಮೈಸೂರು ಭಾಗದಲ್ಲಿ ಮಂಡ್ಯ ಜಿಲ್ಲೆಯಲ್ಲಿದ್ದಂತಹ ನಾಯಕತ್ವ ಯಾವ ಜಿಲ್ಲೆಗೂ ಇರಲಿಲ್ಲ. ಹಾಸನ, ಕೋಲಾರ, ತುಮಕೂರಿನಲ್ಲಿ ಮಂಡ್ಯದಂತಹ ನಾಯಕತ್ವ ಇರಲಿಲ್ಲ. ಹೆಚ್ಚಿನ ಮೌಲ್ಯ ಗುಣಾಧಾರಿತ ರಾಜಕಾರಣ ಇತ್ತು. ಯಾರು ನಿಜವಾಗಿ ಸೇವೆ ಮಾಡುತ್ತಿದ್ದವರು ಜನನಾಯಕರು ಜನಸೇವಕರು ಆಗಿದ್ದರು.ಯಾವುದೇ ಕೌಟುಂಬಿಕ ಹಿನ್ನೆಲೆ ಇಲ್ಲದೇ ಜನರ ಮಧ್ಯದಲ್ಲಿ ತಾವೇ ತಾವಾಗಿ ಬೆಳಕಿಗೆ ಬಂದು ವ್ಯಕ್ತಿಯಾಗಿ ಶಕ್ತಿಯಾಗಿ ರೂಪುಗೊಂಡದ್ದು ಈ ಜಿಲ್ಲೆಯಲ್ಲಿ ಮಾತ್ರ. ಅಂದಿನ ನಾಯಕರನ್ನು ಸ್ಮರಣೆ ಮಾಡಬೇಕು. ಅಂತಹ ನಾಯಕತ್ವ ಗುಣ ಎಲ್ಲರಲ್ಲಿ ಬರಬೇಕು ಎಂದು ಹೇಳಿದರು. ಇಂದು ಪ್ರಶಸ್ತಿಗೆ ಭಾಜನರಾಗಿರುವ ಡಿ.ಮಾದೇಗೌಡ ಅವರು ಮೈಸೂರು ನಗರದ ಯೋಜನೆಯನ್ನು ಮನೆಗಿಂತ ನಗರ ಶ್ರೇಷ್ಠ ಎಂದು ಭಾವಿಸಿ ಬೆಳೆಸಿದರು. ಇದು ಮುಂದೆ ಬರುವವರಿಗೆ ಮಾರ್ಗದರ್ಶನ ಆಗಬೇಕು. ಇಂಥವರನ್ನು ಗುರುತಿಸಬೇಕು. ಅಂತ್ಯವಾದ ಮೇಲೆ ಬೆಲೆ ಬರುವುದಿಲ್ಲ. ಯಾವುದೇ ಅಪೇಕ್ಷೆ ಇಲ್ಲದೆ 'ಪರೋಪಕಾರಂ ಇದಂ ಶರೀರಂ' ಎಂದು ಭಾವಿಸಿ ನಮ್ಮ ಶಕ್ತಿಯನ್ನು ಸಮಾಜಕ್ಕಾಗಿ ಬಳಸಬೇಕು. ಬೇರೆಯವರಿಗೆ ಗೌರವ ಮಾಡಿದಾಗ ಸಾರ್ಥಕ ಭಾವ ಉಂಟಾಗುತ್ತದೆ. ಮಾದೇಗೌಡರ ಸೇವೆ ಸಮಾಜಕ್ಕೆ ಇನ್ನಷ್ಟು ಸಿಗಲಿ ಎಂದು ಆಶಿಸಿದರು.

ಜಿ.ಎಸ್.ಬೊಮ್ಮೇಗೌಡರವರು ಕೆ.ವಿ.ಶಂಕರಗೌಡರ ಜೊತೆ ರಾಜಕೀಯ ರೂವಾರಿಯಾಗಿ ಬೆಳೆದಿದ್ದಾರೆ. ಅವರ ಜೊತೆ ತಾಳ್ಮೆ ಸಹನೆಯಿಂದ ನಡೆದಿದ್ದಾರೆ ಕೆ.ವಿ.ಶಂಕರಗೌಡರ ಅಂತ ಸ್ನೇಹಿತರು ಸಿಗುವುದಿಲ್ಲ ಎಂದು ಅವರು ಸ್ಮರಿಸಿದರು.

ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ. ಶ್ರೀಕಂಠೇಗೌಡ ಅಭಿನಂದನಾ ನುಡಿಗಳನ್ನಾಡಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿದರು. ಸಿಐಟಿಬಿ ಮಾಜಿ ಅಧ್ಯಕ್ಷ ಡಿ.ಮಾದೇಗೌಡ ಅವರಿಗೆ ಜಿ.ಎಸ್.ಬೊಮ್ಮೇಗೌಡ ಸಮಾಜ ಸೇವಾ ಪ್ರಶಸ್ತಿಯನ್ನು 25000 ನಗದು ಪ್ರಶಸ್ತಿ ಫಲಕದೊಂದಿಗೆ ಪ್ರದಾನ ಮಾಡಲಾಯಿತು. ಈ ಸಂದರ್ಭದಲ್ಲಿ ಜಿ.ಎಸ್.ಬೊಮ್ಮೇಗೌಡರ ಭಾವಚಿತ್ರಕ್ಕೆ ಗಣ್ಯರು ಪುಷ್ಪನಮನ ಸಲ್ಲಿಸಿದರು.

ಮೂರನೇ ಪುಟದಿಂದ

ಹರೀಶ್‌ಗೌಡ ನೇತೃತ್ವದಲ್ಲಿ ಭಾರಿ ಪ್ರತಿಭಟನೆ

ಬದಲಾಗಿ ಸಾಲ ಮರುಪಾವತಿ ಮಾಡಿದ್ದರೂ ಸಾಲದ ನೋಟಿಸ್ ನೀಡುತ್ತಿದ್ದಾರೆ ಎಂದು ಕಿಡಿಕಾರಿದರು. ಒಂದು ವರ್ಷದಿಂದ ಯಾವುದೇ ಸಾಲ ನೀಡಿಲ್ಲ. ಬದಲಾಗಿ ನೋಟಿಸ್ ನೀಡಲಾಗು ತ್ತಿದೆ. ರೈತರಿಗೆ ಅನ್ಯಾಯ ಮಾಡುತ್ತಿದ್ದಾರೆ. ಪ್ರತಿಭಟನೆ ಮಾಡುತ್ತೇವೆ ಎಂದು ತಿಳಿಸಿದಾಗ ಕೆಲವರಿಗೆ ಹಣ ಬಿಡುಗಡೆ ಮಾಡಿ ದ್ದಾರೆ. ಇತ್ತ ಡಿಸಿಸಿ ಬ್ಯಾಂಕ್ ದಿವಾಳಿಯಾಗುವ ಹಂತ ತಲುಪುತ್ತಿದೆ. ಈ ಹಿಂದೆ ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಗಳಾಗಿದ್ದಾಗ ಯಾವುದೇ ಪಕ್ಷ ಎಂದು ನೋಡದೇ ಎಲ್ಲಾ ರೈತರ ಸಾಲ ಮನ್ನಾ ಮಾಡಿದ್ದಾರೆ. ಆದರೆ ಈಗ ರೈತರಿಗೆ ರಾಜ ಕೀಯ ಪಕ್ಷ ಅಡ್ಡಗಾಲಾಗಿದೆ. ರೈತರನ್ನು ಟಾರ್ಗೆಟ್ ಮಾಡಲಾಗುತ್ತಿದ್ದು, ಅವರಿಗೆ ಬೇಕಿರುವವರಿಗೆ ಸಾಲ ನೀಡಲಾಗುತ್ತಿದೆ. ಮತ್ತೊಂದೆಡೆ ಸಾಲ ಪಡೆದು ಕೊಳ್ಳಲು ಲಂಚ ನೀಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ರಾಜಕೀಯ ಒತ್ತಡವೂ ಹೆಚ್ಚುತ್ತಿದೆ ಎಂದು ವಾಗ್ದಾಳಿ ನಡೆಸಿದರು.

ಮೈಸೂರು ಭಾಗದಲ್ಲಿ 27 ಸಹಕಾರ ಬ್ಯಾಂಕ್‌ಗಳಿದ್ದು, ಅವುಗಳಲ್ಲಿ 12 ಬ್ಯಾಂಕಿಗೆ ಆಡಳಿತಾಧಿಕಾರಿಗಳನ್ನು ನೇಮಿಸಿ ಕೊಂಡಿದ್ದಾರೆ. ಸಹಕಾರ ಇಲಾಖೆ ಯಾವುದೇ ಸಂಸ್ಥೆಯ ಹಿಡಿತದಲ್ಲಿ ಇಲ್ಲ. ಯಾವುದೇ ಶಾಸಕರು ಪ್ರಶ್ನಿಸಿದರೂ ಪ್ರಯೋಜನವಾಗುತ್ತಿಲ್ಲ. ಮತ್ತೊಂದೆಡೆ ಮೈಸೂರು–ಚಾಮರಾಜನಗರದ ಕಾಂಗ್ರೆಸ್ ಶಾಸಕರ ಮಾತಿಗೆ ಕಿಮ್ಮತ್ತು ಇಲ್ಲದಂತಾಗಿದೆ ಎಂದು ದೂರಿದರು.

ಹುಣಸೂರಿನಲ್ಲಿ 15 ವರ್ಷಗಳಿಂದಲೂ ಅಧಿಕಾರದಲ್ಲಿದ್ದ ನಾಯಕರು ಇದರ ಇಂತಹ ಅನ್ಯಾಯದ ಹಿಂದೆ ಇದ್ದಾರೆ. ಅವರೇ ಖುದ್ದು ರೈತರಿಗೆ ಸಾಲ ನೀಡದಂತೆ ನಿರ್ದೇಶನ ನೀಡಿದ್ದಾರೆ. ಬ್ಯಾಂಕ್ ಆಡಳಿತಾಧಿಕಾರಿ ರೈತರ ಹಿತ ಮರೆತು ಆ ನಾಯಕರ ಮಾತಿಗೆ ಕುಣಿಯುತ್ತಿದ್ದಾರೆ. ನಾನು ಒಬ್ಬ ಹಾಲಿ ಶಾಸಕನಾಗಿ ರೈತರ ಪರ ಇಲ್ಲಿ ಬಂದು ಪ್ರತಿಭಟನೆ ಮಾಡುವ ದುರ್ಗತಿ ಬಂದಿದೆ. ನಾನು ಸಹಕಾರಿ ಬ್ಯಾಂಕ್ ವಿಚಾರದಲ್ಲಿ ತಲೆ ಹಾಕಬಾರದು ಎಂದು ಈ ರೀತಿ ಮಾಡುತ್ತಿದ್ದಾರೆ. ನಾನು ಕೈ ಮುಗಿದು ಕೇಳುತ್ತೇನೆ. ರೈತರ ಪರವಾಗಿ ಕೆಲಸ ಮಾಡಿ, ನಾನು ಬರೋದೇ ಇಲ್ಲ. ರೈತರಿಗಾಗಿ ಎಲ್ಲವನ್ನೂ ತ್ಯಾಗ ಮಾಡ್ತಿನಿ. ನಾನು ಬರಬಾರದು ಅಂತಾನೇ ಚುನಾವಣೆ ನಡೆಸಿಲ್ಲ. ಈಗ ಸಾಲ ನೀಡದೆ ಇನ್ನೊಂದು ರೀತಿಯ ಆಟ ಆಡ್ತಿದ್ದಾರೆ. ಎಂದು ಸರ್ಕಾರದ ವಿರುದ್ಧ ಜಿ.ಡಿ. ಹರೀಶ್‌ಗೌಡ ಆಕ್ರೋಶ ಹೊರ ಹಾಕಿದರು.

ನಾನು ಈ ಹಿಂದೆ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷನಾಗಿದ್ದಾಗ 370 ಕೋಟಿ ರೂ. ಠೇವಣಿ ಹಣವಿತ್ತು. ಅದನ್ನು 1 ಸಾವಿರ ಕೋಟಿಗೆ ಹೆಚ್ಚಿಸಿದ್ದೆ. ಸಾಲವನ್ನು 600ರಿಂದ 1600 ಕೋಟಿ ರೂ ನೀಡಲಾಗಿತ್ತು. ನಬಾರ್ಡ್ ನೀಡಿ ರುವ 120 ಕೋಟಿ ರೂ. ಹಣವನ್ನು 300 ಕೋಟಿ ರೂ.ಗೆ ಹೆಚ್ಚಿಸಲಾಗಿತ್ತು. ಆದರೆ, ಇಂದು ಠೇವಣಿ ಹಣ ಕೇವಲ 900 ಕೋಟಿ ರೂ. ಇದ್ದು, ಎಂಸಿಡಿಸಿಸಿ ಬ್ಯಾಂಕ್ ದಿವಾಳಿ ಹಂತ ತಲುಪುತ್ತಿದೆ ಎಂದರು.

ಸದನದಲ್ಲಿ ಹನಿಟ್ರ್ಯಾಪ್ ಚರ್ಚೆ ಮಾಡಿ ಯಾವ ಸಂದೇಶ ಕೊಟ್ಟರು?

ಮೈಸೂರಿನಲ್ಲಿ ಶಾಸಕ ಜಿ.ಡಿ. ಹರೀಶ್‌ಗೌಡ ಹನಿಟ್ರ್ಯಾಪ್ ಕುರಿತು ಪ್ರತಿಕ್ರಿಯಿಸಿ, ನಾವು ಸರಿಯಾಗಿದ್ದರೆ ಯಾರು ಯಾಕೆ ನಮ್ಮನ್ನು ಟ್ರ್ಯಾಪ್ ಮಾಡುತ್ತಾರೆ. ನಾವು ಹೆಣ್ಣು ಮಕ್ಕಳನ್ನು ನೋಡುವ ದೃಷ್ಟಿ ಸರಿ ಇರಬೇಕು. ನಮ್ಮ ದೃಷ್ಟಿ ಸರಿ ಇದ್ದಾಗ ಯಾವ ತಪ್ಪು ನಡೆಯಲ್ಲ. ಸಾವಿರ ಜನ ಬಂದು ನಮ್ಮನ್ನು ಮಾತಾಡಿಸಲಿ ನಮ್ಮ ನೋಟ ಸರಿ ಇದ್ದರೆ ಏನೂ ಆಗಲ್ಲ. ಹನಿಟ್ರ್ಯಾಪ್ ವಿಚಾರ ಸದನದಲ್ಲಿ ಚರ್ಚೆ ಆಗಬಾರದಿತ್ತು. ಯಾರಿಗೆ ಸಮಸ್ಯೆ ಆಗಿದೆಯೋ ಅವರು ಹೋಗಿ ದೂರು ಕೊಟ್ಟು ಸಮಸ್ಯೆ ಬಗೆಹರಿಸಿಕೊಳ್ಳಬಹುದಿತ್ತು. ಸದನದಲ್ಲಿ ಹನಿಟ್ರ್ಯಾಪ್ ಚರ್ಚೆ ಮಾಡಿಯುವ ಶಾಸಕರಿಗೆ ಯಾವ ಸಂದೇಶ ಕೊಟ್ಟರು? ಇದರ ಅಗತ್ಯ ಏನಿತ್ತು?.

ಆರು ವರ್ಷ ಉಚ್ಚಾಟನೆ

ಪಾಟೀಲ್ ಯತ್ನಾಳ್ ದೆಹಲಿಯಲ್ಲೇ ಇದ್ದರು. ತಮ್ಮನ್ನು ಹೈಕಮಾಂಡ್ ಉಚ್ಚಾಟಿಸಲಿದೆ ಎಂಬ ನಿರೀಕ್ಷೆಯೇ ಇಲ್ಲದ ಯತ್ನಾಳ್ ದೆಹಲಿಯಿಂದ ಹೊರಡುವ ಮುನ್ನ ಸುದ್ದಿಗಾರರೊಂದಿಗೆ ಮಾತನಾಡುತ್ತಾ, ವಿಜಯೇಂದ್ರ, ಯಡಿಯೂರಪ್ಪ ವಿರುದ್ಧ ವಾಗ್ದಾಳಿ ನಡೆಸಿದ್ದರು. ತಮ್ಮ ಬೆಂಬಲಿಗರಿಗೆ ವರಿಷ್ಠರು ನೋಟೀಸ್ ನೀಡಿದ್ದನ್ನೂ ಕೂಡ ಆಕ್ಷೇಪಿಸಿದ್ದರು. ನೋಟೀಸ್ ನೀಡುವುದಾದರೆ ಮೊದಲು ವಿಜಯೇಂದ್ರ ಅವರಿಗೆ ನೋಟೀಸ್ ನೀಡಬೇಕು ಎಂದು ಆಗ್ರಹಿಸಿ ದ್ದರು. ವಿಜಯೇಂದ್ರ ಲೋಕಸಭಾ ಚುನಾವಣೆಯಲ್ಲಿ ಚಾಮರಾಜನಗರದಿಂದ ಬೀದರ್‌ವರಗೂ ಪಕ್ಷ ವಿರೋಧಿ ಕೆಲಸ ಮಾಡಿದ್ದಾರೆ. ಅವರ ಮನೆಯಲ್ಲೇ ಪಕ್ಷ ವಿರೋಧಿ ಕೆಲಸ ನಡೆಯುತ್ತಿದೆ ಎಂದು ಹರಿಹಾಯ್ದಿದ್ದರು. 'ವಿಜಯೇಂದ್ರ ಹಠಾವೋ, ಬಿಜೆಪಿ ಬಚಾವೋ' ಹೋರಾಟ ನಮ್ಮದು ಎಂದು ಹೇಳುವ ಮೂಲಕ ರಾಜ್ಯಾಧ್ಯಕ್ಷರ ಸ್ಥಾನದಿಂದ ವಿಜಯೇಂದ್ರ ಅವರನ್ನು ತೆಗೆಯಲಾಗುತ್ತದೆ ಎಂದು ಪರೋಕ್ಷವಾಗಿ ಹೇಳಿದ್ದರು. ಆದರೆ, ಅವರು ದೆಹಲಿಯಿಂದ ಹೊರಡುತ್ತಲೇ ಉಚ್ಚಾಟನೆ ಆದೇಶ ಹೊರಬಿದ್ದಿತು.

ಉಚ್ಚಾಟನೆಯಿಂದಾಗಿ ಯತ್ನಾಳ್ ಅವರ ಶಾಸಕ ಸ್ಥಾನಕ್ಕೆ ಯಾವುದೇ ಧಕ್ಕೆ ಇಲ್ಲ. ಆದರೆ ಅವರನ್ನು ಅನ್ ಅಟ್ಯಾಚ್ ಮೆಂಬರ್ ಎಂದು ಪರಿಗಣಿಸಲಾಗುತ್ತದೆ. ಅವರು ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಭಾಗವಹಿಸುವಂತಿಲ್ಲ, ಅದೇ ವೇಳೆ ಯತ್ನಾಳ್ ಯಾವುದಾದರೂ ಪಕ್ಷ ಸೇರಿದರೆ ಶಾಸಕ ಸ್ಥಾನವನ್ನೂ ಕಳೆದುಕೊಳ್ಳಬೇಕಾಗುತ್ತದೆ.

2ನೇ ಬಾರಿ ಉಚ್ಚಾಟನೆ: ಬಸನಗೌಡ ಪಾಟೀಲ್ ಯತ್ನಾಳ್ ಎರಡನೇ ಬಾರಿ ಬಿಜೆಪಿಯಿಂದ ಉಚ್ಚಾಟನೆಯಾಗಿದ್ದಾರೆ. ಈ ಮೊದಲು 2015ರಲ್ಲಿ ವಿಜಯಪುರದ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್ ಚುನಾವಣೆಗೆ ಬಿಜೆಪಿ ಟಿಕೆಟ್ ಬಯಸಿದ್ದರು. ಆದರೆ ಟಿಕೆಟ್ ಸಿಗದ ಕಾರಣ ಸ್ವತಂತ್ರ ಅಭ್ಯರ್ಥಿಯಾಗಿ ಕಣಕ್ಕಿಳಿದು ಗೆಲುವು ಸಾಧಿಸಿದ್ದರು. ಬಿಜೆಪಿ ಅಭ್ಯರ್ಥಿಯ ವಿರುದ್ಧ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿದ ಆರೋಪದ ಮೇಲೆ ಪಕ್ಷ ಅವರನ್ನು 6 ವರ್ಷಗಳ ಕಾಲ ಉಚ್ಚಾಟನೆ ಮಾಡಿತ್ತು. ನಂತರ ಉಚ್ಚಾಟನೆಯನ್ನು ಹಿಂಪಡೆದ ಬಿಜೆಪಿ 2018ರ ಚುನಾವಣೆಯಲ್ಲಿ ಯತ್ನಾಳ್ ಅವರಿಗೆ ಬಿಜೆಪಿ ಟಿಕೆಟ್ ನೀಡಿತ್ತು. ಈ ಚುನಾವಣೆಯಲ್ಲಿ ಯತ್ನಾಳ್ 6 ಸಾವಿರ ಮತಗಳಿಂದ ಕಾಂಗ್ರೆಸ್ ಅಭ್ಯರ್ಥಿ ವಿರುದ್ಧ ಜಯಗಳಿಸಿದ್ದರು.

ಸತ್ಯವಂತರಿಗಿದು ಕಾಲವಲ್ಲ

ಮಾತನಾಡಿದ್ದಕ್ಕಾಗಿ, ಏಕವ್ಯಕ್ತಿ ದಬ್ಬಾಳಿಕೆಯನ್ನು ತೆಗೆದುಹಾಕಿ ಮತ್ತು ಉತ್ತರ ಕರ್ನಾಟಕವನ್ನು ಅಭಿವೃದ್ಧಿಪಡಿಸಲು ವಿನಂತಿಸಿದ್ದಕ್ಕಾಗಿ ಪಕ್ಷವು ನನ್ನನ್ನು 6 ವರ್ಷಗಳ ಕಾಲ ಪಕ್ಷದಿಂದ ಹೊರಹಾಕಿದೆ. 'ತಪ್ಪನ್ನು .. ತಪ್ಪು ಎಂದು ತೋರಿಸಿದ್ದಕ್ಕೆ ' ನನಗೆ ಸಿಕ್ಕ ಪ್ರತಿಫಲವಿದು' ಎಂದು ಹೇಳಿದ್ದಾರೆ.

ಹೋರಾಟ ನಿಲ್ಲಿಸುವುದಿಲ್ಲ: ಇದೇ ವೇಳೆ, ಉಚ್ಚಾಟನೆಯಾದರೂ ಹೋರಾಟ ನಿಲ್ಲಿಸುವುದಿಲ್ಲ ಎಂದು ಘೋಷಣೆ ಮಾಡಿರುವ ಯತ್ನಾಳ್, ಕೆಲವು ಸ್ಥಾಪಿತ ಹಿತಾಸಕ್ತಿಗಳು ತಮ್ಮ ಕಾರ್ಯಸೂಚಿಯನ್ನು ಯಶಸ್ವಿಯಾಗಿ ಮುಂದುವರಿಸುವಲ್ಲಿ ತಮ್ಮ ಪಾತ್ರವನ್ನು ವಹಿಸಿವೆ. ನನ್ನನ್ನು ಉಚ್ಚಾಟಿಸಿದ ನಿರ್ಧಾರವು ಭ್ರಷ್ಟಾಚಾರ, ಕುಟುಂಬ ರಾಜಕೀಯ, ಉತ್ತರ ಕರ್ನಾಟಕದ ಅಭಿವೃದ್ಧಿ ಮತ್ತು ಹಿಂದುತ್ವದ ವಿರುದ್ಧದ ನನ್ನ ಹೋರಾಟವನ್ನು ತಡೆಯುವುದಿಲ್ಲ. ನಾನು ನನ್ನ ಜನರಿಗೆ ಅದೇ ಹುರುಪು ಮತ್ತು ದೃಢತೆಯಿಂದ ಸೇವೆ ಸಲ್ಲಿಸುವುದನ್ನು ಮುಂದುವರಿಸುತ್ತೇನೆ. ಎಲ್ಲಾ ಕಾರ್ಯಕರ್ತರಿಗೆ, ಹಿತೈಷಿಗಳಿಗೆ, ಸ್ನೇಹಿತರಿಗೆ, ಪರಿಚಯಸ್ಥರಿಗೆ, ಸ್ವಾಮೀಜಿಗಳಿಗೆ, ಮಾಧ್ಯಮಗಳಿಗೆ, ಬೆಂಬಲದ ಆಧಾರಸ್ತಂಭವಾಗಿರುವ ನನ್ನ ಕುಟುಂಬಕ್ಕೆ ಮತ್ತು ಸರ್ವಶಕ್ತನಿಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ ಎಂದು ಟ್ವೀಟ್ ಮಾಡಿದ್ದಾರೆ.

ಟೋಲ್ ಸುಂಕ ಏರಿಕೆ

ಪರಿಷ್ಕೃತ ದರಗಳು ಅನ್ವಯವಾಗಲಿವೆ. ಗರಿಷ್ಠ ಶೇ.5ರಷ್ಟು ಮತ್ತು ಕನಿಷ್ಠ ಶೇ.3ರಷ್ಟು ಹೆಚ್ಚಳವಾಗಲಿದೆ.

ರಾಷ್ಟ್ರೀಯ ಹೆದ್ದಾರಿಗಳ ಮೇಲಿನ ಸುಂಕಗಳಿಗೆ ಕೇಂದ್ರ ಸರ್ಕಾರ ಶೀಘ್ರವೇ ಹೊಸ ನೀತಿ ಪ್ರಕಟಿಸಲಿದೆ. ಇದರಲ್ಲಿ ಗ್ರಾಹಕರಿಗೆ ಕೆಲವು ರಿಯಾಯಿತಿ ದೊರೆಯಲಿದೆ ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದರೂ ಅದಿನ್ನೂ ಜಾರಿಯಾಗಿಲ್ಲ. 2008ರ ನೀತಿಯೇ ಅನ್ವಯವಾಗಲಿದೆ.

ಕರ್ನಾಟಕದಲ್ಲಿ ಸುಮಾರು 66 ಟೋಲ್ ಪ್ಲಾಜಾಗಳಿವೆ. ಟೋಲ್ ಸುಂಕ ಹೆಚ್ಚಾಗುವ ಟೋಲ್ ಪ್ಲಾಜಾಗಳಲ್ಲಿ ಕಣಿಮಿಣಿಕೆ ಮತ್ತು ಶೇಷಗಿರಿಹಳ್ಳಿ (ಬೆಂಗಳೂರು–ಮೈಸೂರು), ನಂಗ್ಲಿ (ಬೆಂಗಳೂರು–ತಿರುಪತಿ), ಬಾಗೇಪಲ್ಲಿ (ಬೆಂಗಳೂರು–ಹೈದರಾಬಾದ್), ಸಾದಹಳ್ಳಿ (ಬೆಂಗಳೂರು ವಿಮಾನ ನಿಲ್ದಾಣ ರಸ್ತೆ), ಮತ್ತು ಹುಲಿಕುಂಟೆ ಮತ್ತು ನಲ್ಲೂರು ದೇವನಹಳ್ಳಿ(ಸ್ಯಾಟಲೈಟ್ ಟೌನ್ ರಿಂಗ್ ರಸ್ತೆ) ಟೋಲ್ ಪ್ಲಾಜಾಗಳು ಸೇರಿವೆ.

ಹನಿಟ್ರ್ಯಾಪ್ ಪ್ರಕರಣದ ತನಿಖೆ ಸ್ವರೂಪ; ಪೊಲೀಸ್ ಮಹಾನಿರ್ದೇಶಕರ ತೀರ್ಮಾನಕ್ಕೆ

ಅವರು ಮಾಡುವ ಶಿಫಾರಸು ಆಧರಿಸಿ ಸಂಪುಟದಲ್ಲಿ ಚರ್ಚೆ; ನಿರ್ಣಯ

ಬೆಂಗಳೂರು, ಮಾ.26(ಕೆಎಂಶಿ)– ಹನಿಟ್ರ್ಯಾಪ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸಹಕಾರಿ ಸಚಿವ ಕೆ.ಎನ್.ರಾಜಣ್ಣ ನೀಡಿರುವ ದೂರಿನ ಬಗ್ಗೆ ಯಾವ ರೀತಿಯ ತನಿಖೆ ನಡೆಸಬೇಕೆಂದು ಸರ್ಕಾರ, ರಾಜ್ಯ ಪೊಲೀಸ್ ಮಹಾನಿರ್ದೇಶಕರನ್ನು ಕೇಳಿದೆ.

ಪೊಲೀಸ್ ಮಹಾನಿರ್ದೇಶಕರು ರಾಜ್ಯದ ಅಡ್ವೋಕೇಟ್ ಜನರಲ್ ಅವರ ಸಲಹೆ ಕೇಳಿದ್ದಾರೆ.

ಸಿಬಿಐ, ನಿವೃತ್ತ ನ್ಯಾಯಮೂರ್ತಿಗಳ ಅಧ್ಯಕ್ಷತೆಯಲ್ಲಿ ತನಿಖೆ ಇಲ್ಲವೆ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಎಸ್ಐಟಿ, ಸಿಐಡಿ ಅಥವಾ ಇನ್ನಿತರ ಯಾವ ತನಿಖೆ ನಡೆಸಬಹುದಾಗಿದೆ ಎಂದು ಪೊಲೀಸ್ ಮಹಾನಿರ್ದೇಶಕರನ್ನು ಕೇಳಿದೆ.

ಇದರ ಹಿನ್ನೆಲೆಯಲ್ಲೇ ಅಡ್ವೋಕೇಟ್ ಜನರಲ್ ಜೊತೆ ಸಮಾಲೋಚನೆ ನಡೆಸಿರುವ ಮಹಾನಿರ್ದೇಶಕರು ಅವರ ಅಭಿಪ್ರಾಯ ಪಡೆದು, ನಾಳೆ ಬೆಳಗ್ಗೆಯೇ ಸರ್ಕಾರಕ್ಕೆ ವರದಿ ಸಲ್ಲಿಸುವ ಸಾಧ್ಯತೆ ಇದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಗುರುವಾರ ನಡೆಯಲಿರುವ ಸಚಿವ ಸಂಪುಟ ಸಭೆಗೂ ಮುನ್ನ ಪೊಲೀಸ್ ಮಹಾನಿರ್ದೇ ಶಕರು ವರದಿ ನೀಡಿದರೆ, ಅವರ ಶಿಫಾರಸಿನಂತೆ ಸಂಪುಟ ಸಭೆಯಲ್ಲಿ ಚರ್ಚೆ ನಡೆಸಿ, ತನಿಖೆ ಸ್ವರೂಪದ ಆದೇಶ ಹೊರಬೀಳಲಿದೆ. ತಮ್ಮ ಮೇಲೆ ಹನಿಟ್ರ್ಯಾಪ್ ಮಾಡಲು ಕೆಲವು ಕಿಡಿಗೇಡಿಗಳು ನಿರಂತರ ಪ್ರಯತ್ನ ನಡೆಸಿದ್ದರು ಎಂಬುದಾಗಿ ಸಹಕಾರಿ ಸಚಿವ ರಾಜಣ್ಣ ನಿನ್ನೆ ಸಂಜೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರನ್ನು ಭೇಟಿ ಮಾಡಿ ದೂರು ಸಲ್ಲಿಸಿದ್ದರು.

ಈ ದೂರನ್ನು ನಾನು ಸ್ವೀಕರಿಸಲಾಗುವುದಿಲ್ಲ, ಇದನ್ನು ಮನವಿ ಎಂಬುದಾಗಿ ಪರಿಗಣಿಸಿ, ಪರಿಶೀಲಿಸುತ್ತೇನೆ. ಆದರೆ, ನೀವು ಪೊಲೀಸರಿಗೇ ದೂರು ನೀಡಬೇಕೆಂದು ರಾಜಣ್ಣ ಅವರಿಗೆ ಪರಮೇಶ್ವರ್ ಸಲಹೆ ಮಾಡಿದ್ದರು. ಗೃಹ ಸಚಿವರ ಸಲಹೆಯಂತೆ ರಾಜಣ್ಣ ಅಲ್ಲಿಯೇ ಇದ್ದ ಹಿರಿಯ ಅಧಿಕಾರಿಗಳಿಗೆ ಮತ್ತೊಂದು ಪ್ರತಿ ನೀಡಿ ದೂರಿನ ಬಗ್ಗೆ ತನಿಖೆ ನಡೆಸುವಂತೆ ಮನವಿ ಮಾಡಿದ್ದರು. ಈ ಬೆಳವಣಿಗೆ ನಂತರ ಗೃಹ ಸಚಿವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ನಿನ್ನೆ ರಾತ್ರಿಯೇ ಭೇಟಿ ಮಾಡಿ ಸಮಾಲೋಚನೆ ನಡೆಸಿದರು.

ಪ್ರಕರಣವನ್ನು ಸಿಐಡಿಗೆ ನೀಡೋಣ ಎಂದು ಗೃಹ ಸಚಿವರು ನೀಡಿದ ಸಲಹೆಯನ್ನು ತಳ್ಳಿಹಾಕಿದ ಮುಖ್ಯಮಂತ್ರಿ ಪೊಲೀಸ್ ಮಹಾನಿರ್ದೇಶಕರಿಗೆ ಯಾವ ಸ್ವರೂಪದ ತನಿಖೆ ನಡೆಸಬೇಕೆಂಬ ಬಗ್ಗೆ ವರದಿ ಕೇಳಿ. ಅವರು ನೀಡುವ ವರದಿ ಆಧಾರದ ಮೇಲೆ ತೀರ್ಮಾನ ತೆಗೆದುಕೊಳ್ಳೋಣ ಎಂಬ ಸಲಹೆ ಮೇರೆಗೆ ಗೃಹ ಸಚಿವರು ರಾಜಣ್ಣ ಅವರ ದೂರನ್ನು ಡಿಜಿ–ಐಜಿಪಿ ಅಂಗಳಕ್ಕೆ ಹಾಕಿದ್ದಾರೆ.

ಸಿಎಂ ಸಿದ್ದರಾಮಯ್ಯರಿಗೂ ಹನಿಟ್ರ್ಯಾಪ್ ಭಯ ಇದೆಯೇ...?

- ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅನುಮಾನ
- ಪ್ರಕರಣದ ಬಗ್ಗೆ ಹೆಚ್ಚಾಗಿ ಮಾತನಾಡದಿರುವುದಕ್ಕೆ ನಾನಾ ಶಂಕೆ!

ಬೆಂಗಳೂರು, ಮಾ.26(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧವೂ ಹನಿಟ್ರ್ಯಾಪ್ ಆಗಿರಬಹುದೆಂಬ ಭಯ ಅವರನ್ನು ಕಾಡುತ್ತಿರಬಹುದು ಎಂದು ವಿಧಾನಪರಿಷತ್‌ನ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಇಂದಿಲ್ಲಿ ಅನುಮಾನ ವ್ಯಕ್ತಪಡಿಸಿದ್ದಾರೆ.



ಹನಿಟ್ರ್ಯಾಪ್ ಬಗ್ಗೆ ಮುಖ್ಯಮಂತ್ರಿಗಳು ಒಂದು ಮಾತನ್ನೂ ಆಡಿಲ್ಲ, ತನಿಖೆ ಮಾಡೋಣ ಎಂದಿದ್ದನ್ನು ಬಿಟ್ಟರೆ ಬೇರೆ ಏನನ್ನೂ ಹೇಳಿಲ್ಲ. ಅಂದ ಮೇಲೆ ಮುಖ್ಯಮಂತ್ರಿ ಅವರಿಗೆ ಹನಿಟ್ರ್ಯಾಪ್ ಭಯ ಏನಾದರೂ ಇದೆಯೇ ಎಂಬ ಅನುಮಾನ ಬಂದಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನನ್ನದೂ ಎಲ್ಲಾದರೂ ಇದೆಯೇ ಎಂಬ ಭಯ ಅವರಿಗೆ ಇರಬೇಕು. ಅದೇ ಕಾರಣಕ್ಕೆ ಅವರು ಹೆಚ್ಚಿನ ತನಿಖೆಗೆ ಆಸಕ್ತಿ ತೋರುತ್ತಿಲ್ಲ ಎಂದರು. ಬಿಜೆಪಿಯ ಯಾವ ನಾಯಕರೂ ಹನಿ ಟ್ರ್ಯಾಪ್‌ಗೆ ಸಿಲುಕಿಲ್ಲ. ಇದ್ದಿದ್ದರೆ ಈ ವೇಳೆಗಾಗಲೇ ದೊಡ್ಡ ರಂಪ–ರಾಮಾಯಣ ಆಗಿರುತ್ತಿತ್ತು. ಅದನ್ನು ಕೂಡಲೇ ತನಿಖೆಗೂ ಆದೇಶಿಸುತ್ತಿದ್ದರು.

ತಮ್ಮದೇ ಮನೆ ಮೇಲೆ ಕಲ್ಲು ಹೊಡೆದುಕೊಂಡಿದ್ದಾರೆ: ಹನಿಟ್ರ್ಯಾಪ್ ವಿವಾದ ಕಾಂಗ್ರೆಸ್ ಮನೆ ಮೇಲೆ ಕಾಂಗ್ರೆಸ್‌ನವರೇ ಕಲ್ಲು ಹೊಡೆದಂತಿದೆ ಎಂದು ಟೀಕಿಸಿದ ಅವರು, ಆ ಪಕ್ಷದಲ್ಲಿ ತಮ್ಮ ನಾಯಕರ ವಿರುದ್ಧವೇ ಹನಿಟ್ರ್ಯಾಪ್ ಮಾಡಿಸುವ ಸ್ಥಿತಿಯನ್ನು ಕಾಣುತ್ತಿದ್ದೇವೆ ಎಂದರು. ಬೆಂಗಳೂರು ಮಹಾನಗರ ಪಾಲಿಕೆ ಆಡಳಿತದಂತೆ ರಾಜ್ಯದ ಆಡಳಿತ ಸ್ಥಿತಿಯೂ ಗಾರ್ಬೇಜ್ ಸಿಟಿಯಂತಾಗಿದೆ, ತಮ್ಮ 46 ವರ್ಷಗಳ ರಾಜಕೀಯ ಜೀವನದಲ್ಲಿ ಇಂಥ ಕೆಟ್ಟ ಸರ್ಕಾರ ನೋಡಿಲ್ಲ, ಅಭಿವೃದ್ಧಿ ಶೂನ್ಯವಾಗಿದೆ, ಕಾನೂನು–ಸುವ್ಯವಸ್ಥೆ ಸಂಪೂರ್ಣ ಕುಸಿದಿದೆ.

ರೈತರ ಸಮಸ್ಯೆಗಳಿಗೆ ಗಮನ ಕೊಡುತ್ತಿಲ್ಲ, ಹಿಂದುಳಿದ ಹಾಗೂ ದಲಿತರ ಸಮಸ್ಯೆಗಳನ್ನು ಮರೆಮಾಚಿದ್ದಾರೆ, ದುಡ್ಡು ಎಷ್ಟು ಹೊಡೆದಿರಿ, ಆಸ್ತಿ ಎಷ್ಟು ಮಾಡಿದ್ದೀರಿ, ಜನರಿಗೆ ಎಷ್ಟು ತೆರಿಗೆ ಹಾಕಿದ್ದೀರಿ, ಬೆಲೆ ಏರಿಕೆ ಎಷ್ಟು ಮಾಡಿದಿರಿ, ದಲಿತರ ಹಣ ಎಷ್ಟು ಲೂಟಿ ಮಾಡಿದ್ದೀರಿ, ಎಷ್ಟು ಜನರ ಹನಿಟ್ರ್ಯಾಪ್ ಮಾಡಿದಿರಿ, ಫೋನ್ ಟ್ಯಾಪಿಂಗ್ ಎಷ್ಟಾಗಿದೆ ಎಂಬ ಚರ್ಚೆಗಳೇ ನಡೆಯುತ್ತಿವೆ. ಪರಿಶಿಷ್ಟ ಜಾತಿ, ಪಂಗಡದ ಅಭಿವೃದ್ಧಿಗೆ ಮೀಸಲಿಟ್ಟ ಎಸ್‌ಇಪಿ/ಟಿಎಸ್‌ಪಿಯ 39 ಸಾವಿರ ಕೋಟಿ ರೂ.ಗಳನ್ನು ಕಾಂಗ್ರೆಸ್ ಸರ್ಕಾರ ಹಾಗೂ ಮುಖ್ಯಮಂತ್ರಿ ನುಂಗಿ ನೀರು ಕುಡಿದಿದ್ದಾರೆ ಎಂದು ಆರೋಪಿಸಿದರು.


ಯತ್ನಾಳ್‌ರನ್ನು ಹಿಂದೆ ನಾನೇ ಉಚ್ಚಾಟಿಸಿದ್ದೆ; ಈಗ ಎಲ್ಲವೂ ಸರಿಯಾಗಿಲ್ಲ: ಸದಾನಂದಗೌಡ ಟಾಂಗ್



ಬೆಂಗಳೂರು, ಮಾ.26– ಮಾಜಿ ಮುಖ್ಯಮಂತ್ರಿ, ಬಿಜೆಪಿ ಹಿರಿಯ ನಾಯಕ ಸದಾನಂದ ಗೌಡ ಅವರು ಯತ್ನಾಳ್ ಉಚ್ಚಾಟನೆಯನ್ನು ಸಮರ್ಥಿಸಿದ್ದಾರೆ. ಇದೇ ವೇಳೆ ಬಿವೈ ವಿಜಯೇಂದ್ರ ಬಣಕ್ಕೂ ಟಾಂಗ್ ಕೊಟ್ಟಿದ್ದಾರೆ.



ಬಿಜೆಪಿ ಪಕ್ಷದಲ್ಲಿ ಶಿಸ್ತು ಮುಖ್ಯ. ಶಿಸ್ತು ಮೀರಿದರೆ ಕ್ರಮ ಕೈಗೊಳ್ಳಲಾಗು ತ್ತದೆ. ಅದೆಷ್ಟೇ ದೊಡ್ಡ ಸಮುದಾಯದ ನಾಯಕರಾದರೂ ಶಿಸ್ತಿನಿಂದ ಇದ್ದರೆ ಮಾತ್ರ ಸಮುದಾಯ ಜೊತೆಗಿರುತ್ತದೆ ಎಂದು ಡಿ.ವಿ. ಸದಾನಂದಗೌಡ ಹೇಳಿದ್ದಾರೆ. ಬಸನಗೌಡ ಪಾಟೀಲ್ ಯತ್ನಾಳ್ ಶಿಸ್ತು ಮೀರಿ ಮಾತನಾಡಿದ್ದರು. ಈ ಹಿಂದೆ ಯತ್ನಾಳ್ ಅವರನ್ನು ನಾನೇ ಪಕ್ಷದಿಂದ ಉಚ್ಚಾಟನೆ ಮಾಡಿದ್ದೆ. ಆದರೆ ಅಶಿಸ್ತು ಮುಂದುವರಿಸಿದ ಕಾರಣ ಹೈಕಮಾಂಡ್ ಕ್ರಮ ಕೈಗೊಂಡಿದೆ. ಐವರಿಗೆ ನೋಟಿಸ್ ನೀಡಿದಾಗಲೇ ಒಬ್ಬರ ತಲೆದಂಡ ಸ್ಪಷ್ಟವಾಗಿತ್ತು ಎಂದು ಸದಾನಂದ ಗೌಡ ಹೇಳಿದ್ದಾರೆ. ರಾಜ್ಯ ಬಿಜೆಪಿ ಪಕ್ಷವನ್ನು ಬ್ಯಾಲೆನ್ಸ್ ಮಾಡಬೇಕಿದೆ. ಇದಕ್ಕಾಗಿ ಹೈಕಮಾಂಡ್ ನೋಟಿಸ್ ನೀಡಿದೆ. ಆದರೆ ಇದು ಯಾರಿಗೆ ಅರ್ಥವಾಗುತ್ತೆ ಎಂದು ಸದಾನಂದ ಗೌಡ ಹೇಳಿದ್ದಾರೆ. ಲಿಂಗಾಯತ ಸಮಾವೇಶ ಸಭೆ ರೇಣುಕಾಚಾರ್ಯ ಮೂಲಕ ಯಾರು ಮಾಡಿಸುತ್ತಾರೆ ಎನ್ನೋದು ಗೊತ್ತಿರುವ ಸಂಗತಿ ಎಂದು ಹೇಳುವ ಮೂಲಕ ಸದಾನಂದಗೌಡ ಪರೋಕ್ಷವಾಗಿ ವಿಜಯೇಂದ್ರಗೆ ಟಾಂಗ್ ನೀಡಿದ್ದಾರೆ. ಈ ಕುರಿತು ಹಲವು ಬಾರಿ ಕೋರ್ ಕಮಿಟಿ ಸಭೆಯಲ್ಲಿ ಉಲ್ಲೇಖಿಸಿದ್ದೇನೆ. ರಾಜ್ಯದಲ್ಲಿ ಪಕ್ಷ ಸಂಘಟನೆಗೆ ಆಗುತ್ತಿರುವ ಹಿನ್ನಡೆ ಕುರಿತು ಹೇಳಿದ್ದೇನೆ. ಉಚ್ಚಾಟನೆಯಿಂದ ರಾಜ್ಯ ಬಿಜೆಪಿಯಲ್ಲಿ ಎಲ್ಲವೂ ಸರಿಯಾಗಿದೆ ಎಂದಲ್ಲ. ವಿಜಯೇಂದ್ರ ಕಾರ್ಯಶೈಲಿ ಬಗ್ಗೆ ಬಹಿರಂಗವಾಗಿ ಮಾತನಾಡಲ್ಲ. ಆದರೆ ಹೈಕಮಾಂಡ್ ರಾಜ್ಯ ಬಿಜೆಪಿಯನ್ನು ಸರಿಮಾಡುವ ಕಾರ್ಯಕ್ಕೆ ಕೈಹಾಕಿದೆ. ಈಗಾಗಲೇ ಪಕ್ಷಕ್ಕೆ ಭಾರಿ ಡ್ಯಾಮೇಜ್ ಆಗಿದೆ. ಮೊದಲೇ ಕ್ರಮ ಕೈಗೊಂಡಿದ್ದರೆ ಇಷ್ಟು ಸಮಸ್ಯೆ ಆಗುತ್ತಿರಲಿಲ್ಲ. ಒಳಜಗಳ, ಬಣ ಜಗಳ ದಿಂದ ಕಾರ್ಯಕರ್ತರಿಗೂ ನೋವಾಗಿತ್ತು ಎಂದು ಸದಾನಂದಗೌಡ ಹೇಳಿದ್ದಾರೆ.

ಮೈಸೂರಲ್ಲಿವೆ ಕಸದ ರಸ್ತೆಗಳು....



ಮೈಸೂರು ಹೆಬ್ಬಾಳು ರಿಂಗ್ ರಸ್ತೆಯ ಆಜು-ಬಾಜು ರಸ್ತೆಗಳು, ಕೈಗಾರಿಕಾ ಪ್ರದೇಶಕ್ಕೆ ನೀರು ಸರಬರಾಜಾಗುವ ಟ್ಯಾಂಕ್ ರಸ್ತೆ ಕಸದ ಮಾರ್ಗಗಳಾಗಿವೆ. ಇಲ್ಲಿ ಪ್ರತಿನಿತ್ಯ ರಾಶಿ ರಾಶಿ ಕಸ ಸಂಗ್ರಹವಾಗುತ್ತಿದೆ. ಎಲ್ಲೆಲ್ಲಿಂದಲೋ ಬೈಕ್, ಕಾರುಗಳಲ್ಲಿ ಬಂದು ಕಸ ತಂದು ಸುರಿಯಲಾಗುತ್ತಿದೆ. ಜನ, ವಾಹನ ಸಂಚಾರಕ್ಕೆಂದು ರಸ್ತೆ ನಿರ್ಮಾಣವಾಗಿದ್ದು, ಈ ರೀತಿ ಕಸ ತಂದು ಸುರಿಯುತ್ತಿರುವುದರಿಂದ ಇದರ ವಾಸನೆಗೆ ಜನ ಹಾಗೂ ವಾಹನ ಸಂಚಾರ ಬಂದ್ ಆಗಿದೆ. ಇಲ್ಲಿರುವ ಹೋಟೆಲ್‌ನವರು, ಪಿಜಿಯವರು, ಚಿಕನ್-ಮಟನ್ ಅಂಗಡಿಗಳ ತ್ಯಾಜ್ಯವನ್ನು ಇಲ್ಲಿಯೇ ತಂದು ರಾಶಿ ಹಾಕಲಾಗುತ್ತಿದೆ. ಇದರ ಬಗ್ಗೆ ಇದುವರೆಗೂ ಯಾವ ಅಧಿಕಾರಿ ವರ್ಗ ಕ್ರಮಕ್ಕೆ ಮುಂದಾಗಿಲ್ಲದಿರುವುದು ವಿಷಾದದ ಸಂಗತಿ ಎಂದು ಸುತ್ತಮುತ್ತಲಿನ ನಿವಾಸಿಗಳು ಬೇಸರ ವ್ಯಕ್ತಪಡಿಸಿದ್ದಾರೆ.

ಹನಿಟ್ರ್ಯಾಪ್ ಹಿಂದೆ ದೊಡ್ಡ ಜಾಲವೇ ಇದೆ

ಮೈಸೂರು, ಮಾ.26(ಆರ್‌ಕೆ)- ನಮ್ಮ ಸರ್ಕಾರದ ಸಚಿವ ರಾಜಣ್ಣ ಅವರು ಹೇಳಿರುವಂತೆ ಹನಿಟ್ರ್ಯಾಪ್ ಹಿಂದೆ ಒಂದು ದೊಡ್ಡ ಜಾಲವೇ ಇದ್ದು, ತನಿಖೆ ಮೂಲಕ ಪತ್ತೆ ಮಾಡಬೇಕಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ತಿಳಿಸಿದ್ದಾರೆ.

ಮಂಗಳವಾರ ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಅವರು, ಎಲ್ಲಾ ಪಕ್ಷದ ಶಾಸಕರು, ಸಚಿವರ ಹನಿಟ್ರ್ಯಾಪ್ ನಡೆದಿದೆ. ಕಳೆದ ಬಿಜೆಪಿ ಸರ್ಕಾರದ ಅವಧಿಯಲ್ಲಿ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಸೇರಿದಂತೆ 17 ಶಾಸಕರು ಹಾಗೂ ಸಚಿವರ ಹನಿಟ್ರ್ಯಾಪ್ ವೀಡಿಯೋ ಇದೆ. ಮಾಧ್ಯಮಗಳಲ್ಲಿ ಪ್ರಸಾರ ಮಾಡದಂತೆ ಅವರು ಕೋರ್ಟ್‌ನಿಂದ ತಡೆ ತಂದಿದ್ದಾರೆ. ರಾಜಣ್ಣ ಅವರು ಇಂತಹುದೇ ಪಕ್ಷದವರು ಹನಿಟ್ರ್ಯಾಪ್ ಮಾಡಿದ್ದಾರೆ ಎಂದು ಎಲ್ಲಿಯೂ ಹೇಳಿಲ್ಲ. ಸರ್ಕಾರ ಬೀಳಿಸಲು ಹನಿಟ್ರ್ಯಾಪ್ ನಡೆದಿದೆ ಎನ್ನುವುದು ಸರಿಯಲ್ಲ ಎಂದರು.



ಹನಿಟ್ರ್ಯಾಪ್ ವಿಚಾರ ಸಂಬಂಧ ಪಟ್ಟಂತೆ ತನಿಖೆ ನಡೆದು ತಪ್ಪಿತಸ್ಥರ ವಿರುದ್ಧ ಪ್ರಕರಣ ದಾಖಲಿಸಲಾಗುವುದು. ರಾಜಕಾರಣಿಗಳಿಗೆ ಎಷ್ಟೋ ಮಂದಿ ಫೋನ್ ಮಾಡ್ತಾರೆ. ಕೆಲವೊಮ್ಮೆ ಯಾರು ಫೋನ್ ಮಾಡುತ್ತಿದ್ದಾರೆಂದು ಗೊತ್ತಾಗಲ್ಲ. ತಂತ್ರಜ್ಞಾನವನ್ನು ದುರುಪಯೋಗ ಮಾಡಿಕೊಂಡು ವೀಡಿಯೋ ಕಾಲ್ ಮಾಡಿದ ತಕ್ಷಣ ಈ ರೀತಿಯ ಕೃತ್ಯಗಳು ನಡೆಯುತ್ತಿರುತ್ತವೆ. ಹನಿಟ್ರ್ಯಾಪ್ ಮೂಲಕ ಬ್ಲಾಕ್ ಮೇಲ್ ಮಾಡುವವರಿಗೆ ತಕ್ಕ ಶಿಕ್ಷೆಯಾಗಲೇಬೇಕು. ಹಣ ಹಾಗೂ ಕೆಲಸ ಮಾಡಿಸಿಕೊಳ್ಳುವ ಉದ್ದೇಶದಿಂದ ಹನಿಟ್ರ್ಯಾಪ್ ಮಾಡುತ್ತಾರೆ. ಆದರೆ, ಇದೆಲ್ಲವೂ ತನಿಖೆಯಿಂದ ಹೊರಬೀಳಬೇಕಾಗಿದೆ. ಇಂತಹವರೇ ಮಾಡಿದ್ದಾರೆಂದು ರಾಜಣ್ಣ ಹೇಳದಿರುವಾಗ ಬಿಜೆಪಿಯವರು ಯಾಕೆ ಊಹೆ ಮಾಡಿಕೊಳ್ಳಬೇಕು ಎಂದು ಪ್ರಶ್ನಿಸಿದರು.

ರಾಜಣ್ಣ ಮಾತ್ರ ಅಲ್ಲದೆ ಬಿಜೆಪಿ ಶಾಸಕರೂ ಹನಿಟ್ರ್ಯಾಪ್ ಟಾರ್ಗೆಟ್ ಆಗುತ್ತಿದ್ದಾರೆ. ನನ್ನ ಮೇಲೆ ಹನಿಟ್ರ್ಯಾಪ್ ನಡೆದಿತ್ತು ಎಂದಷ್ಟೇ ಹೇಳಿದ್ದಾರೆ. ಅವರ ಮಗ ಕೂಡ ನನ್ನ ಮೇಲೆ ಹನಿಟ್ರ್ಯಾಪ್ ನಡೆದಿದೆ ಎಂದು ಹೇಳುತ್ತಿದ್ದಾರೆ. ಹಾಗೆಂದ ಮಾತ್ರಕ್ಕೆ ಮನೆಗೆ ಬಂದ ಸಾರ್ವಜನಿಕರನ್ನು ಮಾತನಾಡಿಸದೇ ಇರುವುದು ಸಾಧ್ಯವಾ? ಎಂದು ಪ್ರಶ್ನಿಸಿದ ಡಾ.ಯತೀಂದ್ರ, ಕಾಂಗ್ರೆಸ್ ಹೈಕಮಾಂಡ್‌ಗೂ ಹನಿಟ್ರ್ಯಾಪ್ ವಿಚಾರ ತಿಳಿದಿದೆ. ಮುಖ್ಯಮಂತ್ರಿಗಳು ಹಾಗೂ ರಾಜ್ಯದ ಕಾಂಗ್ರೆಸ್ ಮುಖಂಡರು ಈ ವಿಷಯವನ್ನು ತಿಳಿಸಿದ್ದಾರೆ. ಕೇಂದ್ರದ ನಾಯಕರಿಗೆ ದೂರು ಕೊಟ್ಟಿರುವ ವಿಚಾರ ನನಗೆ ಗೊತ್ತಿಲ್ಲ. ರಾಜಣ್ಣ ಸಹ ದೆಹಲಿಗೆ ಹೋಗಿ ದೂರು ಕೊಡಬಹುದು. ಹನಿಟ್ರ್ಯಾಪ್ ವಿಚಾರದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪಾತ್ರ ಇಲ್ಲ. ಅವರ ಹೆಸರನ್ನ ಯಾರೂ ಹೇಳಿಲ್ಲ ಎಂದ ಮೇಲೆ ಅದೆಲ್ಲಾ ಊಹಾಪೋಹ ಎಂದರು.

ಜಾನಪದ ಮನುಷ್ಯನ ಮೂಲ ಗುಣ; ಬೇರು

ಜಾನಪದ ಬಹುಮುಖಿ ನೆಲೆಗಳು; ಅಂತಾರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಪ್ರೊ.ಕೃಷ್ಣಮೂರ್ತಿ ಹನೂರು ಅಭಿಮತ

ಮೈಸೂರು,ಮಾ.26(ಎಂಟಿವೈ)- ಎಲ್ಲರ ಅಂತರಂಗದಲ್ಲಿರುವ ಜಾನಪದ ಮನುಷ್ಯನ ಮೂಲ ಗುಣವಾಗಿದ್ದು, ಅದು ವಿಶ್ವವ್ಯಾಪಿ ಮತ್ತು ಮಹಿಳೆಯರ ದನಿಯೊಂದಿಗೆ ನಮ್ಮೆಲ್ಲರ ಬೇರಾಗಿದೆ ಎಂದು ವಿದ್ವಾಂಸ ಪ್ರೊ.ಕೃಷ್ಣಮೂರ್ತಿ ಹನೂರು ಅಭಿಪ್ರಾಯಪಟ್ಟಿದ್ದಾರೆ.



ಮೈಸೂರು ವಿಶ್ವವಿದ್ಯಾನಿಲಯದ ಬಿಎಂಶ್ರೀ ಸಭಾಂಗಣದಲ್ಲಿ ಬುಧವಾರ ನಡೆದ ಜಾನಪದ ಬಹುಮುಖಿ ನೆಲೆಗಳು ಅಂತಾರಾಷ್ಟ್ರೀಯ ವಿಚಾರ ಸಂಕಿರಣವನ್ನು ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ನಗಾರಿ ಬಾರಿಸುವ ಮೂಲಕ ಚಾಲನೆ ನೀಡಿದರು

ಮೈಸೂರು ವಿಶ್ವವಿದ್ಯಾನಿಲಯದ ಜಾನಪದ ವಿಭಾಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಹಾರಾಜ ಕಾಲೇಜು ಜಾನಪದ ವಿಭಾಗ, ಬೆಳಗಾವಿಯ ಶ್ರೀಮತಿ ಕುಸುಮಾವತಿ ಮಿರಜಿ ಕಲಾ, ವಾಣಿಜ್ಯ ಮಹಾವಿದ್ಯಾಲಯದ ಕನ್ನಡ ವಿಭಾಗ ಹಾಗೂ ಕರ್ನಾಟಕ ಜಾನಪದ ಸಂಶೋಧಕರ ಒಕ್ಕೂಟ ಸಹಯೋಗದಲ್ಲಿ ಬಿಎಂಶ್ರೀ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ಜಾನಪದ ಬಹುಮುಖಿ ನೆಲೆಗಳು ಅಂತಾರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಅವರು, ಬಿಜಾಪುರದ ಹಲಸಂಗಿ ಗೆಳೆಯರು 1934ರಲ್ಲಿ ಸಂಗ್ರಹಿಸಿದ ಗರತಿಯರ ಹಾಡು ಪುಸ್ತಕ ಸತಿ ಪದ್ಧತಿಯನ್ನು ವಿರೋಧಿಸಿದ ಕಥನಗೀತೆ ಎನಿಸಿದೆ.

ಅಮೆರಿಕದ ಬಾಸ್ಟನ್‌ನ ದೊಡ್ಡ ಹೋಟೆಲ್‌ನಲ್ಲಿ ತಮಟೆ ಬಾರಿಸುತ್ತ ಕಲಾವಿದರು ನೃತ್ಯ ಮಾಡುತ್ತಿದ್ದುದನ್ನು ನೋಡಿದ್ದೇನೆ. ಇದರಿಂದ ಜನಪದ ಜಗತ್ತಿನುದ್ದಕ್ಕೂ ಪಸರಿಸಿದೆ ಎಂದು ತಿಳಿಯುತ್ತದೆ. ಜನಪದ ನಮ್ಮ ಬೇರಾಗಿದ್ದರೂ ಪ್ರಕೃತಿಗೆ ಹತ್ತಿರವಾಗಿದೆ ಎಂದು ಹೇಳಿದರು.

ಭಾರತದ ಮೊಟ್ಟ ಮೊದಲ ಜಾನಪದ ಅಧ್ಯಯನ ವಿಭಾಗ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಆರಂಭವಾಗಿದೆ. ದೇಜಗೌ ಜಾನಪದ ವಸ್ತುಸಂಗ್ರಹಾಲಯ ಸಂಗ್ರಹಿಸಿದರು. ಹಾ.ಮಾ.ನಾಯಕ, ಜಿ.ಶಂ.ಪರಮಶಿವಯ್ಯ, ಡಾ.ಪಿ.ಕೆ. ರಾಜಶೇಖರ್, ಹೆಚ್.ಎಲ್. ನಾಗೇಗೌಡ ಈ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಮೈಸೂರು ವಿವಿಯು 22 ಗಂಟೆಯ ಮಂಟೇಸ್ವಾಮಿ ಕಾವ್ಯ ಸಂಗ್ರಹ ಮಾಡಿದೆ. ಅದನ್ನು ಬಿಡುಗಡೆ ಮಾಡಬೇಕು. ಸಿರಿಯಜ್ಜಿ 10 ಸಾವಿರ ತ್ರಿಪದಿಗಳನ್ನು ಹಾಡುತ್ತಿದ್ದರು. ಜಾನಪದ ವಿಚಾರವೇ ಗೊತ್ತಿಲ್ಲದವರ ಕೊಡುಗೆ ಅಪಾರ. ಇದು ಭಾರತದ ಜನಪದದ ಶಕ್ತಿ ಎಂದರು.

ಇದಕ್ಕು ಮುನ್ನ ವಿಚಾರ ಸಂಕಿರಣವನ್ನು ಧಾನ್ಯ ರಾಶಿಗೆ ಪೂಜೆ ಸಲ್ಲಿಸಿ, ನಗಾರಿ ಬಾರಿಸುವ ಮೂಲಕ ಚಾಲನೆ ನೀಡಿದ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಮಾತನಾಡಿ, ಜನಪದ ಎಂದರೆ ನಂಬಿಕೆ, ಶಿಸ್ತು, ಜ್ಞಾನ. ಸಮಾಜಕ್ಕೆ ಉತ್ತಮ ಜೀವನ ರೂಪಿಸುವುದೇ ಜನಪದ. ಕಾಂತಾರ ಸಿನಿಮಾ ಕರಾವಳಿಯ ಹಳ್ಳಿಯಲ್ಲಿ ನಡೆಯುವ ದೈವ ಪೂಜೆಯನ್ನು ಅತ್ಯುತ್ತಮವಾಗಿ ನಿರೂಪಣೆ ಮಾಡಿದರು. ಅದಕ್ಕೆ ಜಗತ್ತು ಮೆಚ್ಚಿತು. ಜನುಮದ ಜೋಡಿ ಸಿನಿಮಾ ಸಾಮಾನ್ಯ ಜೀವನದ ಕತೆ. ಹಳ್ಳಿಗಳಿಲ್ಲದೇ ದೇಶ ಇಲ್ಲ. ಜಾನಪದ ವಸ್ತುಸಂಗ್ರಹಾಲಯ ನವೀಕರಣ ಕಾಮಗಾರಿ ಆರಂಭಗೊಂಡಿದೆ. ಮೈಸೂರು ವಿವಿಗೆ ಮಾದರಿಯಾಗಲಿದೆ ಎಂದರು.

ಪ್ರಸಾರಾಂಗದ ನಿರ್ದೇಶಕ ನಂಜಯ್ಯ ಹೊಂಗನೂರು ಮಾತನಾಡಿ, ಭಾರತ ದೇಶದಲ್ಲಿ ಮೈಸೂರು ವಿವಿ ಜಾನಪದ ಅಧ್ಯಯನಕ್ಕೆ ತಳಹದಿ ಆಗಿದ್ದೆ ವಿಶ್ವವಿದ್ಯಾನಿಲಯ. ಇಲ್ಲಿಯ ಜಾನಪದ ಅಧ್ಯಯನದ ಸರಣಿ ಶೈಕ್ಷಣಿಕ ಕಾರ್ಯಕ್ರಮಗಳಿಂದ ಕರ್ನಾಟಕದ ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿ ಜನಪದ ಅಧ್ಯಯನ ಆರಂಭಗೊಂಡಿತು. ಜಗದ ಮೊದಲ ಜಾನಪದ ವಿವಿ ಕರ್ನಾಟಕದಲ್ಲಿ ಆರಂಭವಾಯಿತು. ಜಾಗತೀಕರಣ ಮತ್ತು ಆಧುನಿಕತೆಯ ಒತ್ತಡದ ನಡುವೆಯೂ ಜಗ್ಗದೆ ಕುಗ್ಗದೇ ಬೇರೊಂದು ರೂಪದಲ್ಲಿ ಪುನರ್ ಸೃಷ್ಟಿಯಾಗುತ್ತ ಸಾಗುತ್ತಿದೆ. ಇದು ಜಾನಪದಕ್ಕಿರುವ ತಾಕತ್ತು. ತನ್ನ ಅಸ್ಮಿತೆ, ಅನನ್ಯತೆಯನ್ನು ಬೇರೊಂದು ಸ್ವರೂಪದಲ್ಲಿ ಬೆಳೆಸಿಕೊಂಡಿದೆ ಎಂದರು.

ಪ್ರಶಸ್ತಿ ಪ್ರದಾನ: ಇದೇ ವೇಳೆ ಸ.ಚ. ಮಹದೇವ ನಾಯಕ ಅವರಿಗೆ ಜಾನಪದ ಕ್ಷೇತ್ರಕಾರ್ಯ ರತ್ನ, ಎನ್.ಕೆ. ಮಹದೇವನ್, ಚಿಕ್ಕಾಳು ಅವರಿಗೆ ಜನಪದ ವೈದ್ಯರತ್ನ, ಮಹೇಶ್ ನಿಲಸೋಗೆ ಅವರಿಗೆ ಜನಪದ ಮಾಧ್ಯಮ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ.ಎನ್.ಕೆ. ಲೋಲಾಕ್ಷಿ ಅಧ್ಯಕ್ಷತೆ ವಹಿಸಿದ್ದರು. ಸಾಮಾಜಿಕ ಹೋರಾಟಗಾರ ಅಹಿಂದ ಜವರಪ್ಪ, ಡಾ.ಹೊಂಬಯ್ಯ ಹೊನ್ನಲಗೆರೆ, ಪ್ರೊ.ವಿಜಯಲಕ್ಷ್ಮೀ ಮನಾಪುರ, ಪ್ರೊ.ಹೆಚ್.ಆರ್.ಚೇತನ, ಡಾ.ಮಂಜು, ಕಲ್ಲಹಳ್ಳಿ ಕುಮಾರ್ ಉಪಸ್ಥಿತರಿದ್ದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಚುನಾವಣೆ

ಮೈಸೂರು ಜಿಲ್ಲಾ ಪ್ರತಿನಿಧಿಗೆ ಡಾ.ಲಕ್ಷ್ಮೀದೇವಿ, ಕಲ್ಕೆರೆ ನಾಗರಾಜ್ ನಾಮಪತ್ರ ಸಲ್ಲಿಕೆ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಚುನಾವಣೆಯ ಮೈಸೂರು ಜಿಲ್ಲಾ ಪ್ರತಿನಿಧಿ ಸ್ಥಾನಕ್ಕೆ ಡಾ.ಲಕ್ಷ್ಮೀದೇವಿ, ಕಲ್ಕೆರೆ ನಾಗರಾಜ್ ನಾಮಪತ್ರ ಸಲ್ಲಿಸಿದರು.

ಮೈಸೂರು,ಮಾ.26-ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ 2025-2030ನೇ ಸಾಲಿನ ಚುನಾವಣೆ ಏ.13ರಂದು ಏಕಕಾಲಕ್ಕೆ ರಾಜ್ಯಾದ್ಯಂತ ನಡೆಯಲಿದ್ದು, ರಾಜ್ಯಾಧ್ಯಕ್ಷ ಸ್ಥಾನಕ್ಕೆ ಎಸ್.ರಘುನಾಥ್ ಸ್ಪರ್ಧಿಸಿದ್ದು, ಮೈಸೂರು ಜಿಲ್ಲೆಯ ಎರಡು ಪ್ರತಿನಿಧಿ ಸ್ಥಾನಕ್ಕೆ ಎಸ್.ರಘುನಾಥ್ ತಂಡದಿಂದ ಗ್ರಾಜುಯೇಟ್ ಕೋ ಆಪರೇಟಿವ್ ಬ್ಯಾಂಕ್‌ನ ನಿರ್ದೇಶಕರು ಹಾಗೂ ವಿಪ್ರ ಮಹಿಳಾ ಸಂಗಮದ ಅಧ್ಯಕ್ಷೆ ಡಾ.ಲಕ್ಷ್ಮೀದೇವಿ ಹಾಗೂ ಅಗಸ್ತ್ಯ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ ಖಜಾಂಚಿ ಕೆ.ನಾಗರಾಜ್ ಅವರು ಬೆಂಗಳೂರಿನ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಕೇಂದ್ರ ಕಚೇರಿಯ ಗಾಯತ್ರಿ ಭವನದಲ್ಲಿ ಚುನಾವಣಾಧಿಕಾರಿ ಎನ್.ವೆಂಕಟೇಶ್ ಅವರಿಗೆ ನಾಮಪತ್ರ ಸಲ್ಲಿಸಿದರು. ಮಹಾಸಭಾ ರಾಜ್ಯ ಉಪಾಧ್ಯಕ್ಷ ನಂ.ಶ್ರೀಕಂಠ ಕುಮಾರ್, ರಥಯಾತ್ರೆ ಸುರೇಶ್, ನಿವೃತ್ತ ಮುಜರಾಯಿ ತಹಶೀಲ್ದಾರ್ ಎಸ್.ಎನ್. ಯತಿರಾಜ್ ಸಂಪತ್‌ಕುಮಾರ್, ಶಂಕರ್ ನಾರಾಯಣ್, ಬಿ.ಎಸ್.ವನಜ ಇದ್ದರು.

ಇಂದು ಮುಡಾ ಬಜೆಟ್

ಮೈಸೂರು, ಮಾ.26(ಆರ್‌ಕೆ)-ನಾಳೆ (ಮಾ.27) ಬೆಳಗ್ಗೆ 11 ಗಂಟೆಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ 2025-26ನೇ ಸಾಲಿನ ಬಜೆಟ್ ಸಭೆ ನಡೆಯಲಿದೆ. ಪ್ರಾಧಿಕಾರದ ಅಧ್ಯಕ್ಷರಾದ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ ಅಧ್ಯಕ್ಷತೆಯಲ್ಲಿ ನಡೆಯಲಿರುವ ಸಭೆಯಲ್ಲಿ ಆಯುಕ್ತ ಎ.ಎನ್.ರಘುನಂದನ್ ಪ್ರಸಕ್ತ ಸಾಲಿನ ಆಯ-ವ್ಯಯ ಮಂಡಿಸುವರು. ಸಭೆಯಲ್ಲಿ ಸದಸ್ಯರಾದ ಶಾಸಕರು, ವಿಧಾನಪರಿಷತ್ ಸದಸ್ಯರು, ಅಧಿಕಾರಿಗಳು ಭಾಗವಹಿಸಲಿದ್ದಾರೆ.

ಮೈಸೂರು ಪಾಲಿಕೆ ಚುನಾವಣೆ ಸಂಬಂಧ ಚುನಾವಣಾ ಆಯೋಗದ ನಡೆ ಹಾಸ್ಯಾಸ್ಪದ

ಮೈಸೂರು, ಮಾ.26- ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಲು ರಾಜ್ಯ ಚುನಾವಣಾ ಆಯೋಗ ಅನುಸರಿಸುತ್ತಿರುವ ನಡೆ ಹಾಸ್ಯಾಸ್ಪದ ಎಂದು ಮಾಜಿ ಮಹಾಪೌರ ಸಂದೇಶ್ ಸ್ವಾಮಿ ತಿಳಿಸಿದ್ದಾರೆ.

ರಾಜ್ಯ ಚುನಾವಣಾ ಆಯುಕ್ತರು ಮೈಸೂರು ಮಹಾನಗರಪಾಲಿಕೆ ಅಧಿಕಾರಿಗಳ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಮೈಸೂರು ಸೇರಿದಂತೆ ರಾಜ್ಯದ ಹಲವು ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಮೀಸಲಾತಿ ನಿಗದಿಗೊಳಿಸುವಂತೆ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ವಿಳಂಬ ಮಾಡಿದರೆ ಹಳೇ ಮೀಸಲಾತಿಯನ್ವಯವೇ ಚುನಾವಣೆ ನಡೆಸುವುದಾಗಿ ಹೇಳಿದ್ದಾರೆ. ಇದು ಚುನಾವಣಾ ಆಯೋಗದ ಅಸಹಾಯಕತೆ ಜೊತೆಗೆ ಸಂವಿಧಾನದ ಆಶಯಗಳ ಪರಿಪಾಲನೆಯಲ್ಲಿನ ಲೋಪಕ್ಕೆ ಸಾಕ್ಷಿಯಾಗಿದೆ ಎಂದು ಕಿಡಿಕಾರಿದ್ದಾರೆ.



ಸಂದೇಶ್ ಸ್ವಾಮಿ

ಅಧಿಕಾರ ವಿಕೇಂದ್ರೀಕರಣದೊಂದಿಗೆ ಎಲ್ಲಾ ಹಂತದ ಚುನಾವಣೆಗಳಲ್ಲೂ ಎಲ್ಲಾ ಸಮುದಾಯದವರಿಗೂ ಅವಕಾಶ ಕಲ್ಪಿಸಬೇಕು ಎಂಬುದು ಡಾ.ಬಿ.ಆರ್.ಅಂಬೇಡ್ಕರ್ ಅವರ ಮೀಸಲಾತಿಯ ಆಶಯ. ಆದರೆ ಸರ್ಕಾರ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಮೀಸಲಾತಿ ನಿಗದಿಗೆ ಮೀನಾಮೇಷ ಎಣಿಸುವುದು ಸಾಮಾನ್ಯವಾಗಿಬಿಟ್ಟಿದೆ. ಇಂತಹ ಸಂದರ್ಭದಲ್ಲಿ ಚುನಾವಣಾ ಆಯೋಗವು ಸರ್ಕಾರಕ್ಕೆ ಸೂಕ್ತ ಮಾರ್ಗದರ್ಶನ ನೀಡಿ, ರೋಸ್ಟರ್ ಪದ್ಧತಿಯಡಿ ಮೀಸಲಾತಿ ಕಲ್ಪಿಸುವಂತೆ ನೋಡಿಕೊಂಡು 6 ತಿಂಗಳೊಳಗೆ ಚುನಾವಣೆ ನಡೆಸಬೇಕು.

ಮೈಸೂರು ಪಾಲಿಕೆಗೆ ಒಂದೂವರೆ ವರ್ಷದಿಂದ ಚುನಾವಣೆ ನಡೆಸಿಲ್ಲ. ಜಿಲ್ಲಾ ಪಂಚಾಯ್ತಿಗಳಿಗೆ ಐದಾರು ವರ್ಷಗಳಾದರೂ ಚುನಾವಣೆ ಮಾಡಿಲ್ಲ. ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಕತೆಯೂ ಇದೇ ಆಗಿದೆ. ಚುನಾವಣಾ ನೀತಿ ನಿಯಮಗಳಿಗೇ ಬೆಲೆ ಇಲ್ಲವೇ, ಚುನಾವಣಾ ಆಯೋಗದ ಮನವಿಗೆ ಮಾನ್ಯತೆ ಇಲ್ಲವೇ ಎಂಬ ಪ್ರಶ್ನೆ ಮೂಡಿದೆ. ನ್ಯಾಯಾಲಯದ ಮೊರೆ ಹೋಗಿ, ಚುನಾವಣೆ ನಡೆಸಲು ಸರ್ಕಾರಕ್ಕೆ ನಿರ್ದೇಶನ ಮಾಡಿಸುವ ದುಃಸ್ಥಿತಿ ಬಂದಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಮೈಸೂರು ಪಾಲಿಕೆಯಲ್ಲಿ 1983ರಲ್ಲಿ 57 ವಾರ್ಡ್‌ಗಳಿದ್ದವು. 1996ರಲ್ಲಿ 65 ವಾರ್ಡ್‌ಗಳಾಗಿ ವಿಂಗಡಿಸಲಾಯಿತು. ನಂತರದಲ್ಲಿ ಪಾಲಿಕೆ ವ್ಯಾಪ್ತಿಗೆ ಹಲವು ಬಡಾವಣೆಗಳು ಸೇರಿದ್ದರೂ ಮೂರು ದಶಕಗಳಿಂದ ವಾರ್ಡ್ ಸಂಖ್ಯೆ ಹೆಚ್ಚಿಸಿಲ್ಲ. ರೆವಿನ್ಯೂ ಬಡಾವಣೆಗಳಿಗೆ ಪಾಲಿಕೆ ಮೂಲಸೌಕರ್ಯಗಳನ್ನು ಕಲ್ಪಿಸುತ್ತಿದ್ದರೂ ಯಾವುದೇ ರೀತಿಯ ಕಂದಾಯ ವಸೂಲಿ ಮಾಡುತ್ತಿಲ್ಲ. ಚುನಾವಣೆ ವಿಳಂಬವಾಗಿ ಕೌನ್ಸಿಲ್ ಸಭೆಗಳು ನಡೆಯದಿದ್ದರೆ ಅಭಿವೃದ್ಧಿ ಕುಂಠಿತವಾಗುವುದರ ಜೊತೆಗೆ ಮೂಲಸೌಕರ್ಯಗಳಿಗೂ ಪರಿತಪಿಸಬೇಕಾಗುತ್ತದೆ. ಆದ್ದರಿಂದ ಸರ್ಕಾರ ಸಕಾಲದಲ್ಲಿ ಚುನಾವಣೆ ನಡೆಸಬೇಕು. ವಿಳಂಬ ಧೋರಣೆ ತೋರಿದರೆ ಸರ್ಕಾರಕ್ಕೆ ಚುನಾವಣಾ ಆಯೋಗ ಚಾಟಿ ಬೀಸಬೇಕು ಎಂದು ಮಾಜಿ ಮೇಯರ್ ಸಂದೇಶ್ ಸ್ವಾಮಿ ಆಗ್ರಹಿಸಿದ್ದಾರೆ.

ದೇಶ - ವಿದೇಶ

ಅಮೆರಿಕದ ಮತ್ತೊಂದು ಉನ್ನತ ಹುದ್ದೆಗೆ ಅನಿವಾಸಿ ಭಾರತೀಯ ನೇಮಕ



ವಾಷಿಂಗ್ಟನ್: ಅಮೆರಿಕದ ಉನ್ನತ ಆರೋಗ್ಯ ಸಂಶೋಧನೆ ಮತ್ತು ಧನಸಹಾಯ ಸಂಸ್ಥೆಗಳಾದ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಹೆಲ್ತ್‌ನ (NIH) ನಿರ್ದೇಶಕರಾಗಿ ಭಾರತೀಯ-ಅಮೆರಿಕನ್ ವಿಜ್ಞಾನಿ ಜೈ ಭಟ್ಟಾಚಾರ್ಯ ಅವರ ನೇಮಕವನ್ನು ಅಮೆರಿಕಾ ಸೆನೆಟ್ ದೃಢಪಡಿಸಿದೆ. ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾನಿಲಯದ ಆರೋಗ್ಯ ನೀತಿಯ ಪ್ರಾಧ್ಯಾಪಕ ಭಟ್ಟಾಚಾರ್ಯ, ಮಂಗಳವಾರ 53-47 ಮತಗಳಿಂದ ದೃಢಪಟ್ಟಿದ್ದಾರೆ ಎಂದು ಯುಎಸ್ ಸೆನೆಟ್‌ನ ಅಧಿಕೃತ ವೆಬ್‌ಸೈಟ್ ತಿಳಿಸಿದೆ. ಯುಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಕಳೆದ ವರ್ಷ ನವೆಂಬರ್‌ನಲ್ಲಿ ಭಟ್ಟಾಚಾರ್ಯರನ್ನು 18ನೇ ಎನ್‌ಐಎಚ್ ನಿರ್ದೇಶಕರಾಗಿ ನಾಮನಿರ್ದೇಶನ ಮಾಡಿದ್ದರು. ಡಾ.ಭಟ್ಟಾಚಾರ್ಯ ಅವರು ರಾಬರ್ಟ್ ಎಫ್ ಕೆನಡಿ ಜೂನಿಯರ್ ಅವರ ಜೊತೆಗೆ ರಾಷ್ಟ್ರದ ವೈದ್ಯಕೀಯ ಸಂಶೋಧನೆಯನ್ನು ನಿರ್ದೇಶಿಸಲು ಮತ್ತು ಆರೋಗ್ಯವನ್ನು ಸುಧಾರಿಸುವ, ಜೀವಗಳನ್ನು ಉಳಿಸುವ ಪ್ರಮುಖ ಆವಿಷ್ಕಾರಗಳನ್ನು ಮಾಡಲು ಕೆಲಸ ಮಾಡುತ್ತಾರೆ ಎಂದು ಟ್ರಂಪ್ ಹೇಳಿದ್ದರು. ಭಟ್ಟಾಚಾರ್ಯ ಅವರ ನೇಮಕಕ್ಕೆ ಹೆಮ್ಮೆಯಿಂದ ಸ್ಟ್ಯಾನ್‌ಫೋರ್ಡ್ ಮೆಡಿಸಿನ್ ಅಭಿನಂದಿಸಿದೆ ಮತ್ತು ಸಾರ್ವಜನಿಕ ಸೇವೆಗೆ ಅವರ ಬದ್ಧತೆಯನ್ನು ಶ್ಲಾಘನೀಯ ಎಂದು ಕರೆದಿದೆ.

ಪತ್ನಿ ಜೊತೆ ಅನೈತಿಕ ಸಂಬಂಧ: ಯೋಗ ಶಿಕ್ಷಕನನ್ನು ಜೀವಂತ ಹೂತ ಪತಿ

ಚಂಡೀಗಢ: ತನ್ನ ಪತ್ನಿ ಜೊತೆ ಅನೈತಿಕ ಸಂಬಂಧ ಹೊಂದಿದ್ದ ಬಾಡಿಗೆದಾರನನ್ನು 7 ಅಡಿ ಆಳದ ಗುಂಡಿಯಲ್ಲಿ ಜೀವಂತ ಸಮಾಧಿ ಮಾಡಿರುವ ಘಟನೆ ಹರ್ಯಾಣದ ರೋಹ್ಟಕ್‌ನಲ್ಲಿ ನಡೆದಿದೆ.

ರೋಹ್ಟಕ್‌ನ ಬಾಬಾ ಮಸ್ತ್‌ನಾಥ್ ವಿಶ್ವವಿದ್ಯಾಲಯದಲ್ಲಿ ಶಿಕ್ಷಕರಾಗಿರುವ ಜಗದೀಪ್ (45) 3 ವರ್ಷಗಳಿಂದ ಜನತಾ ಕಾಲೋನಿಯಲ್ಲಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದರು. ಪೊಲೀಸರ ಪ್ರಕಾರ ಪ್ರಮುಖ ಆರೋಪಿ ರಾಜ್‌ಕರನ್ (40) ಜಗದೀಪ್ ತನ್ನ ಪತ್ನಿಯೊಂದಿಗೆ ಅಕ್ರಮ ಸಂಬಂಧ ಹೊಂದಿದ್ದಾನೆಂದು ಶಂಕಿಸಿದ್ದಾನೆ. ಜಗದೀಪ್ ಫೋನ್‌ನಲ್ಲಿ ತನ್ನ ಪತ್ನಿಯ ಫೋಟೋ ಕಂಡುಬಂದಾಗ, ಆತನನ್ನು ಕೊಲ್ಲಲು ಸಂಚು ರೂಪಿಸಿದ್ದಾರೆ ಎಂದು ಆರೋಪಿಸಲಾಗಿದೆ. ಮೊದಲು ಜಗದೀಪ್‌ನನ್ನು ಸ್ನೇಹಿತರ ಸಹಾಯದಿಂದ ಅಪಹರಿಸಿ, ಹೊಲದಲ್ಲಿ 7 ಅಡಿ ಆಳದ ಗುಂಡಿ ತೋಡಿ ಜೀವಂತವಾಗಿ ಹೂತು ಹಾಕಿದ್ದ. ಕಳೆದ ವರ್ಷ ಡಿಸೆಂಬರ್‌ನಲ್ಲಿ ಯೋಗ ಶಿಕ್ಷಕರನ್ನು ಕೊಲೆ ಮಾಡಲಾಗಿತ್ತು. ಆದರೆ ಸುದೀರ್ಘ ತನಿಖೆ ನಂತರ ಪೊಲೀಸರು ಈಗ ಆರೋಪಿಯನ್ನು ಬಂಧಿಸಿದ್ದಾರೆ. ಯೋಗ ಶಿಕ್ಷಕರ ಮೃತದೇಹವನ್ನು ಹೊಲದಿಂದ ವಶಪಡಿಸಿಕೊಳ್ಳಲಾಗಿದೆ.

ಫ್ರಾನ್ಸ್ ಏರ್ ಶೋ ವೇಳೆ ವಿಮಾನಗಳ ಡಿಕ್ಕಿ; ಪೈಲಟ್‌ಗಳು ಪ್ರಜ್ಞಾಹೀನ



ಪ್ಯಾರಿಸ್: ಫ್ರಾನ್ಸ್‌ನಲ್ಲಿ ನಡೆಯುತ್ತಿದ್ದ ಏರ್ ಶೋ ವೇಳೆ ಭೀಕರ ವಿಮಾನ ಅಪಘಾತ ಸಂಭವಿಸಿದ್ದು, 2 ವಿಮಾನಗಳು ಡಿಕ್ಕಿಯಾಗಿ ಮೂರು ಮಂದಿ ಗಾಯಗೊಂಡಿರುವ ಘಟನೆ ನಡೆದಿದೆ. ಮಂಗಳವಾರ ಈಶಾನ್ಯ ಫ್ರಾನ್ಸ್‌ನ ವಾಯುನೆಲೆ ಬಳಿ ಫ್ರೆಂಚ್ ವಾಯುಪಡೆಯ ಚಮತ್ಕಾರಿಕ ತಂಡದ ಎರಡು ವಿಮಾನಗಳು ಡಿಕ್ಕಿ ಹೊಡೆದುಕೊಂಡಿವೆ. ಈ ಅಪಘಾತದಲ್ಲಿ ಮೂವರು ಪೈಲಟ್‌ಗಳು ಗಾಯಗೊಂಡಿದ್ದು, ಪ್ರಜ್ಞಾಹೀನ ಸ್ಥಿತಿಯಲ್ಲಿ ಕೆಳಗೆ ಬಿದ್ದಿದ್ದಾರೆ. ಈಶಾನ್ಯ ಫ್ರಾನ್ಸ್‌ನ ಸೇಂಟ್-ಡಿಜಿಯರ್‌ನ ಪಶ್ಚಿಮದಲ್ಲಿರುವ ವಾಯುನೆಲೆಯ ಬಳಿ ನಡೆಯುತ್ತಿರುವ ಏರ್ ಶೋ ವೇಳೆ ಆಲ್ಫಾ ಜೆಟ್ ವಿಮಾನಗಳು ಡಿಕ್ಕಿ ಹೊಡೆದವು. ಒಂದು ವಿಮಾನವು ಸಿಲೋಗೆ ಡಿಕ್ಕಿ ಹೊಡೆದು ಬೆಂಕಿ ಕಾಣಿಸಿಕೊಂಡಿತು ಎಂದು ಫ್ರೆಂಚ್ ವಾಯು ಮತ್ತು ಬಾಹ್ಯಾಕಾಶ ಪಡೆ ಸುದ್ದಿ ಸಂಸ್ಥೆ ತಿಳಿಸಿದೆ. ಈ ವಿಮಾನಗಳು ಫ್ರೆಂಚ್ ವಾಯು ಮತ್ತು ಬಾಹ್ಯಾಕಾಶ ಪಡೆಗಳ ನಿಖರ ಏರೋಬ್ಯಾಟಿಕ್ಸ್ ಪ್ರದರ್ಶನ ಘಟಕವಾದ ಪ್ಯಾಟ್ರೌಯಿಲ್ ಡಿ ಫ್ರಾನ್ಸ್‌ನಿಂದ ಬಂದವಾಗಿವೆ. ಇಬ್ಬರು ಪೈಲಟ್‌ಗಳು ಮತ್ತು ಒಬ್ಬ ಪ್ರಯಾಣಿಕ ವಿಮಾನದಿಂದ ಹೊರಗೆ ಹಾರಿದ್ದಾರೆಯಾದರೂ, ಅವರು ಗಾಯಗೊಂಡು ಪ್ರಜ್ಞಾಹೀನ ಪರಿಸ್ಥಿತಿಯಲ್ಲಿ ಸಿಕ್ಕಿದ್ದಾರೆ.

ಧಾರ್ಮಿಕ ಮೆರವಣಿಗೆ ಮೇಲೆ ಕಲ್ಲು ತೂರಾಟ: ಜಾರ್ಖಂಡ್‌ನಲ್ಲಿ ಉದ್ವಿಗ್ನ ಸ್ಥಿತಿ

ಹಜಾರಿಬಾಗ್: ಜಾರ್ಖಂಡ್‌ನ ಹಜಾರಿಬಾಗ್ ಜಿಲ್ಲೆಯಲ್ಲಿ ಧಾರ್ಮಿಕ ಮೆರವಣಿಗೆ ವೇಳೆ ಕಲ್ಲು ತೂರಾಟ ನಡೆದಿದ್ದು, ಈ ಪ್ರದೇಶದಲ್ಲಿ ಉದ್ವಿಗ್ನತೆ ಉಂಟಾಗಿದೆ.



ಮಂಗಳವಾರ ರಾತ್ರಿ 11 ಗಂಟೆ ಸುಮಾರಿಗೆ ರಾಮನವಮಿ ಆಚರಣೆಯ ಭಾಗವಾಗಿ ಮಂಗಳ ಮೆರವಣಿಗೆ ನಡೆಯುತ್ತಿದ್ದಾಗ ಜಾಮಾ ಮಸೀದಿ ಚೌಕ್ ಬಳಿ ಈ ಘಟನೆ ನಡೆದಿದೆ ಎಂದು ಹಜಾರಿಬಾಗ್ ಉಪವಿಭಾಗೀಯ ಪೊಲೀಸ್ ಅಧಿಕಾರಿ ಪರಮೇಶ್ವರ್ ಕಾಮತಿ ತಿಳಿಸಿದ್ದಾರೆ.

ಎರಡೂ ಕಡೆಯಿಂದ ಕಲ್ಲು ತೂರಾಟ ನಡೆದಿದೆ. ಪರಿಸ್ಥಿತಿ ನಿಯಂತ್ರಣಕ್ಕೆ ತರಲು ಪೊಲೀಸರು ಗಾಳಿಯಲ್ಲಿ ಗುಂಡು ಹಾರಿಸಿದ್ದಾರೆ ಎಂದು ಮತ್ತೊಬ್ಬ ಅಧಿಕಾರಿ ತಿಳಿಸಿದ್ದಾರೆ. ಕಲ್ಲು ತೂರಾಟಕ್ಕೆ ನಿಖರವಾದ ಕಾರಣ ತಿಳಿದುಬಂದಿಲ್ಲ. ಘಟನೆಯಲ್ಲಿ ಭಾಗಿಯಾಗಿರುವವರನ್ನು ಗುರುತಿಸಲಾಗುತ್ತಿದ್ದು, ಅವರನ್ನು ಶೀಘ್ರದಲ್ಲೇ ಬಂಧಿಸಲಾಗುವುದು ಎಂದರು. ಸ್ಥಳೀಯರ ಪ್ರಕಾರ, ಕೋಮುಭಾವನೆ ಪ್ರಚೋದಿಸುವ ಹಾಡಿನ ಬಗ್ಗೆ ಎರಡು ಗುಂಪುಗಳ ನಡುವೆ ವಿವಾದ ಉಂಟಾಗಿ, ನಂತರ ಪರಿಸ್ಥಿತಿ ಕಲ್ಲು ತೂರಾಟಕ್ಕೆ ಕಾರಣವಾಯಿತು.

ನಿತ್ಯಾನಂದನ ಕೈಲಾಸಕ್ಕೆ ಗಂಡಾಂತರ ತಂದೊಡ್ಡಿದ ಬೊಲಿವಿಯಾ

ಬೊಲಿವಿಯಾ: ಅತ್ಯಾಚಾರ ಆರೋಪದ ನಂತರ ಕರ್ನಾಟಕದಿಂದ ಪರಾರಿಯಾಗಿದ್ದ ನಿತ್ಯಾನಂದ 'ಯುನೈಟೆಡ್ ಸ್ಟೇಟ್ಸ್ ಆಫ್ ಕೈಲಾಸ' ಅಥವಾ 'ಯುಎಸ್‌ಕೆ' ಎಂಬ ಸಾರ್ವಭೌಮ ರಾಷ್ಟ್ರವನ್ನು ಸ್ಥಾಪಿಸಿದ್ದರು. ಆದರೆ, ಆ ಜಾಗ ಎಲ್ಲಿದೆ ಎಂಬುದು ಯಾರಿಗೂ ತಿಳಿದಿರಲಿಲ್ಲ. ಇದೀಗ ಇದೇ ನಿತ್ಯಾನಂದ ಜಾಗತಿಕ ಭೂ ಹಗರಣದ ಆರೋಪಿಯಾಗಿದ್ದಾನೆ. ದಕ್ಷಿಣ ಆಫ್ರಿಕಾ ಖಂಡದಲ್ಲಿರುವ ಬೊಲಿವಿಯಾ ದೇಶದ 4.8 ಲಕ್ಷ ಹೆಕ್ಟೇರ್ ಭೂಮಿಯನ್ನು ಆಕ್ರಮಿಸಿಕೊಂಡಿರುವ ಆರೋಪವನ್ನು ನಿತ್ಯಾನಂದ ಎದುರಿಸುತ್ತಿದ್ದಾನೆ. ಕೈಲಾಸ ದೇಶವನ್ನು ರಚಿಸುವ ಮೂಲಕ ಇಡೀ ಜಗತ್ತನ್ನು ಬೆಚ್ಚಿ ಬೀಳಿಸಿದ ಸ್ವಯಂಘೋಷಿತ ಧಾರ್ಮಿಕ ನಾಯಕ ನಿತ್ಯಾನಂದ ಈಗ ಕೈಲಾಸದ ಗಡಿಗಳನ್ನು ವಿಸ್ತರಿಸಲು ಬಯಸುತ್ತಿದ್ದಾರೆ ಎಂದು ಹೇಳಲಾಗುತ್ತಿದೆ. ಇದಕ್ಕಾಗಿ ಅವರು ದಕ್ಷಿಣ ಅಮೆರಿಕಾದಲ್ಲಿರುವ ಬೊಲಿವಿಯಾ ಮೇಲೆ ಕಣ್ಣು ನೆಟ್ಟಿದ್ದಾರೆ. ನಿತ್ಯಾನಂದ ತನ್ನ ಶಿಷ್ಯರೊಂದಿಗೆ ಅಲ್ಲಿ 4.8 ಲಕ್ಷ ಹೆಕ್ಟೇರ್ ಭೂಮಿಯನ್ನು ಆಕ್ರಮಿಸಿಕೊಂಡಿದ್ದಾನೆ. ಈ ಮಾಹಿತಿ ಬಂದ ತಕ್ಷಣ, ಬೊಲಿವಿಯಾ ಸರ್ಕಾರ ಕ್ರಮ ಕೈಗೊಂಡಿದೆ.



ಪೊನ್ನಂಪೇಟೆ ಪಪಂ ಚೊಚ್ಚಲ ಬಜೆಟ್ ಮಂಡನೆ

2025-26ನೇ ಸಾಲಿನ ಬಜೆಟ್ ಮೊತ್ತ 7.17 ಕೋಟಿ ರೂ.

ಪೊನ್ನಂಪೇಟೆ,ಮಾ.26– ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೇರಿದ ನಂತರ ಇದೇ ಮೊದಲ ಬಾರಿಗೆ ಬಜೆಟ್ ಮಂಡನೆ ಮಾಡಿದೆ. ಈ ಸಾಲಿನ ಬಜೆಟ್ ಮೊತ್ತವು ಒಟ್ಟು ರೂ.71748000 ಆಗಿರುತ್ತದೆ.

ಪಂಚಾಯಿತಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಉಪಾಧ್ಯಕ್ಷ ಆಲೀರ ಎಂ.ರಶೀದ್ ಬಜೆಟ್ ಅನ್ನು ಮಂಡಿಸಿದರು. ಪೊನ್ನಂಪೇಟೆಯು ದಿನೇ–ದಿನೇ ಬೆಳೆಯುತ್ತಿರುವ ಪಟ್ಟಣವಾಗಿದ್ದು, ಜನತೆಗೆ ಮೂಲಭೂತ ಸೌಕರ್ಯ ಒದಗಿಸುವುದು ಆದ್ಯ ಕರ್ತವ್ಯವಾಗಿರುತ್ತದೆ. ರಸ್ತೆ, ನೀರು, ಚರಂಡಿ, ನೈರ್ಮಲ್ಯ, ಬೀದಿ ದೀಪ ವ್ಯವಸ್ಥೆಗಳನ್ನು ಪಟ್ಟಣದ ಪ್ರಸಕ್ತ ಜನಸಂಖ್ಯೆಗೆ ಅನುಗುಣವಾಗಿ ವೈಜ್ಞಾನಿಕ ರೂಪದಲ್ಲಿ ಜಾರಿಗೊಳಿಸಬೇಕಾಗಿದೆ ಎಂದು ತಿಳಿಸಿದರು.

2025–26ನೇ ಸಾಲಿನಲ್ಲಿ ಒಟ್ಟು ರೂ. 70826727 ಮೊತ್ತದ ಆದಾಯವನ್ನು ನಿರೀಕ್ಷಿಸಲಾಗಿದೆ. ಈ ಪೈಕಿ ಎಸ್.ಎಫ್.ಸಿ. ವಿಶೇಷ ಅನುದಾನ ರೂ.150 ಲಕ್ಷ ಎಸ್‌ಎಫ್‌ಸಿ ಅನುದಾನ ರೂ.70 ಲಕ್ಷ, 15ನೇ ಹಣಕಾಸು ಅನುದಾನ ರೂ. 80ಲಕ್ಷ, ವಿದ್ಯುತ್ ಅನುದಾನ ರೂ.75 ಲಕ್ಷ, ನೀರಿನ ಅಭಾವ ಅನುದಾನ ರೂ.10 ಲಕ್ಷ, ಎಸ್‌ಎಫ್‌ಸಿ ವೇತನ ಅನುದಾನ ರೂ.74.90ಲಕ್ಷ, ಕಟ್ಟಡ ಕಾಯ್ದೆಗಳಿಗೆ ಸಂಬಂಧಿಸಿದ ಶುಲ್ಕಗಳು


ಪಪಂ ಚೊಚ್ಚಲ ಬಜೆಟ್ಟನ್ನು ಮಂಡಿಸುತ್ತಿರುವ ಉಪಾಧ್ಯಕ್ಷ ಆಲೀರ ಎಂ. ರಶೀದ್.

ರೂ.5ಲಕ್ಷ, ಮಾರುಕಟ್ಟೆಗಳ, ವಾಹನ ನಿಲುಗಡೆ ಮತ್ತು ಸಂತೆ ಸುಂಕದ ಹರಾಜಿನ ಆದಾಯ ರೂ. 7.5ಲಕ್ಷ, ವಾಣಿಜ್ಯ ಮಳಿಗೆ ಬಾಡಿಗೆ ರೂ.6.86ಲಕ್ಷ, ಆಸ್ತಿ ತೆರಿಗೆ ರೂ. 51.58ಲಕ್ಷ, ಉದ್ದಿಮೆ ಪರವಾನಿಗೆ ರೂ. 5ಲಕ್ಷ, ನೈರ್ಮಲ್ಯ ಮತ್ತು ಘನತ್ಯಾಜ್ಯ ವಸ್ತು ನಿರ್ವಹಣೆಗೆ ರೂ.4.5ಲಕ್ಷ, ಪರಿಶಿಷ್ಟ ಜಾತಿ/ಪಪಂ ಶ್ರೇಯೋಭಿವೃದ್ಧಿ ನಿಧಿಯಿಂದ ರೂ. 5ಲಕ್ಷ, ಇತರೆ ಬಡಜನರ ಕಲ್ಯಾಣ ನಿಧಿಯ ಶೇ.7.25%ರಂತೆ ರೂ. 3ಲಕ್ಷ, ಅಂಗವಿಕಲರಿಗೆ ಶ್ರೇಯೋಭಿವೃದ್ಧಿ ನಿಧಿಯ ಶೇ.5%ರಂತೆ ರೂ. 2ಲಕ್ಷ ಮತ್ತು ಸ್ವಚ್ಛ ಭಾರತ ಯೋಜನೆ ಅನುದಾನದಿಂದ ರೂ.5ಲಕ್ಷ ಅನುದಾನದ ನಿರೀಕ್ಷೆ ಹೊಂದಲಾಗಿದೆ ಎಂದು ರಶೀದ್ ಹೇಳಿದರು.

ಹಾಗೆಯೇ ಒಟ್ಟು ರೂ.71110000 ಮೊತ್ತದ ಖರ್ಚನ್ನು ಅಂದಾಜಿಸಲಾಗಿದ್ದು, ನೌಕರರ ವೇತನಕ್ಕೆ ರೂ.1.05 ಕೋಟಿ, 15ನೇ ಹಣಕಾಸು ಯೋಜನೆ ಕಾಮಗಾರಿಗಳಿಗಾಗಿ ರೂ.80ಲಕ್ಷ, ನೈರ್ಮಲ್ಯ ಮತ್ತು ಘನತ್ಯಾಜ್ಯ ವಸ್ತು ನಿರ್ವಹಣೆಗೆ ರೂ.86 ಲಕ್ಷ, ನೀರು ಸರಬರಾಜು ಮತ್ತು ವಿತರಣಾ ನಿರ್ವಹಣೆಗೆ ರೂ. 35ಲಕ್ಷ, ಬೀದಿ ದೀಪಗಳ ಅಭಿವೃದ್ಧಿಗೆ ರೂ. 10ಲಕ್ಷ, ಉದ್ಯಾನವನಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ರೂ.15ಲಕ್ಷ, ನಾಗರಿಕ ವಿನ್ಯಾಸಗಳಿಗ ರೂ. 5ಲಕ್ಷ, ರಸ್ತೆಗಳು ಮತ್ತು ಪಾದಚಾರಿ ಮಾರ್ಗಗಳ ನಿರ್ಮಾಣ ಕಾಮಗಾರಿಗಳಿಗೆ ರೂ.20 ಲಕ್ಷ, ಚರಂಡಿಗಳಿಗಾಗಿ ರೂ.25 ಲಕ್ಷ, ಕಛೇರಿ ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ರೂ.30 ಲಕ್ಷ, ಮಾರುಕಟ್ಟೆ ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ರೂ. 25ಲಕ್ಷ, ಕಛೇರಿ ಉಪಕರಣಗಳ ಖರೀದಿಗಾಗಿ ರೂ.7 ಲಕ್ಷ, ನೀರು ಸರಬರಾಜು ಮತ್ತು ಬೀದಿ ದೀಪಗಳ ವಿದ್ಯುತ್ ವೆಚ್ಚಕ್ಕೆ ರೂ.77 ಲಕ್ಷ, ಪರಿಶಿಷ್ಟ ಜಾತಿ, ಪ.ಪಂ ಶ್ರೇಯೋಭಿವೃದ್ಧಿಗೆ ಯೋಜನೆಗಳಿಗಾಗಿ ರೂ. 5ಲಕ್ಷ, ಇತರೆ ಬಡಜನರ ಕಲ್ಯಾಣ ನಿಧಿ ಯೋಜನೆಗಳಿಗೆ ರೂ.3ಲಕ್ಷ ಮತ್ತು ಅಂಗವಿಕಲರಿಗೆ ಶ್ರೇಯೋಭಿವೃದ್ಧಿಯ ಯೋಜನೆಗಳಿಗೆ ರೂ. 2ಲಕ್ಷ ಅನುದಾನವನ್ನು ಖರ್ಚು ಮಾಡುವ ಗುರಿ ಹೊಂದಲಾಗಿದೆ ಎಂದು ರಶೀದ್ ಮಾಹಿತಿ ನೀಡಿದರು. ಸಭೆಯಲ್ಲಿ ಮುಖ್ಯಾಧಿಕಾರಿ ಎಸ್.ಗೋಪಿ ಮತ್ತು ಸದಸ್ಯರು ಪಾಲ್ಗೊಂಡಿದ್ದರು.

ಅಭಿವೃದ್ಧಿ ಕಾರ್ಯಗಳನ್ನು ಜನರ ಮುಂದಿಡಿ: ಬೋಸರಾಜು


ವಿರಾಜಪೇಟೆಯಲ್ಲಿ ನಡೆದ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಬೋಸರಾಜು, ಶಾಸಕರು ಮತ್ತಿತರರು ಪಾಲ್ಗೊಂಡಿದ್ದರು.

ವಿರಾಜಪೇಟೆ, ಮಾ. 26– ಸರಕಾರದ ಅಭಿವೃದ್ಧಿ ಕಾರ್ಯಗಳನ್ನು ಕ್ಷೇತ್ರದ ಜನರ ಮುಂದಿಡುವ ಕೆಲಸವನ್ನು ಸ್ಥಳೀಯ ಪ್ರಮುಖರು ಕಾರ್ಯಕರ್ತರು ಮಾಡಿ ಪಕ್ಷವನ್ನು ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಅಧಿಕಾರಕ್ಕೆ ತರುವಂತೆ ಜಿಲ್ಲಾ ಉಸ್ತುವಾರಿ ಸಚಿವ ಬೋಸರಾಜು ಕರೆ ನೀಡಿದರು.

ಸರಕಾರದ ನಡೆ ಕಾರ್ಯಕರ್ತರ ಕಡೆ ಎನ್ನುವ ಕ್ಷೇತ್ರವಾರು ಕಾರ್ಯಕರ್ತರ ಸಭೆಯ ನೇತೃತ್ವ ವಹಿಸಿದ್ದ ಅವರು, ಇಲ್ಲಿನ ಶಾಸಕರು ಮುಖ್ಯಮಂತ್ರಿ, ಸಚಿವ ಮತ್ತು ಉನ್ನತ ಅಧಿಕಾರಿಗಳ ಜೊತೆ ಉತ್ತಮ ಸಂಪರ್ಕ ಹೊಂದಿ ನಿರೀಕ್ಷೆ ಮೀರಿ ಅನುದಾನ ತಂದು ಕ್ಷೇತ್ರದ ಅಭಿವೃದ್ಧಿಯಲ್ಲಿ ತೊಡಗಿದ್ದಾರೆ ಎಂದರು.

ಶಾಸಕ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಮಾತನಾಡಿ, ಮುಖ್ಯವಾಗಿ ಯುವ ಕಾಂಗ್ರೆಸ್ ಘಟಕದ ವತಿಯಿಂದ ಪಕ್ಷದ ಸಂಘಟನೆಯಲ್ಲಿ ಪ್ರಮುಖ ಹೊಣೆಗಾರಿಕೆಯನ್ನು ನಿಭಾಯಿಸಬೇಕು. ಪಕ್ಷವನ್ನು ಸಂಘಟಿಸಿ ಬಲಪಡಿಸಬೇಕು ಏನೇ ಅದರು ನನ್ನದು ಕ್ಷೇತ್ರ ಪ್ರಾತಿ ಪಥದತ್ತ ನಡೆ ಅದನ್ನು ದಿಟ್ಟವಾಗಿ ನಿಭಾಯಿಸುತ್ತೇನೆ ಎಂದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಧರ್ಮಜ ಉತ್ತಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ರಾಜ್ಯ ಕೆಪಿಸಿಸಿ ವಕ್ತಾರ ಲಕ್ಷ್ಮಣ ಮಾಜಿ ವಿಧಾನಪರಿಷತ್ ಸದಸ್ಯ ಅರುಣ್ ಮಾಚಯ್ಯ ಕಾಂಗ್ರೆಸ್ ಪಕ್ಷದ ಮಾಜಿ ಜಿಲ್ಲಾಧ್ಯಕ್ಷ ಟಿ.ಪಿ. ರಮೇಶ್ ಕೆಪಿಸಿಸಿ ಸದಸ್ಯ ಬೇಕಲ್ ರಮಾನಾಥ್ ಕಾಫಿ ಮಂಡಳಿಯ ಮಾಜಿ ಸದಸ್ಯೆ ತಾರ ಅಯ್ಯಮ್ಮ ಕೆಪಿಸಿಸಿ ರಾಜ್ಯ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಬಿ.ಶಾಂತಪ್ಪ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಜಾನ್ಸನ್ ಪೊನ್ನಂಪೇಟೆ ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಿದೇರಿರ ನವೀನ್, ನಾಪೋಕ್ಲು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಇಸ್ಮಾಯಿಲ್, ವಿರಾಜಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಟ್ಟಡ ರಂಜಿ ಪೂಣಚ್ಚ, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಜಮ್ಮಡ ಸೋಮಣ್ಣ, ಜಿಲ್ಲಾ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಹನೀಫ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೊಲ್ಯಡ ಗಿರೀಶ್ ಉಪಸ್ಥಿತರಿದ್ದರು.

ಮುದ್ದಂಡ ಹಾಕಿ ಉತ್ಸವಕ್ಕೆ ಅಂತಿಮ ಹಂತದ ಸಿದ್ಧತೆ

ಮಡಿಕೇರಿ, ಮಾ.26– ಕೊಡವ ಕುಟುಂಬಗಳ ನಡುವಿನ ಹಾಕಿ ಪಂದ್ಯಾವಳಿಯ ಮುದ್ದಂಡ ಕಪ್ ಹಾಕಿ ಉತ್ಸವಕ್ಕೆ ಅಂತಿಮ ಹಂತದ ಸಿದ್ಧತೆ ನಡೆದಿದ್ದು, ಬೆಳ್ಳಿ ಹಬ್ಬದ ಪ್ರಯುಕ್ತ ವಿಭಿನ್ನ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಮುದ್ದಂಡ ಹಾಕಿ ಹಬ್ಬದ ಅಧ್ಯಕ್ಷ ಮುದ್ದಂಡ ರಶಿನ್ ಸುಬ್ಬಯ್ಯ ತಿಳಿಸಿದ್ದಾರೆ.

ಹಾಕಿ ಪಂದ್ಯಾವಳಿ ನಡೆಯುವ ಈ ಬಾರಿ ಕೊಡವ ಕುಟುಂಬಗಳ ದಾಖಲೆಯ 396 ತಂಡಗಳು ನೋಂದಾಯಿಸಿಕೊಂಡಿದ್ದು, ಕೇಂದ್ರ ಸ್ಥಾನದಲ್ಲಿ ಪಂದ್ಯಾವಳಿ ನಡೆಯುತ್ತಿರುವುದು ಈ ಬಾರಿಯ ವಿಶೇಷ. ಪಂದ್ಯಾವಳಿಯ ವಿಜೇತ ತಂಡಕ್ಕೆ ರೂ.5 ಲಕ್ಷ ನಗದು ಹಾಗೂ ಆಕರ್ಷಕ ಟ್ರೋಫಿ, ದ್ವಿತೀಯ ಸ್ಥಾನ 3 ಲಕ್ಷ ನಗದು ಹಾಗೂ ಆಕರ್ಷಕ ಟ್ರೋಫಿ, ಸೆಮಿಫೈನಲ್‌ಗೆ ಬಂದ ಎರಡು ತಂಡಗಳಿಗೆ ತಲಾ 1 ಲಕ್ಷ ರೂ. ಬಹುಮಾನ ನೀಡಲಾಗುವುದು ಎಂದು ಎಂದು ಅವರು ಸುದ್ದಿಗಾರರಿಗೆ ಹೇಳಿದರು ತಿಳಿಸಿದರು.

ಶಾಸಕರಾದ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಹಾಗೂ ಕೊಡವ ಹಾಕಿ ಹಬ್ಬದ ಜನಕ ದಿ.ಪಾಂಡಂಡ ಕುಟ್ಟಪ್ಪ ಅವರ ಪತ್ನಿ ಲೀಲ–ಕುಟ್ಟಪ್ಪ ಚಾಲನೆ ನೀಡಿದ್ದ ಕ್ರೀಡಾ ಜ್ಯೋತಿ ಈಗಾಗಲೇ ಪಾಂಡಂಡ ಕುಟುಂಬದ ಐನ್ ಮನೆಯ ನಂತರ ಕಿರುಗೂರು ಚೆಪ್ಪುಡಿರ, ಅಲಮೇಂಗಡ, ಟಿ.ಶೆಟ್ಟಿಗೇರಿ– ಒಂಟಿಯಂಗಡಿ ಮಚ್ಚಮಾಡ, ಚೆಕ್ಕೇರ, ಕಳ್ಳಿಚಂಡ, ಕುಂದ ಮನೆಯಪಂಡ, ನಾಂಗಾಲ ಕುಪ್ಪಂಡ, ವಿರಾಜಪೇಟೆ ಕಾವಾಡಿ ನೆಲ್ಲಮಕ್ಕಡ, ಚೆಂಬೆಬೆಳ್ಳೂರು ಈಶ್ವರ ದೇವಾಲಯ, ಮಂಡೇಪಂಡ, ಕುಕ್ಲೂರು ತಾತಂಡ, ವಿರಾಜಪೇಟೆ ಕೊಡವ ಸಮಾಜ, ಅರಮೇರಿ ಮುದ್ದಂಡ, ಐಚೆಟ್ಟಿರ, ಕಾಕೋಟುಪರಂಬು ಮಂಡೇಟಿರ, ಬಲ್ಲಚಂಡ, ಕರಡ ಕೋಡಿರ, ಬಾವಲಿ ಬಿದ್ದಂಡ ಐನ್ ಮನೆಗಳಿಗೆ ಕೊಡಗಿನ ಮ್ಯಾರಥಾನ್ ಪಟುಗಳು ಕ್ರೀಡಾಜ್ಯೋತಿಯೊಂದಿಗೆ ಸಾಗಿದ್ದು, ಗೌರವ ಸಲ್ಲಿಸಲಾಗಿದೆ ಎಂದು ಹೇಳಿದರು.

ಮಹಿಳಾ ಹಾಕಿ ಸಂಭ್ರಮ: ಬೆಳ್ಳಿಮಹೋತ್ಸವದ ಸಂಭ್ರಮದ ಹಿನ್ನೆಲೆಯಲ್ಲಿ ಮುದ್ದಂಡ ಹಾಕಿ ಉತ್ಸವದಲ್ಲಿ ಮಹಿಳಾ ತಂಡಗಳ ನಡುವೆ ಹಾಕಿ ಪಂದ್ಯಾವಳಿಯನ್ನು ಆಯೋಜಿಸಲಾಗಿದ್ದು, ಈಗಾಗಲೇ 40 ತಂಡಗಳು ನೋಂದಾಯಿಸಿಕೊಂಡಿವೆ. ನೋಂದಣಿಯ ಕೊನೆಯ ದಿನಾಂಕ ಏ.10 ಆಗಿರುವುದರಿಂದ ಮತ್ತಷ್ಟು ತಂಡಗಳು ಸೇರ್ಪಡೆಗೊಳ್ಳಲಿವೆ. ಮೂರನೇ ಮೈದಾನದಲ್ಲಿ ಮಹಿಳಾ ಹಾಕಿ ಪಂದ್ಯಾವಳಿ ನಡೆಯಲಿದೆ ಎಂದರು.


ಮುದ್ದಂಡ ಹಾಕಿ ಹಬ್ಬದ ಅಧ್ಯಕ್ಷ ಮುದ್ದಂಡ ರಶಿನ್ ಸುಬ್ಬಯ್ಯ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮಾ.28 ರಂದು ಮಡಿಕೇರಿಯ ಫೀ.ಮಾ.ಕೆ.ಎಂ.ಕಾರ್ಯಪ್ಪ ಕಾಲೇಜು ಮೈದಾನದಲ್ಲಿ ಹಾಕಿ ಉತ್ಸವವನ್ನು ಶಾಸಕ ಅಜ್ಜಿಕುಟ್ಟೀರ ಎಸ್.ಪೊನ್ನಣ್ಣ ಉದ್ಘಾಟಿಸಲಿದ್ದಾರೆ. ಮುಖ್ಯಅತಿಥಿಗಳಾಗಿ ಸಂಸದ ಯದುವೀರ್ ಒಡೆಯರ್, ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಬೋಸರಾಜು, ಶಾಸಕರು ಮತ್ತಿತರರು ಭಾಗವಹಿಸುವರು.

ಮುದ್ದಂಡ ಹಾಕಿ ಹಬ್ಬದ ಮಾತನಾಡಿ, ಪಂದ್ಯಾವಳಿ ವೀಕ್ಷಣೆಗೆ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವ ನಿರೀಕ್ಷೆ ಇದ್ದು, ಸೂಕ್ತವಾದ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ವಿಧಾನಪರಿಷತ್ ಸದಸ್ಯ ಸುಜಾಕುಶಾಲಪ್ಪ ಅವರ ಅನುದಾನದಲ್ಲಿ 1,500 ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದೆ. ದಿಲೀಪ್ ನಾಚಪ್ಪ ಹಾಗೂ ಯಲದಾಳು ಮನೋಜ್ ಬೋಪಯ್ಯ ಜಾಗದಲ್ಲಿ 1,000 ವಾಹನದ ನಿಲುಗಡೆ ವ್ಯವಸ್ಥೆ ಮಾಡಲಾಗಿದ್ದು, ಸುಮಾರು 2,500 ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಉಪಾಧ್ಯಕ್ಷ ಡೀನ್ ಬೋಪಣ್ಣ ತಿಳಿಸಿದರು. ಮುದ್ದಂಡ ಹಾಕಿ ಹಬ್ಬದ ಕಾರ್ಯದರ್ಶಿ ಆದ್ಯ ಪೂವಣ್ಣ ಉಪಸ್ಥಿತರಿದ್ದರು.

ಇಂದು ತಲಕಾವೇರಿಯಲ್ಲಿ ಸ್ವಚ್ಛತಾ ಕಾರ್ಯ

ಮಡಿಕೇರಿ ಮಾ.26– ತಲಕಾವೇರಿಯ ಶ್ರೀ ತಲಕಾವೇರಿ ದೇವಾಲಯದಲ್ಲಿ ಮಾ.27 ರಂದು ಸ್ವಚ್ಛತಾ ಕಾರ್ಯದ ಪ್ರಯುಕ್ತ ಮಧ್ಯಾಹ್ನ 2 ಗಂಟೆಯ ನಂತರ ಶ್ರೀ ತಲಕಾವೇರಿ ದೇವಾಲಯಕ್ಕೆ ಪ್ರವೇಶ ಇರುವುದಿಲ್ಲ. ಆದ್ದರಿಂದ ಸಾರ್ವಜನಿಕ ಭಕ್ತಾದಿಗಳು ಸಹಕರಿಸುವಂತೆ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ್ ಎನ್.ಜಿ. ಕೋರಿದ್ದಾರೆ.

ಮೀನಾಕ್ಷಿ ನಿಧನ

ಕುಶಾಲನಗರ, ಮಾ.26– ಸಮೀಪದ ಮರಡಿಯೂರು ಗ್ರಾಮದ ಮೂಲೆ ಮಂಜಲು ದಿ. ಉಲ್ಲಾಸ ಅವರ ಪತ್ನಿ ಮೀನಾಕ್ಷಿ (94) ಮಂಗಳವಾರ ತಡ ರಾತ್ರಿ ನಿಧನರಾದರು.



ಮೃತರಿಗೆ ಪುತ್ರ, ಮೂವರು ಪುತ್ರಿಯರು ಇದ್ದಾರೆ. ಮೃತರ ಅಂತ್ಯಕ್ರಿಯೆ ಬುಧವಾರ ಮರಡಿ ಯೂರಿನ ಸ್ವಗೃಹದಲ್ಲಿ ನಡೆಯಿತು.

ಅಸಮರ್ಪಕ ತ್ಯಾಜ್ಯ ವಿಲೇವಾರಿ ವಿರೋಧಿಸಿ ಬಿಎಸ್‌ಪಿ ಅಹೋರಾತ್ರಿ ಪ್ರತಿಭಟನೆ 3ನೇ ದಿನಕ್ಕೆ

ಸಿದ್ದಾಪುರ,ಮಾ.26– ಜನವಸತಿ ಪ್ರದೇಶದಲ್ಲಿ ತ್ಯಾಜ್ಯ ವಿಲೇವಾರಿಯನ್ನು ವಿರೋಧಿಸಿ ನಡೆಯುತ್ತಿರುವ ಅಹೋರಾತ್ರಿ ಪ್ರತಿಭಟನೆ 3ನೇ ದಿನಕ್ಕೆ ಕಾಲಿಟ್ಟಿದೆ. ವೀರಾಜಪೇಟೆ ತಾಲೂಕಿನ ಮಾಲ್ದಾರೆ ಗ್ರಾಮ ಪಂಚಾಯಿತಿ ಚೊಟ್ಟೆಪಾಳಿ (ಕಲ್ಲಳ್ಳ) ಜಾಗದಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ ನೂತನವಾಗಿ ಕಸ ವಿಲೇವಾರಿ ಕೇಂದ್ರ ನಿರ್ಮಿಸುವುದನ್ನು ವಿರೋಧಿಸಿ ಬಹುಜನ ಸಮಾಜ ಪಾರ್ಟಿ ನೇತೃತ್ವದಲ್ಲಿ ಮಾಲ್ದಾರೆ ಗ್ರಾಮ ಪಂಚಾಯತಿ ಮುಂದೆ ಪ್ರತಿಭಟನೆ ನಡೆಸುತ್ತಿದ್ದು, ಬೇಡಿಕೆ ಈಡೇರಿಸದಿದ್ದಲ್ಲಿ ತೀವ್ರ ರೀತಿಯ ಹೋರಾಟ ನಡೆಸಲಾಗುವುದು ಎಂದು ಪ್ರತಿಭಟನಾಕಾರರು ಎಚ್ಚರಿಸಿದರು.

ಕಸ ವಿಲೇವಾರಿಗೆ ಗುರುತಿಸಿರುವ ಜಾಗ ಜನ ವಸತಿ ಪ್ರದೇಶವಾಗಿದೆ. ಸಮೀಪದಲ್ಲಿ ಅರಣ್ಯ ಪ್ರದೇಶವಿದ್ದು ತೋಡು ನೀರಿನ ಮೂಲಕ ಲಕ್ಷ್ಮಣತೀರ್ಥ ನದಿ ಸೇರುತಿದೆ. ಶಾಲಾ ವಿದ್ಯಾರ್ಥಿಗಳು ಸಾರ್ವಜನಿಕರು ನಡೆದಾಡುವ ರಸ್ತೆಯಾಗಿದ್ದು ತ್ಯಾಜ್ಯ ವಿಲೇವಾರಿಗೆ ಮುಂದಾದಲ್ಲಿ ಪರಿಸರ ಮತ್ತು ನೀರು ಕಲುಷಿತವಾಗಲಿದೆ ಎಂದು ಜಿಲ್ಲಾಧ್ಯಕ್ಷ ದಿವಿಲ್ ಕುಮಾರ್ ಹೇಳಿದರು. ಜನ ವಸತಿ ಪ್ರದೇಶ ಬಿಟ್ಟು ಬೇರೆ ಕಡೆ ಸೂಕ್ತ ಜಾಗ ಗುರುತಿಸಿ ವೈಜ್ಞಾನಿಕ ತ್ಯಾಜ್ಯ ವಿಲೇವಾರಿ ಮಾಡಲಿ. ಉದ್ದೇಶಿತ ಜಾಗದಲ್ಲಿ ತ್ಯಾಜ್ಯ ವಿಲೇವಾರಿಯನ್ನು ಕೈಬಿಟ್ಟು ಆಟದ ಮೈದಾನ ನಿರ್ಮಾಣ ಮಾಡುವಂತೆ ಆಗ್ರಹಿಸಿದರು


ತ್ಯಾಜ್ಯ ವಿಲೇವಾರಿಯನ್ನು ವಿರೋಧಿಸಿ ನಡೆಯುತ್ತಿರುವ ಬಿಎಸ್ಪಿ ಅಹೋರಾತ್ರಿ ಪ್ರತಿಭಟನೆ 3ನೇ ದಿನಕ್ಕೆ ಕಾಲಿಟ್ಟಿದೆ.

ಮೈಸೂರು ಹಾಗೂ ಸಿದ್ದಾಪುರ ಮಾರ್ಗದ ಮಾಲ್ದಾರೆ ಮುಖ್ಯ ರಸ್ತೆಯಲ್ಲಿ ಕೆಲಕಾಲ ರಸ್ತೆ ತಡೆ ನಡೆಸಿ ನಂತರ ಮುಖ್ಯ ರಸ್ತೆಯಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು. ಪ್ರತಿಭಟನೆಯಲ್ಲಿ ರೈತ ಸಂಘದ ಪ್ರಮುಖರಾದ ಸುಜಯ್ ಬೋಪಯ್ಯ, ಸುಭಾಷ್ ಸುಬ್ಬಯ್ಯ, ಸಬಿತ ಭೀಮಯ್ಯ, ಫ್ಯಾನ್ಸಿ, ಕರಂಬಯ್ಯ, ಭೀಮಪುತ್ರಿ ಬ್ರಿಗೇಡ್ ಸಂಘಟನೆಯ ರಾಜ್ಯಾಧ್ಯಕ್ಷೆ ರೇವತಿ ರಾಜ್, ಬಹುಜನ ಭಾಗ್ಯ ವಿದಾತಾ ವೇದಿಕೆ ಸಂಘಟನೆಯ ರಾಜ್ಯಾಧ್ಯಕ್ಷ ಚೇತನ್ ಕುಮಾರ್ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಅಪಘಾತದ ಗಾಯಾಳು ಸಾವು

ಕೊಳ್ಳೇಗಾಲ, ಮಾ.26– ಮಂಗಳವಾರ ಬಸ್ ಮತ್ತು ಟಾಟಾ ಏಸ್ ವಾಹನ ನಡುವೆ ಡಿಕ್ಕಿ ನಡುವೆ ಸಂಭವಿಸಿದ್ದ ಪ್ರಕರಣದಲ್ಲಿ ಗಾಯಗೊಂಡಿದ್ದ ಪ್ಯಾಸೆಂಜರ್ ಆಟೋ ಚಾಲಕ ದೊಡ್ಡಿಂದುವಾಡಿ ಗ್ರಾಮದ ಗೌತಮ್(18) ಅಸುನೀಗಿದ್ದಾರೆ


ಮೃತ ಯುವಕ ಗೌತಮ್

ಇತ್ತೀಚೆಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದ ಆಶಾ ಎಂಬುವರ ತಿಥಿ ಕಾರ್ಯ ಮುಗಿಸಿ ಬಾಣೂರು ಕಡೆಗೆ ತೆರಳುತ್ತಿದ್ದಾಗ ಟಾಟಾ ಏಸ್ ವಾಹನಕ್ಕೆ ಕೆ.ಎಸ್.ಆರ್.ಟಿ.ಸಿ ಬಸ್ ಡಿಕ್ಕಿ ಹೊಡೆದಿತ್ತು. ಗಾಯಾಳುಗಳ ಪೈಕಿ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ 18 ವರ್ಷದ ಚಾಲಕ ಗೌತಮ್ ಚಿಕಿತ್ಸೆ ಫಲಕಾರಿಯಾಗದೇ ಮೃತರಾಗಿದ್ದಾರೆ

ವಿಷಯ ತಿಳಿದ ಪೊಲೀಸರು ಮೈಸೂರಿಗೆ ತೆರಳಿ ಮರಣೋತ್ತರ ಪರೀಕ್ಷೆ ನಡೆಸಿ ಬಳಿಕ ಶವವನ್ನು ವಾರಸುದಾರರಿಗೆ ಒಪ್ಪಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಅಳಿಯನನ್ನು ಚಾಲಕನಾಗಿ ಕಳುಹಿಸಿದ್ದ ಮಾವ : ಮಂಗಳವಾರ ಪುಣ್ಯ ತಿಥಿ ಕಾರ್ಯಕ್ಕೆ ಟಾಟಾ ಏಸ್ ಮಾಲೀಕ ಮಹದೇವ್ ಅವರೇ ಚಾಲಕರಾಗಿ ತೆರಳಬೇಕಿತ್ತು., ಆದರೆ ಅನಿವಾರ್ಯ ಕಾರಣಗಳಿಂದಾಗಿ ತನ್ನ ಸೋದರಳಿಯ ಗೌತಮ್ ಎಂಬಾತನ್ನು ಕಳುಹಿಸಲಾಗಿತ್ತು. ಬಸ್ ಡಿಕ್ಕಿ ಹಿನ್ನೆಲೆ ಗಂಭೀರ ಗಾಯಗೊಂಡಿದ್ದು. ಇಂದು ಬೆಳಗ್ಗೆ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ

ಕೂಲ್ ಡ್ರಿಂಕ್ಸ್ ತುಂಬಿದ ಲಾರಿ ಪಲ್ಟಿ



ಕೊಳ್ಳೇಗಾಲ. ಮಾ.26– ಚಾ.ನಗರದಿಂದ ಹೈದರಾಬಾದ್ ಕಡೆಗೆ ಕೂಲ್ ಡ್ರಿಂಕ್ಸ್ ತುಂಬಿಕೊಂಡು ಸಾಗುತ್ತಿದ್ದ ಲಾರಿಯೊಂದು ಆಯತಪ್ಪಿ ಜಮೀನಿನ ಒಳಗಡೆ ಪಲ್ಟಿಯಾಗಿ ಬೆಳೆ ನಷ್ಟವಾಗಿರುವ ಘಟನೆ ಜರುಗಿದೆ.

ಪಟ್ಟಣದ ಮೋಳೆ ಬಡಾವಣೆಯ ಹೊರವಲಯದ ಬೈಪಾಸ್ ರಾಷ್ಟ್ರೀಯ ಹೆದ್ದಾರಿಯಿಂದ ಆಯತಪ್ಪಿ ಉರುಳಿ ನಂಜುಂಡಸ್ವಾಮಿ ಎಂಬವರಿಗೆ ಸೇರಿದ ನಾಟಿ ಮಾಡಿದ್ದ ಜಮೀನಿಗೆ ಲಾರಿ(ಟಿಎಸ್–12, ಯುಡಿ2012) ಬಿದ್ದು ಬಾಟಲ್‌ಗಳು ಚೆಲ್ಲಾಡಿದ್ದರಿಂದ ಬೆಳೆ ನಾಶವಾಗಿದೆ. ಚಾಲಕ ಅಸ್ವಾಬ್ ಪ್ರಾಣಾಪಾಯದಿಂದ ಪಾರಾಗಿದ್ದು, ಈ ಘಟನೆಯಿಂದ ನಾಶವಾಗಿರುವ ಬೆಳೆಗೆ ಸೂಕ್ತ ಪರಿಹಾರ ನೀಡುವಂತೆ ರೈತರು ಆಗ್ರಹಿಸಿದ್ದಾರೆ.

ಇಂದು ಪ್ರೊ.ಮಲ್ಲಣ್ಣಗೆ ನಾಗರಿಕ ಸೇವಾ ಪ್ರಶಸ್ತಿ

ಕೊಳ್ಳೇಗಾಲ, ಮಾ.26– ಸಂತ ಶಿಶುನಾಳ ಪ್ರಶಸ್ತಿ ಪುರಸ್ಕೃತರಾದ ತಾಲೂಕಿನ ಗುಂಡೇಗಾಲ ಗ್ರಾಮದ ಪ್ರೊ. ಮಲ್ಲಣ್ಣ ಅವರಿಗೆ ನಾಗರಿಕ ಸೇವಾ ಪ್ರಶಸ್ತಿ ಸಮರ್ಪಣಾ ಸಮಾರಂಭವು ಮಾ.27 ರಂದು ಜರುಗಲಿದೆ.



ಕನ್ನಡ ಸಾಹಿತ್ಯ ಪರಿಷತ್ ಕನ್ನಡ ಸಂಸ್ಕೃತಿ ಇಲಾಖೆ ಮತ್ತಿತರೆ ಸಂಘಟನೆಗಳ ಸಹಯೋಗದಲ್ಲಿ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ನಡೆಯಲಿರುವ ಸಮಾರಭದಲ್ಲಿ ಮಾಜಿ ಶಾಸಕಿ ಪರಿಮಳ ನಾಗಪ್ಪ ಅವರು ಪ್ರಶಸ್ತಿಯನ್ನು ಪ್ರದಾನ ಮಾಡಲಿದ್ದು, ಸಮಾರಂಭವನ್ನು ಶಾಸಕ ಎ.ಆರ್.ಕೃಷ್ಣಮೂರ್ತಿ ಉದ್ಘಾಟಿಸುವರು. ಸಾನಿಧ್ಯವನ್ನು ಗುಂಡೇಗಾಲ ಮಠಾಧ್ಯಕ್ಷ ಮಲ್ಲಿಕಾರ್ಜುನ ಸ್ವಾಮೀಜಿಗಳವರು ವಹಿಸಲಿದ್ದಾರೆ.

ಚಾಮುಲ್ ಅಧ್ಯಕ್ಷ ನಂಜುಂಡಸ್ವಾಮಿ, ಡಾ. ಕೊಂಗಳಪ್ಪ, ಬಿಜೆಪಿ ನಾಯಕ ನಿಶಾಂತ್, ಡಾ.ದತ್ತೇಶ್ ಕುಮಾರ್, ನಗರಸಭಾಧ್ಯಕ್ಷೆ ರೇಖಾ, ಉಪಾಧ್ಯಕ್ಷ ಎ.ಪಿ.ಶಂಕರ್, ಅಕ್ಕನ ಬಳಗದ ಅರುಣಾ ಕಾರ್ತೀಕ, ವೀರಶೈವ ಮಹಾಸಭೆ ಕೊಳ್ಳೇಗಾಲ ತಾಲೂಕು ಅಧ್ಯಕ್ಷ ಪುಟ್ಟಣ್ಣ, ಹನೂರು ಘಟಕದ ಅಧ್ಯಕ್ಷ ಸೋಮಶೇಖರ್, ನಾಗರಾಜು ಕೊಂಗರಹಳ್ಳಿ, ಮಲ್ಲೇಶಪ್ಪ, ಜಾಗತಿಕ ಲಿಂಗಾಯಿತ ಮಹಾಸಭೆ ಅಧ್ಯಕ್ಷ ಬಿಂದು ಲೋಕೇಶ್, ಚಿಕ್ಕರಾಜು, ನಾಗರಾಜು ಇತರರು ಪಾಲ್ಗೊಳ್ಳಲಿದ್ದಾರೆ.

ಚಾ.ನಗರ ನಗರಸಭೆ 1.84 ಕೋಟಿ ಉಳಿತಾಯ ಬಜೆಟ್

ಚಾಮರಾಜನಗರ, ಮಾ.26– ನಗರಸಭೆಯ 2025–26ನೇ ಸಾಲಿನ 1.84 ಕೋಟಿ ಉಳಿತಾಯ ಬಜೆಟ್ ಅನ್ನು ನಗರಸಭೆ ಅಧ್ಯಕ್ಷ ಸುರೇಶ್ ಮಂಡಿಸಿದರು.

ನಗರಸಭೆಯ ಸಭಾಂಗಣದಲ್ಲಿ ನಡೆದ ಬಜೆಟ್ ಸಭೆಯಲ್ಲಿ 1553.45 ಲಕ್ಷ ಪ್ರಾರಂಭಿಕ ಶಿಲ್ಕು, 4,388.95 ಲಕ್ಷ ಜಮೆಗಳು ಸೇರಿ ಒಟ್ಟು 59.42 ಕೋಟಿ ರೂ.ಗಳು ಹಾಗೂ 5758.38 ಲಕ್ಷ ಖರ್ಚುಗಳೊಂದಿಗೆ ಒಟ್ಟು 1.84 ಕೋಟಿ ರೂ.ಗಳ ಉಳಿತಾಯ ಅಂತಿಮ ಶಿಲ್ಕು, ಉಳಿದಂತೆ 2025–26ನೇ ಸಾಲಿಗೆ 1,515.60 ಲಕ್ಷ ರೂ.ಗಳನ್ನು ನಗರ ಸಭೆಯ ಸ್ವಂತ ಮೂಲಗಳಿಂದ ಕ್ರೋಢೀಕರಿಸಲು ಉದ್ದೇಶಿಸಲಾಗಿದೆ. ಜೊತೆಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಂದ 2,873.35 ಲಕ್ಷ ರೂ.ಗಳು ಸೇರಿ ಒಟ್ಟು 4,388.95 ಲಕ್ಷಗಳ ಕ್ರೋಢೀಕರಣವನ್ನು ನಿರೀಕ್ಷಿಸಲಾಗಿದೆ ಎಂದು ತಿಳಿಸಿದರು.

ಉತ್ತವಳ್ಳಿಯ ಮೆಡಿಕಲ್ ಕಾಲೇಜು ಹತ್ತಿರ ಎಸ್‌ಎಫ್‌ಸಿ ವಿಶೇಷ ಅನುದಾನದಿಂದ ವಿದ್ಯುತ್ ಚಿತಾಗಾರ ನಿರ್ಮಾಣ ಮಾಡಲು ಟೆಂಡರ್ ಆಹ್ವಾನಿಸಲಾಗಿದ್ದು, 2025–26ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು 400 ಲಕ್ಷಗಳನ್ನು ಕಾಯ್ದಿರಿಸಲಾಗಿದೆ ಎಂದು ಮಾಹಿತಿ ನೀಡಿದರು.


ನಗರಸಭೆಯ ಅಧ್ಯಕ್ಷ ಸುರೇಶ್ ಬಜೆಟ್ ಮಂಡಿಸಿದರು. ಪೌರಾಯುಕ್ತ ರಾಮದಾಸ್ ಉಪಸ್ಥಿತರಿದ್ದರು.

ರಸ್ತೆ ಬದಿಯಲ್ಲಿ ತಳ್ಳುವ ಗಾಡಿಗಳಲ್ಲಿ ಚಾಟ್ಸ್ ತಿಂಡಿ ಹಾಗೂ ಆಹಾರ ಪದಾರ್ಥಗಳನ್ನು ಮಾರಾಟ ಮಾಡುವುದನ್ನು ನಿಯಂತ್ರಿಸಲು ಹಾಗೂ ನಗರ ವಾಸಿಗಳ ಆರೋಗ್ಯದ ಹಿತದೃಷ್ಟಿಯಿಂದ ನಗರ ವ್ಯಾಪ್ತಿಯ ಎರಡು ಸ್ಥಳಗಳಲ್ಲಿ ಸುರಕ್ಷಿತಾ ಜಾಗವನ್ನು ಗುರುತಿಸಿ ನಗರಸಭಾ ವತಿಯಿಂದ ಮೊಬೈಲ್ ಕಂಟೈನರ್ ಮಳಿಗೆಗಳನ್ನು ಅಳವಡಿಸಿ ಆಹಾರ ಸುರಕ್ಷಾತಾ ವಲಯಗಳನ್ನು ಸ್ಥಾಪನೆ ಮಾಡಲು 25 ಲಕ್ಷಗಳನ್ನು ಕಾಯ್ದಿರಿಸಲಾಗಿದೆ ಮತ್ತು ಸದರಿ ಮಳಿಗೆಗಳಿಂದ ನಗರಸಭೆಗೆ ನಿಗದಿತ ಆದಾಯ ಬರುವಂತೆ ಯೋಜನೆ ರೂಪಿಸಲು ಉದ್ದೇಶಿಸಲಾಗಿದೆ ಎಂದರು. ಅಮೃತ್ 2.0 ಯೋಜನೆಯಡಿ 80ಲಕ್ಷ ವೆಚ್ಚದಲ್ಲಿ ಚಾಮರಾಜೇಶ್ವರ ಪಾರ್ಕ್, ಪುಟ್ಟಮ್ಮಣ್ಣಿ ಪಾರ್ಕ್ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ಉದ್ಯಾನವನವನ್ನು ಅಭಿವೃದ್ಧಿ ಮಾಡುವುದರ ಜೊತೆಗೆ 15ನೇ ಹಣಕಾಸು ಯೋಜನೆಯಡಿ ಪಾರ್ಕ್ ಉನ್ನತೀಕರಣ ಮಾಡಲು 50ಲಕ್ಷಗಳನ್ನು ಕಾಯ್ದಿರಿಸುವುದರ ಮುಖಾಂತರ ನಗರ ಸಭಾ ವ್ಯಾಪ್ತಿಯ ಪಾರ್ಕ್‌ಗಳ ಅಭಿವೃದ್ಧಿಗೊಳಿಸಲು ಆದ್ಯತೆ ನೀಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ಪೌರಾಯುಕ್ತ ರಾಮದಾಸ್, ಅಧಿಕಾರಿಗಳು, ಸಿಬ್ಬಂದಿ ಹಾಜರಿದ್ದರು.

ಗಾಂಜಾ ಸಾಗಣೆ; ಆರೋಪಿಗಳಿಬ್ಬರ ಬಂಧನ

ಕೊಳ್ಳೇಗಾಲ, ಮಾ.26– ಒಣ ಗಾಂಜಾವನ್ನು ಅಕ್ರಮವಾಗಿ ಮಾರಾಟ ಮಾಡಲು ತರುತ್ತಿದ್ದ ಆರೋಪಿಗಳಿಬ್ಬರನ್ನು ಪಟ್ಟಣ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ತಾಲೂಕಿನ ಅರೇಪಾಳ್ಯ ಗ್ರಾಮದ ವಿನ್ಸೆಂಟ್ (35). ಜಕ್ಕಳ್ಳಿ ಗ್ರಾಮದ ಜಾನ್ ಬ್ರಿಟೋ(33) ಬಂಧಿತ ಆರೋಪಿಗಳು. ಆರೋಪಿಗಳು ಶನಿವಾರ ರಾತ್ರಿ 10ಗಂಟೆ ಸುಮಾರಿನಲ್ಲಿ ಜಕ್ಕಳ್ಳಿ ಗ್ರಾಮದಿಂದ ಪಟ್ಟಣದ ಕಡೆಗೆ ಒಣಗಾಂಜಾ ಮಾರಾಟ ಮಾಡುವ ಸಲುವಾಗಿ ಲಿಂಗಣಾಪುರದಿಂದ ಹೀರೋ ಸ್ಪ್ಲೆಂಡರ್ ಬೈಕ್ (ಕೆಎ–10, ಇಜಿ 2177) ನಲ್ಲಿ ಆಗಮಿಸುತ್ತಿದ್ದ ವೇಳೆ ಖಚಿತ ಮಾಹಿತಿ ಮೇರೆಗೆ ಪೋಲಿಸ್ ತಂಡವು ಲಿಂಗಣಾಪುರ ಸರ್ಕಲ್‌ನಲ್ಲಿ ಬೈಕ್ ತಡೆದು ಆರೋಪಿಗಳನ್ನು ಪರಿಶೀಲಿಸಿದಾಗ ನಾನೂರು ಗ್ರಾಂ ಒಣ ಗಾಂಜಾ ಇರುವುದು ಕಂಡು ಬಂದ ಹಿನ್ನೆಲೆ ಆರೋಪಿಗಳನ್ನು ಬಂಧಿಸಿ ಬೈಕ್ ಹಾಗೂ ಒಣ ಗಾಂಜಾ ವಶಕ್ಕೆ ಪಡೆದು ಪಟ್ಟಣ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಡಿವೈಎಸ್ಪಿ ಧರ್ಮೇಂದ್ರ ರವರ ಮಾರ್ಗದರ್ಶನದಲ್ಲಿ ಪಿಎಸ್‌ಐ ಕುಮಾರಿ ವರ್ಷರವರ ನೇತೃತ್ವದಲ್ಲಿ ಅಪರಾಧ ದಳದ ಸಿಬ್ಬಂದಿಗಳಾದ ಎಎಸ್‌ಐ ತಖೀವುಲ್ಲಾ. ರವಿ. ಕಿಶೋರ್, ವೆಂಕಟೇಶ್, ಬಿಳಿಗೌಡ, ಶಿವಕುಮಾರ್, ಪಟ್ಟಣ ಪೊಲೀಸ್ ಠಾಣೆಯ ವಿರೇಂದ್ರ, ಅನಿಲ್, ರಾಜು, ಸಂಜಯ್ ಮೊದಲಾದವರು ಪಾಲ್ಗೊಂಡಿದ್ದರು.


ಕೊಳ್ಳೇಗಾಲ ಪಟ್ಟಣ ಪೋಲೀಸರು ಒಣಗಾಂಜಾ ಸಾಗಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಪಟ್ಟಣ ಬಂಧಿಸಿ ಗಾಂಜಾ ಮತ್ತು ಬೈಕನ್ನು ವಶಪಡಿಸಿ ಕೊಂಡರು.

ಗಮಕ ವಾಚನ, ವ್ಯಾಖ್ಯಾನದಿಂದ ಮನಸ್ಸಿಗೆ ಆನಂದ

ಚಾಮರಾಜನಗರ, ಮಾ.26– ಗಮಕ ವಾಚನ ಮತ್ತು ವ್ಯಾಖ್ಯಾನದಿಂದ ಮನಸ್ಸಿಗೆ ಆನಂದವನ್ನು ಉಂಟು ಮಾಡುತ್ತದೆ. ಮನೆ ಮನೆಗೆ ಗಮಕ ಕಾರ್ಯಕ್ರಮದ ಮೂಲಕ ಜಾಗೃತಿಯನ್ನು ಉಂಟು ಮಾಡುವುದು ಹಾಗೂ ಶಾಲಾ ಕಾಲೇಜು ಮಕ್ಕಳಿಗೆ ಹಾಗೂ ಆಸಕ್ತರಿಗೆ ಗಮಕಲೆಯನ್ನು ಕಲಿಯಲು ವ್ಯವಸ್ಥೆ ಮಾಡಬೇಕು ಎಂದು ಕರ್ನಾಟಕ ಗಮಕ ಕಲಾಪರಿಷತ್ತಿನ ಜಿಲ್ಲಾಧ್ಯಕ್ಷರಾದ ಸುರೇಶ್ ಎನ್.ಋಗ್ವೇದಿ ತಿಳಿಸಿದರು.

ಪರಿಷತ್ತಿನ ಸಭಾಂಗಣದಲ್ಲಿ ಜರುಗಿದ ಕನಕ ಕಲೆ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡುತ್ತ ಹಳಗನ್ನಡದ ಕಾವ್ಯವನ್ನು ಸರಳ ರೂಪದಲ್ಲಿ ರಾಗ ಮತ್ತು ಶೃತಿ ಬದ್ಧವಾಗಿ ಹಾಡುವ ಮೂಲಕ ಮತ್ತು ಅದರ ಅರ್ಥವನ್ನು ವಿವರಿಸುವ ವಿಶಿಷ್ಟವಾದ ಕಲೆ ಗಮಕ ಕಲೆಯಾಗಿದೆ. ಜಿಲ್ಲೆಯಲ್ಲಿ ಹಲವಾರು ಶ್ರೇಷ್ಠ ಗಮಕಿಗಳೂ ಸೇವೆ ಸಲ್ಲಿಸಿದ್ದಾರೆ ಎಂದರು. ಮನೆ ಮನೆಗೆ ಗಮಕ ಕಾರ್ಯಕ್ರಮವನ್ನು ತಿಂಗಳಿಗೊಮ್ಮೆ ರೂಪಿಸುವ ಮೂಲಕ ಉತ್ಸಾಹಿಗಳ ಆಸಕ್ತಿಯನ್ನು ಹೆಚ್ಚಿಸೋಣ ಎಂದು ವಿಜಯಲಕ್ಷ್ಮಿ ತಿಳಿಸಿದರು. ಕಾರ್ಯಕ್ರಮದಲ್ಲಿ ವೀರಶೆಟ್ಟಿ, ವಾಸಂತಿ, ಪದ್ಮ ಪುರುಷೋತ್ತಮ್ ಸರಸ್ವತಿ, ಬಿಕೆ ಆರಾಧ್ಯ, ಲಕ್ಷ್ಮಿ ನರಸಿಂಹ ಇದ್ದರು.

ಪಟ್ಟಣ ಪಂಚಾಯಿತಿ ವಿವಿಧ ಬಾಬ್ತುಗಳ ಹರಾಜು


ಯಳಂದೂರು ಪಟ್ಟಣ ಪಂಚಾಯಿತಿಯ ಆವರಣದಲ್ಲಿ ವಿವಿಧ ಬಾಬುಗಳಿಗೆ ಹರಾಜು ಪ್ರಕ್ರಿಯೆ ನಡೆಯಿತು. ಪಪಂ ಅಧ್ಯಕ್ಷೆ ಲಕ್ಷ್ಮಿ ಮಲ್ಲು, ಉಪಾಧ್ಯಕ್ಷೆ ಶಾಂತಮ್ಮ ನಿಂಗರಾಜು ಇದ್ದರು.

ಯಳಂದೂರು, ಮಾ.26– ಪಟ್ಟಣ ಪಂಚಾಯಿತಿಯ ವಿವಿಧ ಬಾಬ್ತುಗಳಿಗೆ ಹರಾಜು ಪ್ರಕ್ರಿಯೆಯು ಪಂಚಾಯಿತಿಯ ಆವರಣದಲ್ಲಿ ನಡೆಯಿತು.

ಒಟ್ಟು 8 ಬಾಬುಗಳಿಗೆ ಹರಾಜು ಪ್ರಕ್ರಿಯೆ ನಡೆಯಿತು. ಇದರಲ್ಲಿ ಪಟ್ಟಣ ಪಂಚಾಯಿತಿ ಬಸ್ ನಿಲ್ದಾಣದ ವ್ಯಾಪ್ತಿಯಲ್ಲಿ ಹೂವು ಮಾರಾಟದ ಹಕ್ಕಿಗೆ ಯಾರೂ ಕೂಡ ಭಾಗವಹಿಸಲಿಲ್ಲ. ಪಪಂನ ವಾರದ ಸಂತೆಯ ಸುಂಕ ವಸೂಲಾತಿ ಹಕ್ಕು 1,52,000 ರೂ.ಗಳಿಗೆ ಹರಾಜಾಯಿತು. ಬಸ್ ನಿಲ್ದಾಣದ ಸುಂಕ ವಸೂಲಾತಿ, 2,05000 ರೂ.ಗೆ ನೆಲಸುಂಕ ವಸೂಲಾತಿ ಹಕ್ಕು, 3,82000 ರೂ. ಎಲೆಕೇರಿ ಮಾಂಸದ 1 ಮತ್ತು 2 ನೇ ಅಂಗಡಿ ಕ್ರಮವಾಗಿ 26,000 ರೂ. 11,000 ರೂ. ಕೋಳಿ ಮಾಂಸದ 1 ಮತ್ತು 2ನೇ ಅಂಗಡಿ ಕ್ರಮವಾಗಿ 55,000 ರೂ.20,000 ರೂಗೆ ಮಾರಾಟವಾಯಿತು. ಒಟ್ಟು 8,51,000 ರೂ.ಗಳಿಗೆ ಹರಾಜಾಯಿತು. ಇದರಲ್ಲಿ ಜಿಎಸ್‌ಟಿ ಶುಲ್ಕ ಸೇರಿ ಒಟ್ಟು 10,05080 ರೂ.ಗಳನ್ನು ಹರಾಜುದಾರರು ಪಂಚಾಯಿತಿಗೆ ಜಮೆ ಮಾಡಿದರು.

ಈ ಸಂದರ್ಭದಲ್ಲಿ ಮುಖ್ಯಾಧಿಕಾರಿ ಎಂ.ಪಿ. ಮಹೇಶ್‌ಕುಮಾರ್ ಮಾತನಾಡಿ, ಕಳೆದ ಬಾರಿ ಈ 8 ಬಾಬುಗಳಿಂದ ಒಟ್ಟು 8,53,140 ರೂ.ಗೆ ಹರಾಜಾಗಿತ್ತು. ಈ ಬಾರಿ ಈ ಮೊತ್ತದಲ್ಲಿ ಏರಿಕೆ ಕಂಡು ಬಂದಿದ್ದು ಒಟ್ಟು 1,51,940 ರೂ. ಏರಿಕೆ ಕಂಡು ಬಂದಿದೆ ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಪಪಂ ಅಧ್ಯಕ್ಷೆ ಲಕ್ಷ್ಮಿ ಮಲ್ಲು, ಉಪಾಧ್ಯಕ್ಷೆ ಶಾಂತಮ್ಮ ನಿಂಗರಾಜು ಸದಸ್ಯರಾದ ಮಹೇಶ್, ವೈ.ಜಿ.ರಂಗನಾಥ, ಸುಶೀಲಾಪ್ರಕಾಶ್, ಸವಿತಾ ಬಸವರಾಜು, ಪ್ರಭಾವತಿ ರಾಜಶೇಖರ್, ಮಹದೇವ ನಾಮನಿರ್ದೇಶಿತ ಸದಸ್ಯರಾದ ಲಿಂಗರಾಜಮೂರ್ತಿ, ಮುನವ್ವರ್ ಬೇಗ್, ಶ್ರೀಕಂಠಸ್ವಾಮಿ ಸಿಬ್ಬಂದಿಗಳಾದ ಮಂಜುನಾಥ, ಜಯಲಕ್ಷ್ಮಿ ಮಲ್ಲಿಕಾರ್ಜುನ, ಗಣೇಶ ಸೇರಿದಂತೆ ಅನೇಕರು ಇದ್ದರು.



ನಾನು ಪಕ್ಷ ವಿರೋಧಿ ಚಟುವಟಿಕೆ ನಡೆಸಿಲ್ಲ



ಸೋಮಶೇಖರ್

ಬೆಂಗಳೂರು, ಮಾ.26– ನಾನು ಪಕ್ಷ ವಿರೋಧಿ ಚಟುವಟಿಕೆ ನಡೆಸಿಲ್ಲ ಸರ್ಕಾರದ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಪಕ್ಷ ವಿರೋಧಿ ಚಟುವಟಿಕೆ ಆಗುತ್ತದೆಯೇ ಎಂದು ಬಿಜೆಪಿ ಶಾಸಕ ಎಸ್.ಟಿ.ಸೋಮಶೇಖರ್ ತಿಳಿಸಿದರು. ಪಕ್ಷ ನೀಡಿರುವ ನೋಟೀಸ್‌ಗೆ 74 ಗಂಟೆಗಳಲ್ಲಿ ಉತ್ತರ ನೀಡುತ್ತೇನೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಪಕ್ಷದ ರಾಜ್ಯ ನಾಯಕರು ಯಾವುದೇ ಸಭೆಗಳಿಗೆ ನನ್ನನ್ನು ಆಹ್ವಾನಿಸುತ್ತಿಲ್ಲ, ಶಾಸಕರಾಗಿ ಪಕ್ಷದ ಸಭೆಗೆ ಕರೆಯುತ್ತಿಲ್ಲ, ಲೋಕಸಭಾ ಚುನಾವಣೆ, ವಿಧಾನ ಪರಿಷತ್ ಚುನಾವಣೆ ವೇಳೆ ಪ್ರಚಾರಕ್ಕೆ ಕರೆಯದೇ ನಿರ್ಲಕ್ಷಿಸಲಾಗಿದೆ. ಯಾವುದೇ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುತ್ತಿಲ್ಲ ಎಂದರು.

ಗೀತಾ ಶಿವಕುಮಾರ್ ಆಸ್ಪತ್ರೆಗೆ ದಾಖಲು

ಬೆಂಗಳೂರು, ಮಾ.26–ಕ್ಯಾನ್ಸರ್ ಸಮಸ್ಯೆಯಾಗಿ ಅಮೆರಿಕದಲ್ಲಿ ಚಿಕಿತ್ಸೆ ಪಡೆದು ನಟ ಶಿವರಾಜ್ ಕುಮಾರ್ ಗುಣಮುಖರಾಗಿ ಭಾರತಕ್ಕೆ ವಾಪಸ್ ಆದ ಬೆನ್ನಲ್ಲೇ ಇದೀಗ ಅವರ ಪತ್ನಿ ಗೀತಾ ಶಿವರಾಜ್ ಕುಮಾರ್ ಕೂಡ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಶಿವರಾಜ್‌ಕುಮಾರ್ ಅವರ ಪತ್ನಿ ಗೀತಾ ಶಿವರಾಜ್‌ಕುಮಾರ್ ಅವರು ಕತ್ತಿನ ಭಾಗದ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದು, ಅವರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿದಿದೆ ಎಂದು ತಿಳಿದುಬಂದಿದೆ.

ಗೀತಾ ಶಿವರಾಜ್‌ಕುಮಾರ್ ಅವರಿಗೆ ನರದ ಸಮಸ್ಯೆಯಿಂದ ಕತ್ತಿನ ಭಾಗದಲ್ಲಿ ನೋವು ಕಾಣಿಸಿಕೊಂಡಿತ್ತು ಎನ್ನಲಾಗಿದೆ. ಈ ಮೊದಲೇ ಅವರು ಇದಕ್ಕೆ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಬೇಕಿತ್ತು.

ಆದರೆ ಅದು ಸಾಧ್ಯವಾಗಿರಲಿಲ್ಲ. ಈಗ ಗೀತಾ ಅವರು ಕತ್ತಿನ ಭಾಗದಲ್ಲಿ ಸರ್ಜರಿ ಮಾಡಿಸಿಕೊಂಡಿದ್ದಾರೆ ಎನ್ನಲಾಗಿದೆ. ಅವರು ಬೇಗ ಚೇತರಿಕೆ ಕಾಣಲಿ ಎಂದು ಫ್ಯಾನ್ಸ್ ಹಾರೈಸುತ್ತಿದ್ದಾರೆ.

ಶಿವರಾಜ್‌ಕುಮಾರ್‌ಗೆ ಅವರಿಗೆ ಕ್ಯಾನ್ಸರ್ ಕಾಣಿಸಿಕೊಂಡಾಗಿನಿಂದ ಕ್ಯಾನ್ಸರ್‌ಗೆ ಚಿಕಿತ್ಸೆ ಪಡೆಯುವವರೆಗೆ ಗೀತಾ ಅವರು ಬೆಂಬಲವಾಗಿ ನಿಂತಿದ್ದರು. ಪ್ರತಿ ಹಂತದಲ್ಲೂ ಪತಿಗೆ ಧೈರ್ಯ ತುಂಬಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ನಿವೇಶನ ಮಾರಾಟಕ್ಕಿದೆ
30x40 ದಕ್ಷಿಣ ದಿಕ್ಕು
ಮಹಾಲಕ್ಷ್ಮಿ ಲೇಔಟ್ ಫೇಸ್ –3
ನರಸೀಪುರ ರಸ್ತೆ, ಮೈಸೂರು.
Mob: 9591719591

ನಿವೇಶನ ಮಾರಾಟಕ್ಕಿದೆ
ಮೈಸೂರು, ಮಡಿಕೇರಿ ರಸ್ತೆಯ ಬಿಳಿಕೆರೆ ಬಳಿ 30x40 ಅಳತೆಯ A ಖಾತಾ ನಿವೇಶನಗಳು ಮಾರಾಟಕ್ಕಿದೆ. ರಿಜಿಸ್ಟರ್ ಮಾಡಲು ಮತ್ತು ಮನೆ ಕಟ್ಟಲು ಸಿದ್ಧವಾಗಿದೆ.
9845114304
9845144307

SITE FOR SALE
KBL ROSE WOOD
30x40 E/F
Attached to Shanthaveri Gopalagowda Muda Layout, Mysore
Mob: 9980716155

ಸೈಟ್ ಮಾರಾಟಕ್ಕಿದೆ
30x40 S/F, 40x53 N/F
40x60 N/F
ಗಾಯಿತ್ರಿ ಲೇಔಟ್ ರಿಂಗ್ ರಸ್ತೆ ಹತ್ತಿರ
27½ x40 S/F
ಜ್ಞಾನಭಾರತಿ ಪಕ್ಕ 40x60 S/N/E/F
ಪರಶುರಾಮ ಲೇಔಟ್, ಬನ್ನೂರು ರೋಡ್
9900372792

ಛತ್ರ ಖಾಲಿ ಇದೆ
17 ಮತ್ತು 18 ಮೇ 2025
GLN Convention Hall
Bogadi Mysore
9845129666
7411250999

ಕೆಲಸಕ್ಕೆ ಬೇಕಾಗಿದ್ದಾರೆ
* ಗ್ರಾಫಿಕ್ ಡಿಸೈನರ್ 1
ಕೊರಲ್ ಡ್ರಾ + ಫೋಟೊ ಶಾಪ್ (Salary:25000)
* ಕಂಪ್ಯೂಟರ್ ಆಪರೇಟರ್ 2
* ಫ್ಲೆಕ್ಸ್ ಪ್ರಿಂಟಿಂಗ್ ಮಾಡಲು ಹೆಲ್ಪರ್ 1
8884140303

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU: 9611028523 MANGALORE: 9343142258

ನಮ್ಮಲ್ಲಿ ಬಾದಾಮಿ, ಗೋಡಂಬಿ, ಪಿಸ್ತಾ, ಅಂಜೂರ, ಒಣದ್ರಾಕ್ಷಿ, ಖರ್ಜೂರ, ಮುಂತಾದ ಡ್ರೈಫ್ರೂಟ್ಸ್ ದೊರೆಯುತ್ತದೆ. (5 ಕಿ.ಮೀ ವರೆಗೂ ಉಚಿತ ಡೆಲಿವರಿ) ಸಂಪರ್ಕಿಸಿ:
ರಾಜ್ ಗುರು ಡ್ರೈಫ್ರೂಟ್, ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು
7022293342
9845460211

WANTED
Field Executive
ಫೀಲ್ಡ್ ಎಕ್ಸಿಕ್ಯೂಟಿವ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
8050804575

PRAKRUTHI PROPERTIES
SITES FOR SALE
40x60 Commercial Site Nr Bramharamba Chltry,
40x60 Site & House @ Ramakrishna Nagar
20x45 House @ Kuvempu Ngr
40x60 Shardha Lyt (JP Nagar)
20x30 VRL Lyt HD Kote Road
30x50 Nr Mookambika Lyt,HD Kote Rd
Sites also available Near RT Nagar, Bogadi in & around Mysore
95386 90359, 90359 90359

ಕಳೆದಿದೆ
ವೀರಸ್ವಾಮಿ ಬಿನ್ ರಾಮಸ್ವಾಮಿ ರವರ ಹೆಸರಿಗೆ ಶ್ರೀರಂಗಪಟ್ಟಣ ತಾಲ್ಲೂಕು, ಬೆಳಗೊಳ ಹೋಬಳಿ, ಮೊಗರಹಳ್ಳಿ ಗ್ರಾಮದಲ್ಲಿ ಸರ್ಕಾರ ಆಶ್ರಯ ಯೋಜನೆಯಡಿ 1982ರಲ್ಲಿ ಹಕ್ಕುಪತ್ರವನ್ನು ವಿತರಣೆ ಮಾಡಿದ್ದು, ಸರ್ವೆ ನಂ.28/1ರ ನಿವೇಶನ ಸಂಖ್ಯೆ 54, ಅಳತೆ 30x30 ಅಡಿಗಳುಳ್ಳ ನಿವೇಶನದ ಹಕ್ಕುಪತ್ರವು ದಿನಾಂಕ: 23–03–2025ರಂದು ಕಳೆದಿದ್ದು, ಸಿಕ್ಕವರು ದಯವಿಟ್ಟು ಸಂಪರ್ಕಿಸಿ: ಮಣಿಕಂಠ ಬಿನ್ ಚಿಕ್ಕಗೋವಿಂದ, ಮೊಗರಹಳ್ಳಿ ಗ್ರಾಮ, ಬೆಳಗೊಳ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.
9591909654

OLD AGE HOME
We offer nursing and Medical Services to Bedridden and Senior Citizens with Veg. Food and Accomodation at Our Centre in Gokulam Mysore at a Reasonable Cost
9880102700

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

Can work from home!!!
EC/EE graduates, students, if interested to work on ES, IOT and FPGA hardware and software, please send your brief resume with photo to smnsimha@gmail.com

CHANGE OF NAME
I, Veena Hemesh, residing at # 333, 2nd Main, 'M' Block, Kuvempunagar, Mysore-570 023, have changed my name from Veena M V to Veena Hemesh vide affidavit sworn in before Notary Y.M. Kiran, Mysore, vide affidavit dated 05.03.2025.
Sd/- Veena Hemesh

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020



Solar Water Heater
SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

SITES WANTED
@ Anandasagara Nithyanandasagara Nagawala, Vijayanagara TVS Factory, Kadakola & Mysore Sourroundings
QUICK Regn.
95388-39926

BHANAVI HOSPITAL
Duty Doctor
Marketing Executive
Security
HOUSE KEEPING
CSSD Technician
9972982665

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಸಂಸ್ಥೆಗೆ ಹೌಸ್‌ಕೀಪಿಂಗ್ ಕೆಲಸಕ್ಕೆ ಪುರುಷ ಅಭ್ಯರ್ಥಿ ಬೇಕಾಗಿದ್ದಾರೆ.
ಸಂಪರ್ಕಿಸಿರಿ:
96067 21223
80505 22890

ಸ್ಫೂರ್ತಿಧಾರೆ ಸರ್ವೀಸ್
ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8861401315

ಮುಡಾ ಸೈಟು ಮಾರಾಟಕ್ಕಿದೆ
30x30 East Facing
ಜೆ.ಪಿ. ನಗರ ರಿಂಗ್ ರಸ್ತೆ ಪಕ್ಕದಲ್ಲಿ ಕೊಪ್ಪಲೂರು, ಮೈಸೂರು
7411848108

ಸುವರ್ಣ ಯಾತ್ರ
9 ದಿನಗಳ ನೇಪಾಳ, ಅಯೋಧ್ಯ ಹಾಗೂ ಮುಕ್ತಿನಾಥ ಪ್ರವಾಸ 27/4/2025.
11 ದಿನಗಳ ಶಿಮ್ಲಾ, ಕುಲು ಹಾಗೂ ಮನಾಲಿ ಪ್ರವಾಸ 29/4/2025.
7 ದಿನಗಳ ಅಂಡಮಾನ್ ಹಾಗೂ ನೇಲ್ ಐಲ್ಯಾಂಡ್ ಪ್ರವಾಸ 28/4/2025.
14 ದಿನಗಳ ಚಾರ್‌ಧಾಮ್ ಪ್ರವಾಸ 2/5/2025.
10 ದಿನಗಳ ಅಮರ್‌ನಾಥ್ ಪ್ರವಾಸ 26/6/2025.
6360146483, 9019462508

ಸೈಟ್ ಫಾರ್ ಸೇಲ್
ಏರ್ ಪೋರ್ಟ್ ಬಳಿಯ ಹೈವೇ ನಲ್ಲಿರುವ ಲೇಔಟ್ ನಲ್ಲಿ 30x40 ಕಾರ್ನರ್ ಸೈಟ್, ಮುಡಾ ಖಾತೆ & ಇ-ಖಾತೆ ಆಗಿದೆ. ಬೆಲೆ 44 ಲಕ್ಷ
Mob: 9342123373

WANTED
Sales Boys for a Sports Store to work Part Time in Mysore Evening 5pm to 9.30 pm
7760109047
8105368325

ಕಂಕಣ ಭಾಗ್ಯ
ಕುರುಬ, ಒಕ್ಕಲಿಗ, ಲಿಂಗಾಯತ್, ಈಡಿಗ, ಆಚಾರ್ಯ, ನಾಯಕ, SC, ನಮ್ಮಲ್ಲಿ ಎಲ್ಲಾ ಜಾತಿಯ ವಧು–ವರರಿಗೆ, ಸಂಪರ್ಕಿಸಿ ಹಾಗೂ ವಿಧುರ–ವಿಧವೆಯರು ವಿಚ್ಛೇದಿತರು ಸಂಪರ್ಕಿಸಿ:
9071577131

ಹೊಸದಾಗಿ ಸ್ವಂತಕ್ಕೆ ಕಟ್ಟಿರುವ ಮನೆಗಳು ಮಾರಾಟಕ್ಕಿವೆ
30x40 E/N Face
ಅಂಕನ ಹಳ್ಳಿ, ಇಲವಾಲ ಹತ್ತಿರ
30x40 N/N (RMP)
ಇಲವಾಲ ಹತ್ತಿರ
20x30 W/N Face, ಇಲವಾಲ ಹತ್ತಿರ
Mob: 8951666811

ಬೇಕಾಗಿದ್ದಾರೆ
ವರುಣಾ ಗ್ರಾಮದ ಹತ್ತಿರ ಕಾರ್ಯ ನಿರ್ವಹಿಸಲು ಮಹಿಳಾ ಗಾರ್ಡುಗಳು ಹಾಗೂ ವಿಜಯನಗರ 2nd / 4th Stage ಗೆ ವಿದ್ಯಾವಂತ ಪುರುಷ ಸೆಕ್ಯೂರಿಟಿ ಗಾರ್ಡುಗಳು. ಉಚಿತ ವಸತಿ (ಪುರುಷರಿಗೆ) ಊಟ / ಇಎಸ್ಐ / ಪಿಎಫ್ ದೊರೆಯುತ್ತದೆ.
9686422400, 9242406261

HOUSE FOR LEASE
30x40, 2 BHK independent house, suitable for office / home / commercial purpose Rajiv Nagar, Ring Road, near Narayana Multispeciality Hospital, Mysore.
8762101799, 8431946515

SITE FOR SALE
MUDA Approved 40x68 in Vyshnavi Enclave (Vasantha Nagar), 200 meters from Vidya Vikas Engineering College, 5.5 km from Mysore Palace, E/F back side park.
9900263372, 9008173060
BROKERS EXCUSE

LAND FOR SALE
2 Acre 16 Gunta. 8 km from Uthanahally, Ring Road & Mysuru Airport. Current Annual Income: 6 to 7 Lakh. Good For Future Investment.
Mob: 8884444353

ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ
ರಾಜರಾಜೇಶ್ವರಿ ನಗರ, ದಟ್ಟಗಳ್ಳಿ, ಬೋಗಾದಿ ಸುತ್ತಮುತ್ತ ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ.
ಸಂಬಳ: 16,500 +PF+ESI
Day & Night Shift
9986501873

ಮನೆ ಮಾರಾಟಕ್ಕಿದೆ
ಆಲನಹಳ್ಳಿ ಲೇಔಟ್, ಟಿ.ನರಸೀಪುರ ರಸ್ತೆ, ಮೈಸೂರು
20x30 ಕೆಳ ಅಂತಸ್ತು, ಮೇಲೆ ಅಂತಸ್ತು ಪೂರ್ವ ದಿಕ್ಕು
ಮನೆ ನಂ.539
9141404843
8088914755

Reputed Distributor Company in Hebbal
MARKETING EXECUTIVES - 3 Nos. - Male candidates
(Must have knowledge about industries). Education: Dip. in Mech / B.Sc. / ITI. Salary: 15K to 25K (Based on Exp.). Contact:
Mob: 9972029007

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಬೇಕಾಗಿದ್ದಾರೆ. ESI / PF ಜೊತೆಗೆ ಊಟ, ವಸತಿಯಿರುತ್ತದೆ ಸಂಬಳ – ರೂ. 15200 – 86,100
7337645977, 7892046990

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666



Bajaj EMI Facility Available With 0% Interest 0 Down Payment
Contact
9900609977, 9916457118
9449210068, 9972036774

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ಸೋಲಾರ್ ಸರ್ವೀಸ್
8197383645, 9008711654

SITE FOR SALE
Vijayanagar 4th Stage
MRR Layout South Face
30x40
Price 85 Lakh
Brokers Excuse
9972399939

WANTED TEACHERS
Himalayan Educational Trust
Pavaman Innovative School.
Primary Head - 1 post (5 years experience)
Nursery :- 2, Primary - 5 post (1-8 std)
Qualification :- NST, D.Ed, B.Ed, M.A, MSc, any degree (All subjects)
English knowledge is must.
#105/3, Himalayan Education Trust, 7th cross, 3rd main, B.M.Shree Nagar, Metagalli, Mysore.
8197695840, 8431891316

SITE FOR SALE
N/E Corner
60x70
Suvarna Nagara, Bogadi Road.
Mob: 8050821108

SITE FOR SALE
30x40 North
KSRTC Layout.
40x60 North
University Layout.
Call: 9880273834

SITE FOR SALE
MUDA APPROVED
20x30
Near Vidya Vikas College, Bannur Road.
8792207164, 6361799533

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟ ಚಿನ್ನವನ್ನು ಬಿಡಿಸಿ ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲೇ ನೀಡುತ್ತೇವೆ.
ಒಂದು ಗ್ರಾಂ ಚಿನ್ನಕ್ಕೆ ರೂ. 7900 (24 CT).
Mob: 9108146123

ಜಮೀನು ಮಾರಾಟಕ್ಕಿದೆ
ಮೈಸೂರು–ಮಳವಳ್ಳಿ ಮುಖ್ಯ ರಸ್ತೆಯಿಂದ 2 ಕಿ.ಮೀ ಗ್ರಾಮ ಸುಬ್ಬಲೂರು 3 ಎಕರೆ 3 ಗುಂಟೆ P ನಂಬರ್ ಜಮೀನು 1 ಎಕರೆಗೆ 15 ಲಕ್ಷ ಮಧ್ಯವರ್ತಿಗಳು ಸಂಪರ್ಕಿಸಿ
9986887541
ರಸ್ತೆಗೆ ಹೊಂದಿಕೊಂಡಂತೆ ಜಮೀನು ಫಾರಂ ಹೌಸ್ ಮಾಡಲು ಸೂಕ್ತವಾಗಿದೆ.

ಕೆಲಸಕ್ಕೆ ಬೇಕಾಗಿದ್ದಾರೆ
ವಯಸ್ಸಾದವರನ್ನು ನೋಡಿಕೊಳ್ಳಲು ಹಾಗೂ ಮಗು ಬಾಣಂತಿ ನೋಡಿಕೊಳ್ಳಲು ಅನುಭವ ಇರುವ ಇಲ್ಲದೆ ಇರುವವರು
ಸಮಯ 24 Hrs.
8123252840

ಹೋಂ ನರ್ಸಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ
ವಯಸ್ಸಾದವರನ್ನು, ರೋಗಿಗಳನ್ನು ಅವರ ಮನೆಯಲ್ಲೇ ನೋಡಿಕೊಳ್ಳಲು ಗಂಡಸರು/ಹೆಂಗಸರು ಮೈಸೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ.
ಉತ್ತಮ ಸಂಬಳ ನೀಡಲಾಗುವುದು.
9880102700

ತಕ್ಷಣ ಬೇಕಾಗಿದ್ದಾರೆ
ಹೆಬ್ಬಾಳು ಏರಿಯಾದಲ್ಲಿ ಕೆಲಸ ಮಾಡಲು ಮಹಿಳಾ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : PUC & ಮೇಲ್ಪಟ್ಟು
ಸಂಬಳ: 20000 W/o
ಊಟ ತಿಂಡಿ ಸೌಲಭ್ಯವಿರುತದೆ.
ವಯೋಮಿತಿ 35ರ ಒಳಗಿರಬೇಕು.
ಸಂಪರ್ಕಿಸಬೇಕಾದ ಸಂಖ್ಯೆಗಳು
9880727819
9620667819

ನಗರದ ಅಂಗಡಿಯೊಂದಕ್ಕೆ
ಡ್ರೈವರ್, ಅಡುಗೆ ಕೆಲಸಕ್ಕೆ, ಸ್ಟೋರ್ ಕೀಪರ್, ಡೆಲಿವರಿ ಬಾಯ್, ಕೌಂಟರ್‌ಸೇಲ್, ಪ್ರೊಡಕ್ಷನ್ ಹೆಲ್ಪರ್ ಕೆಲಸಕ್ಕೆ ಹೆಂಗಸರು/ಗಂಡಸರು ಚಾಟ್ಸ್ ಮಾಡಲು ಹೆಲ್ಪರ್ಸ್ ಬೇಕಾಗಿದ್ದಾರೆ.
9606116663/4

REQUIRED
Driver cum delivery boys for distribution store. Only full time job. Salary 14,000rs negotiable based on experience. Location VV MOHALLA, MYSURU
8861088684
7760199462

WANTED
An industry in Metagalli, Mysore, is seeking Technicians with an ITI or Diploma qualification in Electrical or Electronics. Only male candidates aged 18-35 years are eligible to apply.
For details, contact between 10:00 AM and 5:00 PM at
9901178588

COMMERCIAL SPACE FOR RENT
1st Floor 2000 Sqft
@ Vivekananda Circle
9008315592
9902136994

HOUSE FOR SALE
30X40 Opposite Park 40 feet Road Ground Floor & First Floor House for Sale in Hebbal 2nd Stage North Facing 1.5 Cr (Negotiable)
9686779810
9739267577

ಜಮೀನು ಮಾರಾಟಕ್ಕಿದೆ
1 ಎಕರೆ ಭೂಮಿ, ಗಾಳಿಪುರ ಗ್ಯಾಲಾಕ್ಸಿ ಉರ್ದು ಶಾಲೆ, ಸೋಮವಾರಪೇಟೆ ಬೈಪಾಸ್ ರೋಡ್ ಹತ್ತಿರ, ಚಾಮರಾಜನಗರ ಸಂಪರ್ಕಿಸಿ:
9945846938
9448214441

ಬೇಕಾಗಿದ್ದಾರೆ
ಮೈಸೂರಿನ ಗೋಕುಲಂನಲ್ಲಿ ಇರುವ ಶಾಲೆಗೆ ಮೊದಲನೆ ಶಿಫ್ಟ್ ಡ್ಯೂಟಿ ಬೆಳಿಗ್ಗೆ 6 ಗಂಟೆಯಿಂದ ಮಧ್ಯಾಹ್ನ 2 ಗಂಟೆವರೆಗೆ, ಎರಡನೇ ಶಿಫ್ಟ್ ಡ್ಯೂಟಿ ಮಧ್ಯಾಹ್ನ 2 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ, 8 ಗಂಟೆ ಕೆಲಸ ಮಾಡಲು 45 ವರ್ಷ ಒಳಗಿನ ವಿದ್ಯಾವಂತ ಪುರುಷ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವೇತನ ತಿಂಗಳಿಗೆ 14000/– ರೂ. ಸಂಪರ್ಕಿಸಿ
9731259328

ಓಂ ಶ್ರೀ ಮಲೆ ಮಹದೇಶ್ವರ ಚಾರಿಟೆಬಲ್ ಫೌಂಡೇಷನ್ (ರಿ)
ವಯೋವೃದ್ಧರ ಆರೈಕೆ ಕೇಂದ್ರ ಅರವಿಂದನಗರ, ಮೈಸೂರು–23 ಆಶ್ರಮಕ್ಕೆ ಅಡುಗೆ ಕೆಲಸದವರು ಮತ್ತು ಹೋಂ ನರ್ಸಿಂಗ್ ಮಾಡಿರುವ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಕೆಲಸಕ್ಕೆ ಬೇಕಾಗಿರುತ್ತಾರೆ. ಉಚಿತ ಊಟ ಮತ್ತು ವಸತಿ ವ್ಯವಸ್ಥೆ ಇರುತ್ತದೆ. ತಿಂಗಳವೇತನ ನೀಡಲಾಗುತ್ತದೆ.
9964101738
9900849823

ಬೇಕಾಗಿದ್ದಾರೆ
ಕಂಪ್ಯೂಟರ್ ಆಫೀಸ್‌ನಲ್ಲಿ ಸಿಸ್ಟಮ್ ಸರ್ವಿಸ್ ಇಂಜಿನಿಯರ್ ಕೆಲಸಕ್ಕೆ, ಸಿಸ್ಟಮ್ ರಿಪೇರಿ ಗೊತ್ತಿರುವ 25 ವರ್ಷದೊಳಗಿನ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಅನುಭವ ಮತ್ತು ದ್ವಿಚಕ್ರ ವಾಹನ ಹೊಂದಿದವರಿಗೆ ಹೆಚ್ಚಿನ ಆದ್ಯತೆ. ಹೊಸಬರೂ ಟ್ರೈನಿ ಇಂಜಿನೀಯರ್ ಕೆಲಸಕ್ಕೆ ಬೇಕಾಗಿದ್ದಾರೆ.
8073393505

ಬೇಕಾಗಿದ್ದಾರೆ
ಪೆಟ್ರೋಲ್‌ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ
6364748485

WANTED
Teaching staff for reputed institution (Experience Preferred) for all subjects. Transport facilities available. Drop your resume through WhatsApp Contact no
8971577685
9980631121

Immediately Wanted
Truck Drivers for Container Vehicles for Mysore Local and Nanjangud, PF and ESI facility available
Please contact:
9341623350

ಬೇಕಾಗಿದ್ದಾರೆ
ಡ್ರೈವರ್–21000
ಡೆಲಿವರಿ ಬಾಯ್–15000
ಮತ್ತು ಪಾರ್ಟ್ ಟೈಂ ಲೋಡರ್ಸ್–10000
9481337909

ಮನೆ ಮಾರಾಟಕ್ಕಿದೆ
ಸಾತಗಳ್ಳಿ 'ಬಿ' ಝೋನ್
30x40 ಒಟ್ಟು 15 ಚದರ

ನಿವೇಶನ ಮಾರಾಟಕ್ಕಿದೆ
ಡೆಲ್ಲಿ ಪಬ್ಲಿಕ್ ಸ್ಕೂಲ್ ಹತ್ತಿರ
30x40 ಪೂರ್ವ ದಿಕ್ಕು
9535830530

Govt Job ಇರುವ ಮಕ್ಕಳಿಲ್ಲದಂತಹ ವಿಚ್ಛೇದಿತೆಗೆ 2ನೇ ಸಂಬಂಧಕ್ಕೆ ವರಬೇಕಾಗಿದ್ದಾರೆ
Beautiful Hindu 43/5.5/B.Sc
Govt Health Dept. officer
Salary 85000/- ಇರುವಂತಹ ವಿಚ್ಛೇದಿತೆಗೆ ವಿಧುರ/ವಿಚ್ಛೇದಿತ/ನೌಕರಸ್ಥ / ವ್ಯಾಪಾರಸ್ಥ/ ವಿದ್ಯಾವಂತ ವರ ಬೇಕಾಗಿದ್ದಾರೆ. ಯಾವುದೇ ಜಾತಿಯ ಅಭ್ಯಂತರವಿಲ್ಲ ಮಕ್ಕಳಿದ್ದರೂ ಪರವಾಗಿಲ್ಲ
ಮೈಸೂರು: 9742458242

ಸೈಟುಗಳು ಮಾರಾಟಕ್ಕಿವೆ
30x40, 30x50
ಶ್ರೀರಾಂಪುರ ರಿಂಗ್ ರೋಡ್ ಶ್ರೀನಗರ ಹಿಂಭಾಗ ಮೈಸೂರು
9945321020

SITE FOR SALE
30x40 South East Corner
40x40 South East Corner
40x60 North West Corner
50x80 East Face Site
MUDA Approved Layout
Next to SAHA MEADOWS
9538583377

ಬೇಕಾಗಿದ್ದಾರೆ
ಮೈಸೂರಿನಲ್ಲಿರುವ ಹೆಸರಾಂತ ಬಜಾಜ್‌ನ ದ್ವಿಚಕ್ರ ವಾಹನದ ಶೋರೂಂಗೆ ಕೂಡಲೇ ಬೇಕಾಗಿದ್ದಾರೆ.
* Marketing sales Executive.
ನಿಮ್ಮ ಅರ್ಜಿಗಳನ್ನು ಶೀಘ್ರವೇ ಕಳಿಸಿ. ಮೇಲ್ ಐಡಿ:– starmysoreresume@gmail.com ಕರೆ ಮಾಡಿ
9743647484

ಶಾಲಾ ಕಾಲೇಜು ಆಡಳಿತ ವರ್ಗಕ್ಕೆ
ನಮ್ಮಲ್ಲಿ ಎಲ್ಲಾ ತರಹ ಯುನಿಫಾರಂಗಳು ಹೋಲ್‌ಸೇಲ್ ಬೆಲೆಯಲ್ಲಿ ಉತ್ತಮ ಬಟ್ಟೆಗಳು ರೆಡಿಮಾಡಿ ಕೊಡುತ್ತೇವೆ
ಭಾವಸಾರ್ ಶ್ರೀ ಗಣೇಶ್ ಟೆಕ್ಸ್‌ಟೈಲ್
9591327746

ಜಮೀನು ಮಾರಾಟಕ್ಕಿದೆ
ಹೆಚ್.ಡಿ.ಕೋಟೆ ತಾಲ್ಲೂಕು, ಅಂತರಸಂತೆ ಹೋಬಳಿ ನೂರಲಕುಪ್ಪೆ ಗ್ರಾಮದಲ್ಲಿ 2 ಎಕರೆ ಜಮೀನು ಮಾರಾಟಕ್ಕಿದೆ.
8694912228
7892584503

ಮನೆ ಬಾಡಿಗೆಗೆ ಇದೆ
1st Floor
2BHK (30x25)
ಜೆ ಪಿ.ನಗರ 'A' Block
7353339585
7019724903

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಅಡಕನಹಳ್ಳಿಹುಂಡಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಗಾರ್ಡುಗಳು ಬೇಕಾಗಿದ್ದಾರೆ
ವಿದ್ಯಾರ್ಹತೆ : SSLC & ಮೇಲ್ಪಟ್ಟು
ಸಂಬಳ: 28000 W/o (12 hours)
ಗಾರ್ಡು: 27000 W/o (12 hours)
ಸಂಪರ್ಕಿಸಬೇಕಾದ ಸಂಖ್ಯೆಗಳು
9620667819
9620777819

ಶುಂಠಿ ಕೃಷೀಕರೆ
ಉತ್ತಮ ದರ್ಜೆಯ ಬೇವಿನ ಹಿಂಡಿ ಹಾಗೂ ಬೇವಿನ ಹುಡಿ ನಿಮ್ಮ ಸಮಕ್ಷಮ ಮಾಡಿಕೊಡಲಾಗುತ್ತದೆ.
ಶ್ರೀ ಕಾಮಾಕ್ಷಿ ಬಯೋ ನೀಮ್
#203 ಬನ್ನಿಮಂಟಪ ಬಡಾವಣೆ, ಮೈಸೂರು–570015
8088887802

ಮೈಸೂರು ಮಿತ್ರ – ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ
ಗುರುವಾರ
ಶನಿವಾರ
ಪ್ರತಿ ಜಾಹೀರಾತಿಗೆ
ರೂ. 630 ಮಾತ್ರ

ಕೋಟೆ ಪುರಸಭೆಯಲ್ಲಿ 'ಉಳಿತಾಯ'

ಹೆಚ್.ಡಿ.ಕೋಟೆ, 26– ಪಟ್ಟಣದ ಪುರಸಭಾ ಕಚೇರಿಯಲ್ಲಿ ಬುಧವಾರ ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಮಧುಕುಮಾರ್ ಅವರು 2025–26ನೇ ಸಾಲಿನ 65.24 ಲಕ್ಷ ಉಳಿತಾಯ ಬಜೆಟ್ ಮಂಡಿಸಿದರು.



ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ಮಧುಕುಮಾರ್ ಉಳಿತಾಯ ಬಜೆಟ್ ಮಂಡಿಸಿದರು.

ಪಟ್ಟಣದ ಪುರಸಭಾ ಕಚೇರಿಯ ದಿ.ಚಿಕ್ಕಮಾದು ಸಭಾಂಗಣದಲ್ಲಿ ಪುರಸಭಾಧ್ಯಕ್ಷೆ ಶಿವಮ್ಮ ಅವರ ಅಧ್ಯಕ್ಷತೆಯಲ್ಲಿ ನಡೆದ ಬಜೆಟ್ ಮಂಡನೆ ಸಭೆಯಲ್ಲಿ ಮಾತನಾಡಿದ ಅವರು ಪ್ರಸಕ್ತ ಸಾಲಿನಲ್ಲಿ ಆಸ್ತಿ ತೆರಿಗೆಯಿಂದ 1.95 ಕೋಟಿ, ನೀರಿನ ತೆರಿಗೆಯಿಂದ 45 ಲಕ್ಷ, ಮಳಿಗೆಗಳ ಬಾಡಿಗೆಯಿಂದ 8 ಲಕ್ಷ ಉದ್ದಿಮೆ ಪರವಾನಗಿಯಿಂದ 12 ಲಕ್ಷ ನೆಲ ಬಾಡಿಗೆ 23.55 ಲಕ್ಷ, ಇತರೆ ಮೂಲಗಳಿಂದ 23.05 ಲಕ್ಷಗಳು ಆದಾಯ ಬರಲಿದೆ ಎಂದರು.

ಸರ್ಕಾರದಿಂದ 15ನೇ ಹಣಕಾಸು ಅನುದಾನ 98 ಲಕ್ಷ ಎಸ್‌ಎಫ್‌ಸಿ ಅನುದಾನ 15 ಲಕ್ಷ ವಿದ್ಯುತ್ ಶಕ್ತಿ ಅನುದಾನ 2 ಕೋಟಿ 2 ಲಕ್ಷ, ವೇತನ ಅನುದಾನ 2 ಕೋಟಿ 6 ಲಕ್ಷ, ಕುಡಿಯುವ ನೀರಿನ ಅನುದಾನ 8 ಲಕ್ಷ ಬರುವ ನಿರೀಕ್ಷೆ ಇದೆ ಎಂದರು.

ಬೀದಿ ದೀಪ ನಿರ್ವಹಣೆಗೆ 22 ಲಕ್ಷ, ವಾಹನಗಳ ಇಂಧನ ಹಾಗೂ ದುರಸ್ತಿ ಮತ್ತು ನಿರ್ವಹಣೆಗೆ 35.70 ಲಕ್ಷ, ಹೊರಗುತ್ತಿಗೆ ನೌಕರರ ವೇತನ 60 ಲಕ್ಷ, ಪೌರಕಾರ್ಮಿಕರ ಬೆಳಗ್ಗಿನ ಉಪಹಾರಕ್ಕೆ 7 ಲಕ್ಷ ವೆಚ್ಚವಾಗಲಿದೆ. ಅಲ್ಲದೆ ನೀರು ಸರಬರಾಜು ವಿಭಾಗದ ದುರಸ್ತಿ ಮತ್ತು ನಿರ್ವಹಣೆಗೆ 30 ಲಕ್ಷ, ಬ್ಲಿಚಿಂಗ್ ಪೌಡರ್ ಹಾಗೂ ಆಲಂ ಸರಬರಾಜಿಗೆ 4 ಲಕ್ಷ, ಕಚೇರಿ ಯಂತ್ರೋಪಕರಣ ಹಾಗೂ ಕಂಪ್ಯೂಟರ್‌ಗಳಿಗೆ 5 ಲಕ್ಷ, ರಸ್ತೆ ನಿರ್ಮಾಣಕ್ಕೆ 1 ಕೋಟಿ 50 ಲಕ್ಷ, ಚರಂಡಿ ನಿರ್ಮಾಣಕ್ಕೆ 1 ಕೋಟಿ, ಮಳೆ ನೀರು, ಚರಂಡಿ ನಿರ್ಮಾಣಕ್ಕೆ 10 ಲಕ್ಷ, ನಾಗರಿಕ ವಿನ್ಯಾಸಗಳಿಗೆ 15 ಲಕ್ಷ, ಘನ ತ್ಯಾಜ್ಯ ವಸ್ತು ವಿಲೇವಾರಿ ಘಟಕದ ಅಭಿವೃದ್ಧಿಗೆ 38 ಲಕ್ಷ, ನೀರು ಸರಬರಾಜು ವಿಭಾಗಕ್ಕೆ 45 ಲಕ್ಷ ವ್ಯಯವಾಗಲಿದೆ ಎಂದರು.

> ಈ ಬಾರಿ ಬಜೆಟ್‌ನಲ್ಲಿ ಪಟ್ಟಣದಲ್ಲಿ ಪ್ರಕೃತಿ ವಿಕೋಪದಡಿ ಮನೆ ಹಾನಿಗೊಳಗಾದಲ್ಲಿ ಪುರಸಭೆಯಿಂದ ಸಹಾಯಧನದ ರೂಪದಲ್ಲಿ 20 ಸಾವಿರ ರೂ., ಹುಣಸೂರು–ಬೇಗೂರು ಮುಖ್ಯ ರಸ್ತೆಯ ಚಿತ್ತಧಾಮದ ಬಳಿ ಸ್ವಾಗತ ಕಮಾನು ನಿರ್ಮಾಣಕ್ಕೆ 8 ಲಕ್ಷ, ಪುರಸಭೆ ವ್ಯಾಪ್ತಿಯ ಮುಖ್ಯರಸ್ತೆ ಇಕ್ಕೆಲಗಳಲ್ಲಿ ಅರಣ್ಯೀಕರಣ ಅಭಿವೃದ್ಧಿಪಡಿಸಲು 2 ಲಕ್ಷ ರೂ. ಮೀಸಲಿಡಲಾಗಿದೆ.
> –ಮಧು ಕುಮಾರ್, ಸ್ಥಾಯಿ ಸಮಿತಿ ಅಧ್ಯಕ್ಷ.

ಈ ವೇಳೆ ಪುರಸಭಾ ಮುಖ್ಯಾಧಿಕಾರಿ ಸುರೇಶ್, ಉಪಾಧ್ಯಕ್ಷ ಆಸೀಫ್ ಇಕ್ಬಾಲ್, ಸದಸ್ಯರಾದ ಹೆಚ್.ಸಿ.ನರಸಿಂಹಮೂರ್ತಿ, ಪುಟ್ಟ ಬಸವನಾಯಕ, ಐಡಿಯಾ ವೆಂಕಟೇಶ್, ಮಿಲ್ ನಾಗರಾಜು, ನಂಜಪ್ಪ, ಪ್ರೇಮ್ ಸಾಗರ್, ರಾಜು, ಲೋಕೇಶ್, ದರ್ಶಿನಿ, ಕವಿತಾ, ನಂದಿನಿ, ಸಾಯಿರಾಬಾನು, ಸರೋಜಮ್ಮ ಅನಿತಾ, ಶಾಂತಮ್ಮ, ಸುಹಾಸಿನಿ, ಗೀತಾ, ನಾಮನಿರ್ದೇಶಿತ ಸದಸ್ಯರಾದ ಪ್ರಕಾಶ್, ಸೂರ್ಯ ಕುಮಾರ್, ಅನಿಲ್, ಪಾರ್ಥ ಸಾರಥಿ, ಸೈಯದ್ ಹಬೀಬ್, ಅಧಿಕಾರಿಗಳಾದ ನಳಿನಿ, ಲಕ್ಷ್ಮೀದೇವಿ, ಶುಭಾಷ್, ರಾಣಿ, ರಘು ಪರಮೇಶ್, ವಿನೋದ್, ಕೃತಿಕ್ ಇದ್ದರು.

ಸರಗೂರು ಪಪಂ: 17.69 ಲಕ್ಷ ಉಳಿತಾಯ ಆಯವ್ಯಯ

ಸರಗೂರು, ಮಾ.26– ಸರಗೂರು ಪಟ್ಟಣ ಪಂಚಾಯಿತಿಯ 2025–2026ನೇ ಸಾಲಿಗೆ 17.69 ಲಕ್ಷ ರೂ. ಉಳಿತಾಯ ಆಯವ್ಯಯ ಮಂಡಿಸಲಾಗಿದ್ದು, ಪಟ್ಟಣದ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗಿದೆ.

ಪಪಂ ಆವರಣದಲ್ಲಿ ಬುಧವಾರ ನಡೆದ ಬಜೆಟ್ ಮಂಡನೆಯಲ್ಲಿ 3ನೇ ಬಾರಿಗೆ ಬಜೆಟ್ ಮಂಡಿಸಿದ ಅಧ್ಯಕ್ಷೆ ರಾಧಿಕಾ ಅವರು, ಪ್ರಸಕ್ತ ಸಾಲಿನ ಪ್ರಾರಂಭಿಕ ಶುಲ್ಕ 6.19 ಕೋಟಿ ರೂ., 8.9 ಕೋಟಿ ರೂ. ಜಮಾ ಆಗಲಿದೆ. ಈ ಪೈಕಿ 14.28 ಕೋಟಿ ರೂ. ಜುಮ್ಲಾ ಆಗಲಿದೆ. ಇದರಲ್ಲಿ 14.11 ಕೋಟಿ ರೂ. ಖರ್ಚಾಗಲಿದ್ದು, 17.69 ಲಕ್ಷ ರೂ. ಉಳಿತಾಯವಾಗಲಿದೆ ಎಂದರು.

ಪ್ರಸಕ್ತ ಸಾಲಿನಲ್ಲಿ ಆಸ್ತಿ ತೆರಿಗೆಯಿಂದ 70 ಲಕ್ಷ ರೂ., ನೀರು ತೆರಿಗೆ ಶುಲ್ಕ 21 ಲಕ್ಷ ರೂ., ಮಳಿಗೆಗಳ ಬಾಡಿಗೆ 8.50 ಲಕ್ಷ ರೂ., ಉದ್ದಿಮೆ ಪರವಾನಗಿ 5.50 ಲಕ್ಷ ರೂ., ನೆಲ ಬಾಡಿಗೆಯಿಂದ 5 ಲಕ್ಷ ರೂ., ಸೇರಿದಂತೆ ಇನ್ನಿತರ ಮೂಲಗಳಿಂದ 10.50 ಲಕ್ಷ ರೂ. ಸಂಗ್ರಹದ ಗುರಿ ಹೊಂದಲಾಗಿದೆ.

ಸರ್ಕಾರದಿಂದಲೂ ಅನುದಾನ ಹಂಚಿಕೆಯಾಗಿದ್ದು, ಎಸ್‌ಎಫ್‌ಸಿ ಅನುದಾನ 25 ಲಕ್ಷ ರೂ., 15ನೇ ಹಣಕಾಸು ಯೋಜನೆ ಅನುದಾನ 60 ಲಕ್ಷ ರೂ., ಎಸ್‌ಎಫ್‌ಸಿ ವಿದ್ಯುತ್ ಶಕ್ತಿ ಅನುದಾನ 1.2 ಕೋಟಿ ರೂ., ಎಸ್‌ಎಫ್‌ಸಿ ವೇತನ ಅನುದಾನ 1.6 ಕೋಟಿ ರೂ., ಎಸ್‌ಎಫ್‌ಸಿ ಕುಡಿಯುವ ನೀರಿನ ಅನುದಾನ 8 ಲಕ್ಷ ರೂ. ಹಂಚಿಕೆಯಾಗಿದೆ ಎಂದು ತಿಳಿಸಿದರು.



ಪಪಂ ಅಧ್ಯಕ್ಷೆ ರಾಧಿಕಾ ಶ್ರೀನಾಥ್ ಆಯವ್ಯಯ ಮಂಡಿಸಿದರು.

ಬಜೆಟ್‌ನ ಅನುದಾನವನ್ನು ವಿವಿಧ ಕಾಮಗಾರಿಗಳಿಗೆ ಪಾವತಿಸಲಾಗಿದ್ದು, ಘನ ತ್ಯಾಜ್ಯ ವಸ್ತು ನಿರ್ವಹಣೆಗೆ 20 ಲಕ್ಷ ರೂ., ರಸ್ತೆಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ 1 ಕೋಟಿ ರೂ., ಹೊರಗುತ್ತಿಗೆ ನೌಕರರ ವೇತನಕ್ಕೆ 55 ಲಕ್ಷ ರೂ., ಬೀದಿ ದೀಪ ಪಾವತಿಗೆ 15 ಲಕ್ಷ ರೂ., ಚರಂಡಿ ನಿರ್ಮಾಣಕ್ಕೆ 50 ಲಕ್ಷ ರೂ., ಪಪಂ ಕಚೇರಿ ನಿರ್ವಹಣೆಗೆ 10 ಲಕ್ಷ ರೂ., ಪೌರ ಕಾರ್ಮಿಕರ ಬೆಳಗಿನ ಉಪಾಹಾರಕ್ಕೆ 2.5 ಲಕ್ಷ ರೂ. ಸೇರಿದಂತೆ ಇನ್ನಿತರ ಕಾಮಗಾರಿಗಳಿಗೆ ಅನುದಾನ ಪಾವತಿಸಲಾಗಿದೆ ಎಂದರು.

ಸಭೆಯಲ್ಲಿ ಪಪಂ ವ್ಯಾಪ್ತಿಗೊಳಪಡುವ ಆಸ್ತಿ ತೆರಿಗೆಯನ್ನು ಶೇ.3ರಿಂದ ಶೇ.4ರವರೆಗೆ ಹೆಚ್ಚಿಸಲು ಅಗತ್ಯ ಕ್ರಮ ವಹಿಸಲು ತೀರ್ಮಾನಿಸಲಾಯಿತು.

ಪಪಂ ಉಪಾಧ್ಯಕ್ಷ ಶಿವಕುಮಾರ್, ಸದಸ್ಯರಾದ ಚಲುವಕೃಷ್ಣ, ಸಣ್ಣತಾಯಮ್ಮ, ಚೈತ್ರಾ, ದಿವ್ಯಾ, ಚಂದ್ರಕಲಾ, ವಿನಾಯಕ ಪ್ರಸಾದ್, ನೂರಾಳಸ್ವಾಮಿ, ಉಮಾ, ಮುಖ್ಯಾಧಿಕಾರಿ ಎಸ್.ಕೆ.ಸಂತೋಷ್‌ಕುಮಾರ್, ರಾಮು, ಪಳನಿಸ್ವಾಮಿ, ಶಿವಪ್ರಸಾದ್, ಅರ್ಜುನ್, ಅರುಣ್‌ಆರಾಧ್ಯ, ಅನಿತಾ ಕುಮಾರಿ, ರಂಜಿನಿ, ದೀಲೀಪ್, ದಿನೇಶ್ ಸೇರಿದಂತೆ ಸಿಬ್ಬಂದಿ ಹಾಜರಿದ್ದರು.

ನಿವೇಶನಕ್ಕಾಗಿ ಧರಣಿ: ಎಡಗೈ ಸಮಾಜದ ಸಮಸ್ಯೆ ಬಗೆಹರಿಸದಿದ್ದಲ್ಲಿ

ಸಚಿವ ಡಾ.ಹೆಚ್.ಸಿ.ಮಹದೇವಪ್ಪ ವಿರುದ್ಧ ಕಪ್ಪು ಬಾವುಟ ಪ್ರದರ್ಶನ

ತಿ.ನರಸೀಪುರ, ಮಾ.26– ಪುರಸಭೆ ವ್ಯಾಪ್ತಿಯ ಸರ್ವೆ ನಂ.7ರಲ್ಲಿ ನಿವೇಶನಕ್ಕಾಗಿ ಧರಣಿ ನಡೆಸುತ್ತಿರುವ ಎಡಗೈ ಸಮಾಜದವರ ಸಮಸ್ಯೆ ಬಗೆಹರಿಸದಿದ್ದಲ್ಲಿ ಸಚಿವ ಡಾ.ಹೆಚ್.ಸಿಮಹದೇವಪ್ಪ ಅವರು ಪಟ್ಟಣದಲ್ಲಿ ಭಾಗವಹಿಸುವ ಕಾರ್ಯಕ್ರಮಗಳಲ್ಲಿ ಕಪ್ಪು ಬಾವುಟ ಪ್ರದರ್ಶನ ಮಾಡಿ ಪ್ರತಿಭಟನೆ ನಡೆಸಲಾಗುವುದು ಎಂದು ಪುರಸಭೆ ಸದಸ್ಯ, ನಟ ಅರ್ಜುನ್ ರಮೇಶ್ ಎಚ್ಚರಿಕೆ ನೀಡಿದರು.

ಪಟ್ಟಣದ ಪಿಡಬ್ಲ್ಯೂಡಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ಷೇತ್ರದ ಶಾಸಕರಾಗಿರುವ ನೀವು ಸಮೀಪದ ತಿರುಮಕೂಡಲು ಗ್ರಾಮಕ್ಕೆ ಭೇಟಿ ನೀಡುತ್ತೀರಾ. ಆದರೆ ಪಕ್ಕದಲ್ಲಿರುವ ಗೋಪಾಲಪುರ ಗ್ರಾಮದವರು ಕಳೆದ ಒಂದು ತಿಂಗಳಿಂದ ನಿವೇಶನಕ್ಕಾಗಿ ಬೀದಿಯಲ್ಲಿ ಟೆಂಟ್ ಹಾಕಿ ಪ್ರತಿಭಟಿಸುತ್ತಿರುವುದು ನಿಮಗೆ ಕಾಣಲಿಲ್ಲವೇ, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಎಡಗೈ ಜನಾಂಗದವರು ಶೇ. 80 ಭಾಗ ನಿಮಗೆ ಓಟ್ ಮಾಡಿದ್ದಾರೆ. ಅದು ನಿಮಗೂ ಗೊತ್ತಿದೆ.



ಅರ್ಜುನ್ ರಮೇಶ್

ಹೀಗಿರುವಾಗ ಧರಣಿ ಜಾಗಕ್ಕೆ ಭೇಟಿ ನೀಡಿ ನೀವು ಸೌಜನ್ಯಕ್ಕಾದರೂ ಅವರ ಕಷ್ಟ ವಿಚಾರಿಸಿ ಧೈರ್ಯ ತುಂಬುವ ಕೆಲಸಕ್ಕೆ ಮುಂದಾಗಲಿಲ್ಲ. ಇದನ್ನೆಲ್ಲಾ ನೋಡುತ್ತಿದ್ದರೆ ನಿಮಗೆ ಎಡಗೈ ಜನಾಂಗದ ಮೇಲೆ ಇರುವ ಅಸಡ್ಡೆ ಮನೋಭಾವ ಅರ್ಥವಾಗುತ್ತದೆ ಎಂದು ಸಚಿವರ ನಡೆಗೆ ಆಕ್ರೋಶ ವ್ಯಕ್ತಪಡಿಸಿದರು.

ನಮಗೂ ಕಾಲ ಬರುತ್ತೆ, ಜನ ನಮ್ಮ ಕೈ ಹಿಡಿತಾರೆ: ಬನ್ನೂರು–ತಿ.ನರಸೀಪುರ ಸೇರಿ ವಿಧಾನಸಭಾ ಕ್ಷೇತ್ರವಾಗಿದ್ದಾಗ ಒಮ್ಮೆ ಮಾತ್ರ ಬಿಜೆಪಿ ಇಲ್ಲಿ ಗೆದ್ದಿದೆ. ಡೀಲಿಮಿಟೇಷನ್ ಆದ ನಂತರ ಬಿಜೆಪಿಗೆ ಇಲ್ಲಿ ಗೆಲುವಾಗಿಲ್ಲ. ನಮಗೂ ಸಮಯ ಬರುತ್ತೆ, ಬಿಜೆಪಿ ಪಕ್ಷದಿಂದ ಸೂಕ್ತವಾದ ಅಭ್ಯರ್ಥಿ ಹಾಕುತ್ತೇವೆ. ನಮ್ಮನ್ನು ಜನ ಕೈ ಹಿಡಿತಾರೇ. ಜನ ನಿಮ್ಮ ಅಧಿಕಾರ ನೋಡಿದ್ದಾಗಿದೆ.

ಮುಂದಿನ ಚುನಾವಣೆ ಯಲ್ಲಿ ನಮ್ಮ ಅಭ್ಯರ್ಥಿಗೆ ಅವಕಾಶವಿದ್ದು ಆಗ ತಿ.ನರಸೀಪುರ ಕ್ಷೇತ್ರದ ಕೊಳಕನ್ನು ಸಂಪೂರ್ಣವಾಗಿ ನಿರ್ನಾಮ ಮಾಡುತ್ತೇವೆ. ನಮ್ಮ ಕಾರ್ಯಕರ್ತರಿಗೂ ಶಕ್ತಿ ಇದೆ ಎಂಬುದನ್ನು ತೋರಿಸುತ್ತೇವೆ. ಸಚಿವ ಮಹದೇವಪ್ಪ ಶೀಘ್ರ ಗೋಪಾಲಪುರ ನಿವಾಸಿಗಳ ಸಮಸ್ಯೆಗೆ ಸ್ಪಂದಿಸಿ ಪರಿಹಾರ ದೊರಕಿಸಿಕೊಡುವ ಕೆಲಸ ಮಾಡದಿದ್ದರೆ, ನೀವು ಪಟ್ಟಣದಲ್ಲಿ ಭಾಗವಹಿಸುವ ಯಾವುದೇ ಕಾರ್ಯಕ್ರಮದಲ್ಲಿ ಕಪ್ಪು ಬಾವುಟ ಪ್ರದರ್ಶನ ಮಾಡಿ ಪ್ರತಿಭಟನೆ ನಡೆಸುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಪುರಸಭೆ ಬಜೆಟ್ ಮಂಡನೆ ಸಭೆಗೆ ವಿರೋಧ

ಪುರಸಭೆ ಬಜೆಟ್ ಪೂರ್ವಭಾವಿ ಸಭೆ ಅವ್ಯವಸ್ಥೆಯಿಂದ ನಡೆದಿದೆ. ತರಾತುರಿಯಲ್ಲಿ ಬಜೆಟ್ ಮಾಡಿ ಮುಗಿಸಬೇಕು ಎಂಬ ಧಾವಂತ ಅಧಿಕಾರಿಗಳದ್ದಾಗಿದೆ. ಸದಸ್ಯರಲ್ಲರಿಗೆ ಮಾಹಿತಿ ಇದೆಯೋ ಇಲ್ಲವೋ ಗೊತ್ತಿಲ್ಲ. ನನಗೂ ಆಹ್ವಾನ ನೀಡಿಲ್ಲ. ಮೀಟಿಂಗ್ ನೋಟಿಸ್ ತಲುಪದ ಬಗ್ಗೆ ಮಾಹಿತಿ ಪಡೆದು ಕನಿಷ್ಠ ದೂರವಾಣಿ ಮೂಲಕವಾದರೂ ಆಹ್ವಾನ ನೀಡಬ ಹುದಿತ್ತು. ಅದನ್ನೂ ನೀಡಲ್ಲ. ಇದು ನಮ್ಮ ಅಧಿಕಾರ ವಧಿಯ ಕೊನೆ ಬಜೆಟ್. ಇಷ್ಟು ತರಾತುರಿಯಲ್ಲಿ ಬಜೆಟ್ ಮಾಡು ತ್ತಿರುವುದನ್ನು ನೋಡಿದರೆ ಪುರಸಭೆ ಯಾವುದೋ ಒಂದು ಪಕ್ಷದ ಸಂಸ್ಥೆಯಂತೆ ಕೆಲಸ ಮಾಡುತ್ತಿದೆ ಎಂಬುದರಲ್ಲಿ ಅನುಮಾನವಿಲ್ಲ. ಹಾಗಾಗಿ ಈ ಬಜೆಟ್ ಮೀಟಿಂಗ್‌ಗೆ ನನ್ನ ಸಂಪೂರ್ಣ ವಿರೋಧ ಇದೆ ಎಂದರು.

ಯಾವುದೇ ಅಭಿವೃದ್ಧಿ ಆಗಿಲ್ಲ: ಪ್ರತಿ ಬಾರಿ ಮೀಟಿಂಗ್ ಆದಾಗಲೂ ಸ್ವಾಗತ ಕಮಾನು ಬೇಕೆಂದು ಒತ್ತಾಯಿಸುತ್ತಲೇ ಬಂದಿದ್ದೇನೆ. ಹೇಳಿ ಕೇಳಿ ಇದು ಸಿಎಂ, ಸಚಿವ ಹಾಗೂ ಸಂಸದರನ್ನೊಳಗೊಂಡ ಕ್ಷೇತ್ರ ಕನಿಷ್ಠ ಒಂದು ವೆಲ್‌ಕಮ್ ಬೋರ್ಡ್ ಇಲ್ಲ ಎಂದರೆ ಏನರ್ಥ. ಫುಟ್‌ಪಾತ್‌ನಲ್ಲಿ ರೇಲಿಂಗ್ಸ್ ಹಾಕಿಸಿಲ್ಲ. ಪಾರ್ಕಿಂಗ್ ವ್ಯವಸ್ಥೆ ಇಲ್ಲ. ಅಕ್ರಮವಾಗಿ ಸರ್ಕಾರಿ ಕಟ್ಟಡಗಳಲ್ಲಿ ನಡೆಯುತ್ತಿರುವ ಬಾರ್ ತೆರವುಗೊಳಿಸುವ ಕಾರ್ಯ ಆಗಲೇ ಇಲ್ಲ. ಪುರಸಭೆ ಮಳಿಗೆಯಿಂದ ಬರುತ್ತಿರುವ ಬಾಡಿಗೆ ಬಗ್ಗೆ ಸರಿಯಾದ ಮಾಹಿತಿ ಇಲ್ಲ. ಅರ್ಹತೆ ಆಧಾರದ ಮೇಲೆ ಮಳಿಗೆ ಹಂಚಿಕೆ ಮಾಡುವಂತೆ ಕೇಳಿದ್ದ ಮನವಿಗೆ ಸ್ಪಂದನೆ ದೊರ ಕಿಲ್ಲ ಎಂದು ಪುರಸಭೆ ಅಧಿಕಾರಿಗಳ ಬೇಜವಾಬ್ದಾರಿ ಬಗ್ಗೆ ಕಿಡಿಕಾರಿದರು.

ಮೂಡಲಕೊಪ್ಪಲು ಗ್ರಾಮದಲ್ಲಿ ವಿಶ್ವ ಜಲದಿನ

ಹುಣಸೂರು, ಮಾ.26– ನಮ್ಮೆಲ್ಲರ ಜೀವನಾಡಿ ಭೂಮಿ, ಗಾಳಿ, ಬೆಳಕು, ನೀರು. ನಮ್ಮ ಸುತ್ತಮುತ್ತಲ ಪರಿಸರ ಕಾಪಾಡಿಕೊಳ್ಳದಿದ್ದರೇ ಮಾನವ, ಪ್ರಾಣಿ ಸಂಕುಲ ನಾಶವಾಗುತ್ತದೆ ಎಂದು ಕೃಷಿಕ ಚಲುವರಾಜ್ ತಿಳಿಸಿದರು.



ತಾಲೂಕಿನ ಮೂಡಲಕೊಪ್ಪಲು ಗ್ರಾಮದ ಮಾರಿಗುಡಿ ಆವರಣದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ ಏರ್ಪಡಿಸಿದ್ದ ವಿಶ್ವ ಜಲ ದಿನದ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ನೀರಿನ ಮಹತ್ವದ ಬಗ್ಗೆ ಮಾತನಾಡಿದ ಅವರು, ನಮ್ಮ ಹಿರಿಯರು ಕೆರೆಕಟ್ಟೆ, ಬಾವಿಗಳ ನೀರನ್ನು ಕುಡಿದು ಆರೋಗ್ಯಕರವಾಗಿ ನೂರಾರು ವರ್ಷ ಜೀವಿಸಿದ್ದರು. ನಾವು ಬೋರ್‌ವೆಲ್ ನೀರು ಕುಡಿದು 50 ರಿಂದ 60 ವರ್ಷ ಬದುಕುವುದು ಕಷ್ಟಕರವಾಗಿದೆ. ಮುಂದಿನ ದಿನಗಳಲ್ಲಿ ನಮ್ಮ ಮಕ್ಕಳು, ಮೊಮ್ಮಕ್ಕಳು ಬಾಟಲ್ ನೀರನ್ನು ಕುಡಿದು ಮುಂದೆ ನೀರಿನ ರೂಪದಲ್ಲಿ ಮಾತ್ರೆಗಳನ್ನು ಸೇವಿಸಬಹುದಾದ ಪರಿಸ್ಥಿತಿ ಬರಲಿದೆ ಎಂದರು.

ಪ್ರಸ್ತುತ ತಾಪಮಾನ ಹೆಚ್ಚಾಗುತ್ತಿದ್ದು, ಭೂಮಿ ಮೇಲೆ ಉಷ್ಣಾಂಶ ಅತಿರೇಕಕ್ಕೇರಿದೆ. ಮಾನವ ತನ್ನ ದುರಾಸೆಗೆ ವರ್ಷಕ್ಕೆ ಕೋಟ್ಯಾಂತರ ಮರಗಳನ್ನು ಕಡಿದು ಸುಡುತ್ತಿದ್ದಾನೆ. ಅರಣ್ಯದಲ್ಲಿರುವ ಕಾಡುಪ್ರಾಣಿಗಳು ನಾಡನ್ನು ಪ್ರವೇಶಿಸುತ್ತಿದ್ದು, ಮಾನವ ವನ್ಯಜೀವಿಗಳ ಸಂಘರ್ಷ ಹೆಚ್ಚಾಗಿ ಪ್ರಾಣ ಹಾನಿಯಾಗುತ್ತಿದೆ. ಹೀಗಾಗಿ ಕಾಡು ಇದ್ದರೆ ನಾಡು. ಪ್ರತಿಯೊಬ್ಬರೂ ಒಂದೊಂದು ಗಿಡ ನೆಟ್ಟು ಪೋಷಸಬೇಕು ಎಂದರು. ಕಾರ್ಯಕ್ರಮದಲ್ಲಿ ಕೃಷಿ ಮೇಲ್ವಿಚಾರಕ ಶಿವಶಂಕರ್, ಸೇವಾ ಪ್ರತಿನಿಧಿಗಳು, ಸಂಘದ ಪದಾಧಿಕಾರಿಗಳು ಭಾಗವಹಿಸಿದ್ದರು.

ಅಪ್ರಾಪ್ತೆ ಮೇಲೆ ಲೈಂಗಿಕ ದೌರ್ಜನ್ಯ

ಚಿಕ್ಕಪ್ಪನ ಮೇಲೆ ಪೋಕ್ಸೋ ಪ್ರಕರಣ

ನಂಜನಗೂಡು, ಮಾ.26– ಅಪ್ರಾಪ್ತ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಚಿಕ್ಕಪ್ಪನ ಮೇಲೆ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ನಂಜುಂಡಸ್ವಾಮಿ ಅತ್ಯಾಚಾರವೆಸಗಿದ ಆರೋಪಿ. ತಾಲೂಕಿನ ಗ್ರಾಮೀಣ ಪ್ರದೇಶದ ಮಹಿಳೆ ಮಗಳನ್ನು ಓದಿಸುವ ಸಲುವಾಗಿ ನಗರದಲ್ಲಿ ವಾಸವಿದ್ದು, ಬಾಲಕಿ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾಳೆ. ಈಕೆಯ ಚಿಕ್ಕಪ್ಪ ನಂಜುಂಡಸ್ವಾಮಿ ಕಳೆದ ಜ.15ರಂದು ಬಾಲಕಿ ಮೇಲೆ ಅತ್ಯಾಚಾರವೆಸಗಿದ್ದು, ಈ ವಿಷಯ ಯಾರಿಗೂ ಹೇಳದಂತೆ ಬೆದರಿಕೆ ಹಾಕಿದ್ದಾನೆ ಎನ್ನಲಾಗಿದೆ. ಈ ವೇಳೆ ಬಾಲಕಿ ಕಳೆದ 2 ತಿಂಗಳಿಂದ ಋತುಚಕ್ರವಾಗದ ಬಗ್ಗೆ ತಾಯಿಗೆ ತಿಳಿದು ಅಪ್ರಾಪ್ತ ಬಾಲಕಿಯನ್ನು ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಕರೆದೊಯ್ದು ತಪಾಸಣೆಗೊಳಪಡಿಸಿದಾಗ ಗರ್ಭಿಣಿಯಾಗಿರುವುದು ಬೆಳಕಿಗೆ ಬಂದಿದೆ. ಈ ಬಗ್ಗೆ ಮಾಹಿತಿ ಪಡೆದ ಶಿಶು ಅಭಿವೃದ್ಧಿ ಇಲಾಖೆ ಅಧಿಕಾರಿಗಳು ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯಲ್ಲಿ ನಂಜುಂಡಸ್ವಾಮಿ ವಿರುದ್ಧ ಪೋಕ್ಸೋ ಕಾಯ್ದೆಯನ್ವಯ ದೂರು ದಾಖಲಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡ ಪೊಲೀಸರು ಆರೋಪಿವಶಕ್ಕೆ ಪಡೆದು ವಿಚಾರಣೆಗೊಳಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ, ಸಂತ್ರಸ್ತ ಬಾಲಕಿಯನ್ನು ಮೈಸೂರಿನ ಬಾಲಮಂದಿರಕ್ಕೆ ಕಳುಹಿಸಿದ್ದಾರೆ.

ಸಂಭ್ರಮದ ಶ್ರೀಮೂಗು ಮಾರಮ್ಮ ಹಬ್ಬ

ಹೆಚ್.ಡಿ.ಕೋಟೆ, ಮಾ.26– ತಾಲೂಕಿನ ಕ್ಯಾತನ ಹಳ್ಳಿಯಲ್ಲಿ ಗ್ರಾಮದೇವತೆ ಶ್ರೀಮೂಗು ಮಾರಮ್ಮ ಹಬ್ಬ ಸಂಭ್ರಮದಿಂದ ನಡೆಯಿತು.



ಹಬ್ಬದ ಅಂಗವಾಗಿ ಶ್ರೀ ಮೂಗು ಮಾರಮ್ಮ ದೇವಾಲಯವನ್ನು ಬಗೆ ಬಗೆಯ ಹೂಗಳಿಂದ ಅಲಂಕರಿಸಲಾಗಿತ್ತು. ಮಂಗಳವಾರ ರಾತ್ರಿ 8.30ಕ್ಕೆ ಮಾರಮ್ಮ ತಾಯಿಗೆ ವಿಶೇಷ ಪೂಜೆ ಸಲ್ಲಿಸಿದ ಭಕ್ತರು ಬಾಯಿ ಬೀಗ ಹಾಕಿಸಿಕೊಂಡು ಸತ್ತಿಗೆ, ಮಂಗಳ ವಾದ್ಯ, ತಮಟೆ ಸದ್ದಿನೊಂದಿಗೆ ದೇವಿ ಮೂರ್ತಿಯನ್ನು ಮೆರವಣಿಗೆ ಮಾಡಲಾಯಿತು. ನಂತರ ರಾತ್ರಿ 11.30ಕ್ಕೆ ಹೋಮ ಹವನ ನೆರವೇರಿಸಲಾಯಿತು. ರಾತ್ರಿ 1.30ಕ್ಕೆ ತಾಯಿಗೆ ಮಡೆ ಪೂಜೆ ನೆರವೇರಿಸಲಾಯಿತು. ಬುಧವಾರ ಮುಂಜಾನೆ 5ಕ್ಕೆ ತಂಪಿನ ಪೂಜೆ ಪ್ರಾರಂಭಗೊಂಡು 11.45ಕ್ಕೆ ಮುಗಿಯಿತು. ಗುಡ್ಡಪ್ಪ ಚಿಕ್ಕನಾಯಕ ಅವರ ಪುತ್ರ, ಮೈಸೂರು ಮುಕ್ತ ವಿವಿ ಸಹಾಯಕ ಪ್ರಾಧ್ಯಾಪಕ ಡಾ.ಕೆ.ಸಿ.ರಾಜು ಅವರು ಸಂಪ್ರದಾಯದಂತೆ ಗ್ರಾಮದ ಸುತ್ತಲೂ ರಕ್ತದ ಓಕುಳಿ ನೆರವೇರಿಸಿದರು. ಈ ವೇಳೆ ಸಾವಿರಾರು ಭಕ್ತರು ದೇವಿ ದರ್ಶನ ಪಡೆದು ಹರಕೆ ತೀರಿಸಿದರು.

ಈ ವೇಳೆ ಸಿಂಡಿಕೇಟ್ ಸದಸ್ಯ ಕ್ಯಾತನಹಳ್ಳಿ ನಾಗರಾಜು, ಡೈರಿ ಅಧ್ಯಕ್ಷ ಕೆ.ಪಿ. ಚಲುವರಾಜು, ಟ್ರಸ್ಟ್ ಅಧ್ಯಕ್ಷ ಎಸ್. ಬೀರೇಗೌಡ, ಉಪಾಧ್ಯಕ್ಷ ಜೆ.ಜಗನ್ನಾಥ್, ಕಾರ್ಯದರ್ಶಿ ಸಣ್ಣಸ್ವಾಮಿಚಾರ್, ವೆಂಕಟರಾಜು, ಕೆ.ಕಾಳಸ್ವಾಮಪ್ಪ, ಚಿಕ್ಕಮಾಲೇಗೌಡ, ಮಹದೇವಪ್ಪ, ಎಸ್.ಶಿವರಾಜು, ವಕೀಲ ಶಿವರಾಜು, ನರ್ಸರಿ ಚೆಲುವರಾಜು, ಕೆ.ಸಿ.ಪುಟ್ಟೇಗೌಡ, ಕೃಷ್ಣೇಗೌಡ, ರಾಮಚಂದ್ರ, ಕೆ.ಆರ್.ರವಿಕುಮಾರ್, ಬೀರೇಶ್, ಅಪ್ಪಾಜಿಗೌಡ, ಮಂಜು, ಮಹದೇವಣ್ಣ, ಜವರಶೆಟ್ಟಿ, ಮಹದೇವಶೆಟ್ಟಿ, ಶಿವಶಂಕರೇಗೌಡ, ಪ್ರಸನ್ನಕುಮಾರ್, ನಂಜಪ್ಪ ರವಿ, ಕುಮಾರ್, ಕೆ.ಟಿ. ಬಸಪ್ಪ, ಕಮಲಾಕ್ಷ, ಪಟೇಲರ ಗಿರಿ, ಎಚ್.ನಾಗರಾಜ್, ಯೋಗಿ ಎಲೆಕ್ಟ್ರಿಕ್, ರಮೇಶ, ಮಂಜು, ಶಿವಣ್ಣ, ಶ್ರೀನಿವಾಸ್, ಸೋಮಣ್ಣ, ಜವರಶೆಟ್ಟಿ ಕೆ.ಸಿ.ಬಸವರಾಜು, ರೇವಣ್ಣ, ರಾಚಪ್ಪ, ಗಿರಿ, ಮಹದೇವ, ಮಹದೇವನಾಯಕ, ಶಿವಲಿಂಗನಾಯಕ, ರಂಗ, ಸಿದ್ದರಾಜು ಹಾಜರಿದ್ದರು. ಕೋಟೆ ಪೊಲೀಸ್ ಠಾಣೆ ಎಸ್‌ಐ ಚಿಕ್ಕನಾಯಕ ಬಂದೋಬಸ್ತ್ ಕೈಗೊಂಡಿದ್ದರು.

ಪಿಎಲ್‌ಡಿ ಬ್ಯಾಂಕ್ ಕಟ್ಟಡ ನವೀಕರಣಕ್ಕೆ 50 ಲಕ್ಷ ಅನುದಾನ

ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಭರವಸೆ

ತಿ.ನರಸೀಪುರ, ಮಾ.26– ಪಿಎಲ್‌ಡಿ ಬ್ಯಾಂಕ್ ಕಟ್ಟಡ ನವೀಕರಣಕ್ಕೆ ಸಹಕಾರ ಇಲಾಖೆಯಿಂದ 50 ಲಕ್ಷ ರೂ. ಅನುದಾನ ಕೊಡಿಸುವುದಾಗಿ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಭರವಸೆ ನೀಡಿದರು.

ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಕೆಂಪಯ್ಯನಹುಂಡಿ ಮಹದೇವಣ್ಣ ಹಾಗೂ ಉಪಾಧ್ಯಕ್ಷ ನೆರಗ್ಯಾತನಹಳ್ಳಿ ಎನ್.ಎನ್.ಮಹದೇವಸ್ವಾಮಿ, ನಿರ್ದೇಶಕರಿಂದ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.



ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಅವರನ್ನು ಅಭಿನಂದಿಸಲಾಯಿತು.

ಸಹಕಾರ ಇಲಾಖೆಯಿಂದ ಪಿಎಲ್‌ಡಿ ಬ್ಯಾಂಕ್ ಕಟ್ಟಡ ನವೀಕರಣಕ್ಕೆ 50 ಲಕ್ಷ ರೂ. ಅನುದಾನ ನೀಡುವ ಜೊತೆಗೆ ಈ ಮೊದಲೇ ನೀಡಿದ್ದ ಭರವಸೆಯಂತೆ ಮಹದೇವಣ್ಣ ಅವರನ್ನು ಎಸ್‌ಎಲ್‌ಡಿಬಿ ಬ್ಯಾಂಕ್ ಉಪಾಧ್ಯಕ್ಷರನ್ನಾಗಿ ಮಾಡಲಾಗುವುದು ಎಂದರು.

ಸಹಕಾರ ಸಂಘದಲ್ಲಿ ರಾಜಕೀಯ ಪ್ರವೇಶಕ್ಕೆ ಅವಕಾಶ ನೀಡದೇ ಪಕ್ಷಾತೀತವಾಗಿ ಯಾವುದೇ ತಾರತಮ್ಯ ಮಾಡದೇ ಎಲ್ಲಾ ಷೇರುದಾರರಿಗೆ ಸಿಗಬೇಕಾದ ಸೌಲಭ್ಯ ಕೊಡುವ ನಿಟ್ಟಿನಲ್ಲಿ ಬ್ಯಾಂಕ್ ವರಿಷ್ಠರು ಮುಂದಾಗಬೇಕು. ರೈತರಿಗೆ ಹೆಚ್ಚಿನ ಸಾಲ ವಿತರಣೆ ಮಾಡಿ, ಸಾಲ ಮರುವಸೂಲಾತಿಗೆ ಕ್ರಮ ಕೈಗೊಂಡು ಬ್ಯಾಂಕ್ ಅನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಲು ಆಡಳಿತ ಮಂಡಳಿಯ ಎಲ್ಲಾ ಸದಸ್ಯರು ಒಗ್ಗಟ್ಟಾಗಿ ಶ್ರಮಿಸಬೇಕು ಎಂದರು.

ಬ್ಯಾಂಕ್ ವ್ಯಾಪ್ತಿ ವ್ಯವಸಾಯವನ್ನೇ ನಂಬಿ ಜೀವನ ನಡೆಸುವ ರೈತಾಪಿ ವರ್ಗದವರೇ ಹೆಚ್ಚಿರುವುದರಿಂದ ವ್ಯವಸಾಯಕ್ಕೆ ಪೂರಕವಾಗಿ ಸಾಲ ವಿತರಣೆ ಮಾಡಿ ಅವರಿಗೆ ಅನುಕೂಲ ಕಲ್ಪಿಸಿಕೊಡುವ ಜೊತೆಗೆ ಬ್ಯಾಂಕ್ ಆದಾಯ ಮೂಲ ಹೆಚ್ಚಿಸಿಕೊಳ್ಳುವಂತೆ ಸಲಹೆ ನೀಡಿದರು.

ನಿರ್ದೇಶಕರಾದ ಎನ್.ಅನಿಲ್ ಕುಮಾರ್, ಎನ್.ಲಿಂಗಪ್ಪಾಜಿ, ಮಾಜಿ ಜಿಪಂ ಸದಸ್ಯ ಕೆ.ಮಹದೇವ್, ಸಾಮಾಜಿಕ ನ್ಯಾಯ ಸಮಿತಿ ಮಾಜಿ ಅಧ್ಯಕ್ಷ ಎಂ.ರಮೇಶ್, ತಾಲೂಕು ಕುರುಬರ ಸಂಘದ ಅಧ್ಯಕ್ಷ ಮಹೇಶ್, ಮಾಜಿ ಅಧ್ಯಕ್ಷ ಪ್ರಶಾಂತ್ ಬಾಬು, ನಿರ್ದೇಶಕ ಅರುಣ್ ಕುಮಾರ್, ಮಲೆ ಮಹದೇಶ್ವರ ಬೆಟ್ಟದ ಪ್ರಾಧಿಕಾರದ ನಿರ್ದೇಶಕಿ ಭಾಗ್ಯಮ್ಮ, ಹೊಸಕೋಟೆ ಗ್ರಾಪಂ ಮಾಜಿ ಅಧ್ಯಕ್ಷ ಆನಂದ್, ಕಿರಗಸೂರು ಗ್ರಾಪಂ ಮಾಜಿ ಉಪಾಧ್ಯಕ್ಷ ಆರ್.ಮಹದೇವ್, ಫೈನಾನ್ಸ್ ಕಾಂತರಾಜು ಮತ್ತಿತರಿದ್ದರು.

ವಿಜೃಂಭಣೆಯ ಶ್ರೀಮರುಡೇಶ್ವರಸ್ವಾಮಿ ರಥೋತ್ಸವ



ತಲಕಾಡು, ಮಾ.26– ಇಲ್ಲಿಗೆ ಸಮೀಪದ ಮಾದಾಪುರದಲ್ಲಿ ಶ್ರೀಮರುಡೇಶ್ವರಸ್ವಾಮಿ ರಥೋತ್ಸವ ಬುಧವಾರ ವಿಜೃಂಭಣೆಯಿಂದ ನಡೆಯಿತು.

ಮುಂಜಾನೆಯಿಂದಲೇ ಮರುಡೇಶ್ವರ ದೇವಸ್ಥಾನದಲ್ಲಿ ರುದ್ರಾಭಿಷೇಕ ನಡೆದು ವಿಶೇಷ ಹೂವಿನ ಅಲಂಕಾರ ಮಾಡಲಾಗಿತ್ತು. ಬಳಿಕ ತಹಸೀಲ್ದಾರ್ ಸುರೇಶ್ ಆಚಾರ್ ಹಾಗೂ ಉಪ ತಹಸೀಲ್ದಾರ್ ಕುಮಾರ್ ಉಪಸ್ಥಿತಿಯಲ್ಲಿ ರಥೋತ್ಸವಕ್ಕೆ ಮಧ್ಯಾಹ್ನ 2 ಗಂಟೆಗೆ ಚಾಲನೆ ನೀಡಲಾಯಿತು. ನಂತರ ಶ್ರೀಗಣಪತಿ, ಶ್ರೀಸುಬ್ರಹ್ಮಣೇಶ್ವರ ಹಾಗೂ ಶ್ರೀಮರುಡೇಶ್ವರ ಬ್ರಹ್ಮ ರಥೋತ್ಸವ ದೇವಸ್ಥಾನ ಮುಂಭಾಗದ ರಥದ ಬೀದಿಯಲ್ಲಿ ಸಾವಿರಾರು ಭಕ್ತರ ಜೈಕಾರದೊಂದಿಗೆ ಮಂಗಳವಾದ್ಯ, ವೀರಭದ್ರ ಕುಣಿತದ್ಯೊಂದಿಗೆ ಸಾಂಗವಾಗಿ ಸಾಗಿತು. ಸುಡುಬಿಸಿಲನ್ನು ಲೆಕ್ಕಿಸದೆ ಆಗಮಿಸಿದ್ದ ಸಾವಿರಾರು ಭಕ್ತರು ಹಣ್ಣು ಜವನ ಎಸೆದು ಭಕ್ತಿ ಸಮರ್ಪಿಸಿದರು. ಸೇವಾರ್ಥದಾರರು ಅರವಟ್ಟಿಗೆಯಲ್ಲಿ ಮಜ್ಜಿಗೆ, ಪಾನಕ ಹಾಗೂ ಕೋಸಂಬರಿ ವಿತರಿಸಿದರು. ಪೊಲೀಸ್ ಇಲಾಖೆಯಿಂದ ಅಗತ್ಯ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

ಸನ್ಮಾನ



ಹುಣಸೂರಿನ ಕಾಂಗ್ರೆಸ್ ಕಚೇರಿ ಬಳಿ ನಗರ ಆಶ್ರಯ ಸಮಿತಿ ನಿರ್ದೇಶಕರಾಗಿ ಆಯ್ಕೆಯಾದ ಮಹಮ್ಮದ್ ಸಲಾವುದ್ದೀನ್ ಅಮೀನ್ ಅವರನ್ನು ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್ ಸನ್ಮಾನಿಸಿದರು.

ಮಾ.30, ಯುಗಾದಿ ಕವಿಗೋಷ್ಠಿ

ಹುಣಸೂರು, ಮಾ.26– ನಗರದಲ್ಲಿ ಕಲಾಧರೆ ಪ್ರದರ್ಶನ ಮತ್ತು ನೃತ್ಯಕಲೆಗಳ ಸಂಸ್ಥೆ ಸಹಯೋಗದಲ್ಲಿ ಮಾ.30ರಂದು ಬೆಳಗ್ಗೆ 10 ಗಂಟೆಗೆ ಯುಗಾದಿ ಕವಿಗೋಷ್ಠಿ ಆಯೋಜಿಸಲಾಗಿದೆ. ಕವಿಗೋಷ್ಠಿಯಲ್ಲಿ ಎಲ್ಲಾ ವಯೋಮಾನದ ಕವಿ, ಕವಯತ್ರಿಯರು ಭಾಗವಹಿಸಬಹುದಾಗಿದ್ದು, ಗೋಷ್ಠಿಯಲ್ಲಿ ವಾಚಿಸುವ ಕವಿತೆಗಳನ್ನು ಮಾ.27ರೊಳಗೆ ಪ್ರೊ.ಡಾ.ರೇಣುಕಾ ಪ್ರಸಾದ್ 8884982939, ಡಾ.ಮಾಧುಪ್ರಸಾದ್ 8550812774ಗೆ ಕಳುಹಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಸಾರ್ವಜನಿಕರು 'ಬಿ' ಖಾತೆ ಸದುಪಯೋಗಪಡಿಸಿಕೊಳ್ಳಿ

'ಬಿ' ಖಾತೆ ವಿತರಣೆಗೆ ಶಾಸಕ ದರ್ಶನ್ ಚಾಲನೆ

ನಂಜನಗೂಡು, ಮಾ.26– ನಮ್ಮ ಕಾಂಗ್ರೆಸ್ ಸರ್ಕಾರ ಬಡವರ ಕಾಳಜಿಯಿಂದಾಗಿ ರೆವಿನ್ಯೂ ಬಡಾವಣೆಗಳಲ್ಲಿ ಅನಧಿಕೃತವಾಗಿ ನಿರ್ಮಾಣಗೊಂಡಿರುವ ಮನೆಗಳನ್ನು ಸಕ್ರಮಗೊಳಿಸುವ ಸಲುವಾಗಿ ಬಿ.ಖಾತೆ ನೀಡಲಾಗುತ್ತಿದ್ದು ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಶಾಸಕ ದರ್ಶನ್ ತಿಳಿಸಿದರು.



'ಬಿ' ಖಾತೆ ವಿತರಣೆಗೆ ಶಾಸಕ ದರ್ಶನ್ ಚಾಲನೆ ನೀಡಿದರು.

ನಗರಸಭಾ ಕಚೇರಿ ಆವರಣದಲ್ಲಿ 'ಬಿ' ಖಾತೆ ವಿತರಣೆಗೆ ಚಾಲನೆ ನೀಡಿ ಮಾತನಾಡಿದ ಅವರು, ನಗರಸಭೆಯಲ್ಲಿ ಖಾತೆಗಳಾಗುತ್ತಿಲ್ಲ ಎಂಬ ದೂರುಗಳು ಸಾರ್ವಜನಿಕರಿಂದ ಕೇಳಿ ಬಂದಿತ್ತು. ಅಲ್ಲದೇ ಅಕ್ರಮ ಬಡಾವಣೆಗಳು ನಿರ್ಮಾಣಗೊಳ್ಳುತ್ತವೆ ಎಂಬ ಉದ್ದೇಶದಿಂದ ಅಕ್ರಮ ಸಕ್ರಮ ಯೋಜನೆ ಸುಪ್ರೀಂ ಕೋರ್ಟ್‌ನಲ್ಲಿರುವ ಕಾರಣ ರೆವಿನ್ಯೂ ಬಡಾವಣೆಗಳಲ್ಲಿ ಮನೆ ನಿರ್ಮಿಸಿಕೊಂಡಿರುವ ಬಡವರು ಸಾಲ ಸೌಲಭ್ಯ ಸೇರಿದಂತೆ ಹಲವು ಸವಲತ್ತು ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ಇದರಿಂದ ನಾನು ವಿಧಾನ ಸಭಾ ಕಲಾಪದ ಗಮನ ಸೆಳೆಯುವ ಸೂಚನೆ ವೇಳೆ ಪ್ರಶ್ನಾವಳಿ ಮಂಡಿಸಿದ್ದೆ. ಅದರ ಪ್ರತಿಫಲವಾಗಿ, ಸಚಿವ ಈಶ್ವರ್ ಖಂಡ್ರೆ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಸಾಧಕ ಬಾಧಕಗಳನ್ನು ಚರ್ಚಿಸಿ ಸರ್ಕಾರ ಅಂತಿಮವಾಗಿ ಕಾಯ್ದೆ ರೂಪಿಸಿ ರೆವಿನ್ಯೂ ಬಡಾವಣೆಗಳಲ್ಲಿ ಮನೆ ನಿರ್ಮಿಸಿಕೊಂಡಿರುವವರಿಗೆ ಅಕ್ರಮ ಸಕ್ರಮ ಯೋಜನೆ ಅಡಿ ಬಿ ಖಾತೆ ನೀಡಲಾಗುತ್ತಿದೆ. ನಗರಸಭಾ ವ್ಯಾಪ್ತಿಯಲ್ಲಿ 7 ಸಾವಿರ ಅನಧಿಕೃತ ಆಸ್ತಿಗಳಿರುವ ಬಗ್ಗೆ ಮಾಹಿತಿ ಇದೆ. ಅವುಗಳಲ್ಲಿ ಈಗಾಗಲೇ 1 ಸಾವಿರ ಅರ್ಜಿಗಳು ಸಲ್ಲಿಕೆಯಾಗಿದೆ. ಮೈಸೂರು ಜಿಲ್ಲಾಧಿಕಾರಿ ಆದೇಶದ ಮೇರೆಗೆ ಮೇ ತಿಂಗಳಲ್ಲಿ ಬಿ ಖಾತೆಗೆ ಅರ್ಜಿ ಸಲ್ಲಿಸಲು ಕೊನೆ ದಿನವಾಗಿದ್ದು, ಅನಧಿಕೃತ ಆಸ್ತಿ ಮಾಲೀಕರು ಈ ಯೋಜನೆ ಸದುಪಯೋಗ ಪಡೆದುಕೊಂಡು ನಿಗದಿತ ದಿನಾಂಕದೊಳಗೆ ಅರ್ಜಿ ಸಲ್ಲಿಸಿ ನಿಮ್ಮ ಆಸ್ತಿಗಳನ್ನು ಸಕ್ರಮಗೊಳಿಸಿಕೊಳ್ಳಬೇಕು ಎಂದರು.

ನಂಜನಗೂಡು ಮೈಸೂರು ನಗರದ ಸಮೀಪದಲ್ಲಿದ್ದು, ಇದರ ಅಭಿವೃದ್ಧಿ ಪಡಿಸುವುದು ನಮ್ಮೆಲ್ಲರ ದೊಡ್ಡ ಜವಾಬ್ದಾರಿ. ಈ ನಿಟ್ಟಿನಲ್ಲಿ ಉತ್ತಮ ಜನಪರ ಬಜೆಟ್ ನೀಡಿರುವ ಸಿದ್ದರಾಮಯ್ಯನವರು 8 ಸಾವಿರ ಕೋಟಿಗಳನ್ನು ಮುಖ್ಯಮಂತ್ರಿಗಳ ವಿಶೇಷ ಅನುದಾನಕ್ಕೆ ಮೀಸಲಿಟ್ಟಿದ್ದಾರೆ. ಅದರಲ್ಲಿ ನಂಜನಗೂಡು ಕ್ಷೇತ್ರಕ್ಕೆ ಅತೀ ಹೆಚ್ಚು ಅನುದಾನ ಬರುವ ನಿರೀಕ್ಷೆಯಿದ್ದು, ಆ ಅನುದಾನದಲ್ಲಿ ಶೇ.50ರಷ್ಟು ಅನುದಾನವನ್ನು ಹೊಸ ಬಡಾವಣೆಗಳಲ್ಲಿ ಮುಖ್ಯರಸ್ತೆ ಅಭಿವೃದ್ಧಿ ಮತ್ತು ಚರಂಡಿ ನಿರ್ಮಿಸಲು ಮೀಸಲಿಡಲಾಗುವುದು ಎಂದು ಭರವಸೆ ನೀಡಿದರು.

ನಗರಸಭಾ ಅಧ್ಯಕ್ಷ ಶ್ರೀಕಂಠಸ್ವಾಮಿ ಮಾತನಾಡಿ, ಅರ್ಜಿದಾರರು ಮಧ್ಯವರ್ತಿಗಳಿಗೆ ಆಸ್ಪದ ನೀಡದೆ ನೇರವಾಗಿ ಅರ್ಜಿ ಸಲ್ಲಿಸಿ ಬಿ ಖಾತೆಗಳನ್ನು ಪಡೆಯಬಹುದಾಗಿದೆ. ಒಂದು ವೇಳೆ ಅಧಿಕಾರಿಗಳು ಲಂಚಕ್ಕೆ ಬೇಡಿಕೆ ಇಟ್ಟಲ್ಲಿ ನೇರವಾಗಿ ಅಧ್ಯಕ್ಷರ ಕೊಠಡಿಗೆ ಬಂದು ದೂರು ನೀಡಬಹುದು. ಇಲ್ಲವಾದಲ್ಲಿ ಶಾಸಕರಿಗೆ ದೂರವಾಣಿ ಮುಖೇನ ದೂರು ನೀಡಬಹುದಾಗಿದೆ ಎಂದರು.

ಈ ವೇಳೆ ನಗರಸಭಾ ಆಯುಕ್ತ ವಿಜಯ್, ಮಾಜಿ ಶಾಸಕ ಕೇಶವ ಮೂರ್ತಿ, ನಗರಸಭಾ ಉಪಾಧ್ಯಕ್ಷ ರಿಯಾನಾಭಾನು, ಸದಸ್ಯರಾದ ಎಸ್.ಪಿ.ಮಹೇಶ್, ಗಂಗಾಧರ್, ಮೀನಾಕ್ಷಿ, ಸಿದ್ದಿಖ್, ಮಹದೇವ ಪ್ರಸಾದ್, ಗಾಯತ್ರಿ, ಎನ್.ಎಸ್.ಯೋಗೀಶ್, ಕೆ.ಎಂ. ಬಸವರಾಜು, ರಮೇಶ್, ರವಿ, ಶ್ವೇತಲಕ್ಷ್ಮಿ, ನಗರಸಭಾ ಅಧಿಕಾರಿಗಳಾದ ಮಹೇಶ್, ಪ್ರೀತಮ್ ಸೇರಿದಂತೆ ಹಲವರಿದ್ದರು.

ಬೀದಿ ನಾಯಿಗಳ ದಾಳಿ: 4 ಕುರಿಗಳು ಬಲಿ

ಮಲ್ಕುಂಡಿ, ಮಾ.26– ಬೀದಿ ನಾಯಿಗಳ ದಾಳಿಗೆ 4 ಕುರಿಗಳು ಬಲಿಯಾಗಿರುವ ಘಟನೆ ಇಲ್ಲಿಗೆ ಸಮೀಪದ ಹೆಡಿಯಾಲ ಗ್ರಾಮದಲ್ಲಿ ನಡೆದಿದೆ.



ಗ್ರಾಮದ ನಿವಾಸಿ ಮಹದೇವಮ್ಮ ಅವರಿಗೆ ಸೇರಿದ ಕುರಿಗಳು ಬಲಿಯಾಗಿರುವುದು. ಈಕೆ ತಮ್ಮ ಜಮೀನಿನಲ್ಲಿ ಕುರಿಗಳನ್ನು ಮೇಯಿಸುತ್ತಿದ್ದ ವೇಳೆ ಏಕಾಏಕಿ ದಾಳಿ ನಡೆಸಿದ ಬೀದಿ ನಾಯಿಗಳು ಕುರಿಗಳನ್ನು ಬಲಿಪಡೆದು ಅರೆಬರೆ ತಿಂದು ಪರಾರಿಯಾಗಿವೆ. ಇದರಿಂದ ಸಾವಿರಾರು ರೂ. ನಷ್ಟ ಸಂಭವಿಸಿದೆ ಎನ್ನಲಾಗಿದೆ. ಹೆಡಿಯಾಲ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ದಾಳಿಗೆ ಸಾಕು ಪ್ರಾಣಿಗಳು ಬಲಿಯಾಗುತ್ತಿದ್ದು, ರೈತರು ಕಂಗಾಲಾಗಿದ್ದಾರೆ. ಹೀಗಾಗಿ ಸಂಬಂಧಪಟ್ಟ ಅಧಿಕಾರಿಗಳು ಬೀದಿ ನಾಯಿಗಳ ಹಾವಳಿ ತಪ್ಪಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಮಹದೇವಮ್ಮ ಒತ್ತಾಯಿಸಿದ್ದಾರೆ.

ಲೋಕೇಶ್ ನಿಧನ



ನಂಜನಗೂಡು, ಮಾ.26– ನಗರದ ಟಿಎಪಿಸಿಎಂಎಸ್ ಲೆಕ್ಕಾಧಿಕಾರಿ ಆರ್.ಲೋಕೇಶ್ ಬುಧವಾರ ನಿಧನರಾದರು. ಮೃತರು ತಂದೆ, ತಾಯಿ, ಇಬ್ಬರು ಸಹೋದರರು, ಪತ್ನಿ ಸವಿತಾ, ಪುತ್ರ, ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಕಪಿಲಾ ನದಿ ದಡದಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಐಪಿಎಲ್ ಹಂಗಾಮ

ಆರ್‌ಆರ್ ಮಣಿಸಿ ಗೆಲುವಿನ ಖಾತೆ ತೆರೆದ ಕೆಕೆಆರ್



ಗುವಾಹಟಿ, ಮಾ.26– ಬೌಲರ್‌ಗಳ ಸಂಘಟಿತ ದಾಳಿ ಮತ್ತು ಕ್ವಿಂಟನ್ ಡಿ ಕಾಕ್ ಅವರ ಆಕರ್ಷಕ ಅರ್ಧ ಶತಕಗಳ ನೆರವಿನಿಂದ ಹಾಲಿ ಚಾಂಪಿಯನ್ ಕೋಲ್ಕತ್ತಾ ನೈಟ್ ರೈಡರ್ಸ್, ರಾಜಸ್ಥಾನ ರಾಯಲ್ಸ್ ವಿರುದ್ಧ 8 ವಿಕೆಟ್‌ಗಳ ಜಯಗಳಿಸುವ ಮೂಲಕ ಪ್ರಸಕ್ತ ಸಾಲಿನ ಟೂರ್ನಿಯಲ್ಲಿ ಗೆಲುವಿನ ಖಾತೆ ತೆರೆಯುವಲ್ಲಿ ಯಶಸ್ವಿಯಾಗಿದೆ. ಮತ್ತೊಂದೆಡೆ ರಾಜಸ್ಥಾನ ಸತತ 2ನೇ ಸೋಲು ಅನುಭವಿಸಿತು.

ಇಲ್ಲಿನ ಬರ್ಸಾಪುರ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ರಾಜಸ್ಥಾನ ನೀಡಿದ 152 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಕೆಕೆಆರ್ 17.3 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 153 ರನ್ ಗಳಿಸಿ ಇನ್ನೂ 15 ಎಸೆತಗಳು ಬಾಕಿ ಇರುವಂತೆಯೇ ಜಯದ ನಗೆ ಬೀರಿತು. ಗಾಯದ ಸಮಸ್ಯೆ ಹಿನ್ನೆಲೆಯಲ್ಲಿ ಸುನೀಲ್ ನರೇನ್ ಬದಲಿಗೆ ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಮೊಯಿನ್ ಅಲಿ ಕೇವಲ 5 ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ನಾಯಕ ಅಜಿಂಕ್ಯಾ ರಹಾನೆ 15 ಎಸೆತಗಳಲ್ಲಿ ತಲಾ ಒಂದೊಂದು ಬೌಂಡರಿ, ಸಿಕ್ಸರ್ ಒಳಗೊಂಡ 18 ರನ್ ಗಳಿಸಿ ಔಟಾದರು. ಈ ವೇಳೆ 3ನೇ ವಿಕೆಟ್ ಜೊತೆಯಾದ ಕ್ವಿಂಟನ್ ಡಿ ಕಾಕ್ ಮತ್ತು ಅಂಗರಿಕ್ಷ್ ರಘುವಂಶಿ 83 ರನ್‌ಗಳ ಜೊತೆಯಾಟವಾಡಿ ತಂಡಕ್ಕೆ ಜಯ ತಂದುಕೊಟ್ಟರು. ಪಂದ್ಯದಲ್ಲಿ ಬಿರುಸಿನ ಬ್ಯಾಟಿಂಗ್ ಪ್ರದರ್ಶನ ನೀಡಿದ ಡಿಕಾಕ್ 61 ಎಸೆತಗಳಲ್ಲಿ 6ಸಿಕ್ಸರ್, 8 ಬೌಂಡರಿ ಒಳಗೊಂಡ ಅಜೇಯ 97 ರನ್ ಗಳಿಸಿ ಕೇವಲ 3 ರನ್ ಅಂತರದಲ್ಲಿ ಶತಕದಿಂದ ವಂಚಿತರಾದರು. ರಘುವಂಶಿ ಅಜೇಯ 22 ರನ್ ಗಳಿಸಿದರು. ರಾಜಸ್ಥಾನ್ ಪರ ವಾನಿಂದು ಹಸರಂಗ 1 ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ್ ರಾಯಲ್ಸ್ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 151 ರನ್‌ಗಳ ಸವಾಲಿನ ಮೊತ್ತ ಪೇರಿಸಿತು. ತಂಡದ ಪರ ಯಶಸ್ವಿ ಜೈಸ್ವಾಲ್ 29, ಸಂಜು ಸ್ಯಾಮ್ಸನ್ 13, ರಿಯಾನ್ ಪರಾಗ್ 25, ಧ್ರುವ್ ಜುರೇಲ್ 33, ಜೋಫ್ರಾ ಆರ್ಚರ್ 16 ರನ್ ಗಳಿಸಿದರು. ಕೋಲ್ಕತ್ತಾ ನೈಟ್ ರೈಡರ್ಸ್ ಪರ ಮೊಯಿನ್ ಅಲಿ, ವರುಣ್ ಚಕ್ರವರ್ತಿ, ವೈಭವ್ ಅರೋರ ಹಾಗೂ ಹರ್ಷಿತ್ ರಾಣಾ ತಲಾ 2, ಮತ್ತೊಂದು ವಿಕೆಟ್ ಸ್ಪೆನ್ಸರ್ ಜಾನ್ಸನ್ ಪಾಲಾಯಿತು. ಕ್ವಿಂಟನ್ ಡಿ ಕಾಕ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ತಂಡದ ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಹೈದರಾಬಾದ್	1	1	0	0	2
ಬೆಂಗಳೂರು	1	1	0	0	2
ಪಂಜಾಬ್	1	1	0	0	2
ಚೆನ್ನೈ	1	1	0	0	2
ಡೆಲ್ಲಿ	1	1	0	0	2
ಕೋಲ್ಕತ್ತಾ	2	1	1	0	2
ಲಕ್ನೋ	1	0	1	0	0
ಮುಂಬೈ	1	0	1	0	0
ಗುಜರಾತ್	1	0	1	0	0
ರಾಜಸ್ಥಾನ್	2	0	2	0	0

ಇಂದಿನ ಪಂದ್ಯ

ಸನ್‌ರೈಸರ್ಸ್ ಹೈದರಾಬಾದ್
V/S
ಲಕ್ನೋ ಸೂಪರ್ ಜಯಂಟ್ಸ್

ಸಮಯ: ಸಂಜೆ 7.30

ಸ್ಥಳ : ರಾಜೀವ್ ಗಾಂಧಿ, ಕ್ರೀಡಾಂಗಣ, ಹೈದರಾಬಾದ್

ಚಾಮರಾಜನಗರ ಆಕ್ಸಿಜನ್ ದುರಂತ; ಬಿ.ಎ.ಪಾಟೀಲ್ ವರದಿ ತಿರಸ್ಕಾರ

ನೋಟಿಸ್‌ಗೆ ಉತ್ತರಿಸದ 29 ಜನ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ: ಡಿಸಿಎಂ ಡಿ.ಕೆ.ಶಿವಕುಮಾರ್



ಬೆಂಗಳೂರು, ಮಾ.26– ಕೋವಿಡ್ ಸಮಯದಲ್ಲಿ ನಡೆದಿದ್ದ ಚಾಮರಾಜನಗರ ಆಕ್ಸಿಜನ್ ದುರಂತದ ಬಗ್ಗೆ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಬಿ.ಎ. ಪಾಟೀಲ್ ಏಕಸದಸ್ಯ ನ್ಯಾಯಾಂಗ ಆಯೋಗ ನೀಡಿದ್ದ ವರದಿಯನ್ನು ತಿರಸ್ಕರಿಸಿ, ನ್ಯಾ.ಕುನ್ಹಾ ಅವರಿಗೆ ಮರು ತನಿಖೆಯ ಜವಾಬ್ದಾರಿ ನೀಡಲಾಗಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ಸಚಿವ ಸಂಪುಟ ಉಪ ಸಮಿತಿ ಸಭೆ ನಂತರ ಮಾಧ್ಯಮದವರನ್ನು ಉದ್ದೇಶಿಸಿ ವಿಧಾನಸೌಧದಲ್ಲಿ ಬುಧವಾರ ಮಾತನಾಡಿದರು. ಚಾಮರಾಜನಗರ ದುರಂತ ನಡೆದ ವೇಳೆ ನಾನು ಹಾಗೂ ಸಿದ್ದರಾಮಯ್ಯ ಅವರು ಸ್ಥಳಕ್ಕೆ ತೆರಳಿ ಸಂಪೂರ್ಣ ಮಾಹಿತಿಯನ್ನು ಕಲೆ ಹಾಕಿದ್ದೆವು. ಮೃತರ ಕುಟುಂಬ ವರ್ಗದವರನ್ನು ಸಹ ಭೇಟಿ ಮಾಡಲಾಗಿತ್ತು. ಈ ಬಗ್ಗೆ ಅಧಿಕಾರಿಗಳನ್ನು ಪ್ರಶ್ನಿಸಿದಾಗ ಅವರು ಯಾರ ತಪ್ಪಿದೆ ಎಂದು ಹೇಳಿದ್ದರು ಎಂದರು.

ವರದಿಯಲ್ಲಿ ಕುನ್ಹಾ ಅವರು ಹೆಸರಿಸಿರುವ ಹಿಂದಿನ ಆರೋಗ್ಯ ಸಚಿವರ ಮೇಲೆ ಕ್ರಮ ತೆಗೆದುಕೊಳ್ಳಲಾಗುತ್ತದೆಯೇ ಎಂದು ಕೇಳಿದಾಗ, ಕೋವಿಡ್ ಅಕ್ರಮಗಳ ಬಗ್ಗೆ ಮೈಕೆಲ್ ಕುನ್ಹಾ ಅವರು ಅತ್ಯಂತ ಸಮಗ್ರವಾಗಿ ವರದಿಯನ್ನು ನೀಡಿದ್ದಾರೆ. ಅದನ್ನು ಕೂಲಂಕುಷವಾಗಿ ಅಧ್ಯಯನ ಮಾಡಬೇಕಾಗುತ್ತದೆ. ಇದರಲ್ಲಿ ಕಾನೂನು ಸಂಬಂಧಿತ, ಕ್ರಿಮಿನಲ್ ಸಂಬಂಧಿತ ವಿಚಾರಗಳನ್ನು ಗಮನಿಸಲು ಸಹಾಯ ತೆಗೆದುಕೊಳ್ಳಲಾಗುತ್ತಿದೆ ಎಂದರು.

ಸುಮಾರು 29 ಜನ ಅಧಿಕಾರಿಗಳು ಸಮಿತಿ ನೀಡಿರುವ ನೋಟಿಸ್‌ಗೆ ಉತ್ತರ ನೀಡಿಲ್ಲ ಅವರ ವಿರುದ್ಧ ಶಿಸ್ತುಕ್ರಮ ತೆಗೆದುಕೊಳ್ಳಲಾಗುವುದು. ಕುನ್ಹಾ ಅವರು ವರದಿಯಲ್ಲಿ ಅನೇಕ ರಾಜಕಾರಣಿಗಳ ಹೆಸರನ್ನು ಪ್ರಸ್ತಾಪಿಸಿದ್ದಾರೆ. ಇದರ ಬಗ್ಗೆ ನಮಗೂ ಅರಿವಿದೆ. ಸೂಕ್ತಕಾಲದಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿದರು.

15 ದಿನಗಳಿಗೊಮ್ಮೆ ಸಭೆ: ಮುಂದಿನ ದಿನಗಳಲ್ಲಿ ಪ್ರತಿ 15 ದಿನಗಳಿಗೊಮ್ಮೆ ಉಪಸಮಿತಿ ಸಭೆ ನಡೆಸಬೇಕು ಎನ್ನುವ ತೀರ್ಮಾನಕ್ಕೆ ಬರಲಾಗಿದೆ. ಅಧಿಕಾರಿಗಳ ಕೊರತೆ ಇರುವ ಕಾರಣಕ್ಕೆ ಹಿರಿಯ ಐಎಎಸ್, ಐಪಿಎಸ್ ಅಧಿಕಾರಿಗಳನ್ನು ಸಮಿತಿಗೆ ನೇಮಕ ಮಾಡಿ ಅವರಿಗೂ ಕೆಲವು ಜವಾಬ್ದಾರಿಗಳನ್ನು ನೀಡಬೇಕು ಎಂದು ತೀರ್ಮಾನ ಮಾಡಲಾಗಿದೆ ಎಂದರು.

ಆರೋಗ್ಯ ಇಲಾಖೆ ನಡೆಸುವುದು ಪ್ರತಿ ದಿನವೂ ಸವಾಲಿನಿಂದ ಕೂಡಿರುವ ಕೆಲಸ. ಇಲಾಖೆ ಅಡಿಯಲ್ಲಿ 70 ಮೆಡಿಕಲ್ ಕಾಲೇಜುಗಳು ಬರುತ್ತವೆ. ದಿನವು ಹೊಸ ಸವಾಲುಗಳು ಎದುರಾಗುತ್ತವೆ ಆದ ಕಾರಣ ಒಂದಷ್ಟು ಜವಾಬ್ದಾರಿಗಳನ್ನು ಹಿರಿಯ ಅಧಿಕಾರಿಗಳಿಗೆ ನೀಡಲಾಗುವುದು ಎಂದು ಹೇಳಿದರು.

ಸಂಪುಟ ಉಪ ಸಮಿತಿಯಿಂದ ಜಿಲ್ಲಾ ಆಸ್ಪತ್ರೆಗಳಿಗೆ ಭೇಟಿ: ಕೋವಿಡ್ ಸಮಯದಲ್ಲಿ ಖರೀದಿ ಮಾಡಿದ ಅನೇಕ ವೈದ್ಯಕೀಯ ಉಪಕರಣಗಳು ಕೆಲಸ ಮಾಡುತ್ತಿಲ್ಲ ಅಲ್ಲದೇ ದಿನಾಂಕ ಮುಗಿದಿರುವ ಅನೇಕ ಔಷಧಿಗಳ ಬಗ್ಗೆ ಕೇಳಿದಾಗ, ನ್ಯಾ.ಕುನ್ಹಾ ಅವರ ವರದಿಯಲ್ಲಿ ಅನೇಕ ವಿಚಾರಗಳಿವೆ. ಆದರೂ ಸಮಿತಿಯವರು ಇದೆಲ್ಲವನ್ನು ನೇರವಾಗಿ ನೋಡಿ ಪ್ರಮಾಣಿಸಬೇಕು, ನಮಗೂ ಇದು ಅರ್ಥವಾಗಬೇಕು. ಇಡೀ ಸಮಿತಿಯ ಸದಸ್ಯರು ಔಷಧಿಗಳು, ಉಪಕರಣಗಳನ್ನು ವೀಕ್ಷಣೆ ಮಾಡುತ್ತಾರೆ. ಅನೇಕ ಕಡೆ ವೈದ್ಯಕೀಯ ಉಪಕರಣಗಳನ್ನು ಅಳವಡಿಸಿಲ್ಲ ಎಂದು ಹೇಳಲಾಗಿದೆ. ಹಾಗಾದರೆ ಅದು ಏನಾಗಿದೆ ಎಂದು ಪರಿಶೀಲನೆ ಮಾಡುತ್ತೇವೆ. ಒಂದಷ್ಟನ್ನು ಉಗ್ರಾಣಗಳಿಗೆ, ಜಿಲ್ಲಾ ಕೇಂದ್ರಗಳಿಗೆ ಕಳಿಸಲಾಗಿದೆ ಎನ್ನುವ ಮಾಹಿತಿಯಿದೆ. ಅದಕ್ಕೆ ಸಮಿತಿಯವರು ಜಿಲ್ಲಾ ಕೇಂದ್ರಗಳ ಆಸ್ಪತ್ರೆಗಳಲ್ಲಿ, ಬೆಂಗಳೂರಿನಲ್ಲೂ ಪರಿಶೀಲನೆ ನಡೆಸುತ್ತದೆ ಎಂದರು.

ನಾನು ಕಾಂಗ್ರೆಸ್ ಪಕ್ಷದ ವಕ್ತಾರ: ಕುಮಾರಸ್ವಾಮಿ ಹಾಗೂ ದೇವೇಗೌಡರನ್ನು ಸತೀಶ್ ಜಾರಕಿಹೊಳಿ ಅವರು ಭೇಟಿ ಮಾಡಿರುವ ಬಗ್ಗೆ ಕೇಳಿದಾಗ, ನಾನು ಕಾಂಗ್ರೆಸ್ ಪಕ್ಷದ ವಕ್ತಾರ. ಕುಮಾರಸ್ವಾಮಿ ಹಾಗೂ ಸತೀಶ್ ಜಾರಕಿಹೊಳಿ ಅವರ ಬಳಿ ಈ ಬಗ್ಗೆ ಚರ್ಚೆ ಮಾಡಿದರೆ ಒಳ್ಳೆಯದು. ದೇಶ, ರಾಜ್ಯ, ವೈಯಕ್ತಿಕ ವಿಚಾರಗಳಿಗೆ ಭೇಟಿಯಾಗಿದ್ದರೋ ತಿಳಿದಿಲ್ಲ. ಇದರ ಬಗ್ಗೆ ಅವರನ್ನೇ ಕೇಳಿದರೆ ಬಹಳ ಉತ್ತಮ ಎಂದರು.

ಯತ್ನಾಳ್ ಉಚ್ಚಾಟನೆ ಬಿಜೆಪಿ ಆಂತರಿಕ ವಿಚಾರ: ಯತ್ನಾಳ್ ಅವರನ್ನು 6 ವರ್ಷಗಳ ಕಾಲ ಉಚ್ಚಾಟನೆ ಮಾಡಿರುವ ಬಗ್ಗೆ ಕೇಳಿದಾಗ, ಬಿಜೆಪಿಯ ಆಂತರಿಕ ವಿಚಾರಗಳನ್ನು ನಾನು ಏಕೆ ಮಾತನಾಡಲಿ. ಅವರ ಪಕ್ಷದ ಮುತ್ತು ರತ್ನಗಳನ್ನು ಇಟ್ಟುಕೊಳ್ಳಲಿ ಅಥವಾ ಆಚೆಯಾದರೂ ಬಿಸಾಡಲಿ ಎಂದು ಕುಟುಕಿದರು.

ಯತ್ನಾಳ್ ಅವರು ನಮ್ಮಲ್ಲಿ ಇದ್ದಿದ್ದರೆ ಇಷ್ಟೊತ್ತಿಗಾಗಲೇ ನಾನು ಪಕ್ಷದಿಂದ ಉಚ್ಚಾಟನೆ ಮಾಡುತ್ತಿದ್ದೆ ಎನ್ನುವ ಹಿಂದಿನ ಹೇಳಿಕೆ ಬಗ್ಗೆ ಕೇಳಿದಾಗ, ಒಂದಷ್ಟು ಜನ ಶೋಭೆಗೆ ಎಂದು ಓಲೆ, ಮೂಗುತಿ, ಹಣೆಗೆ ಕುಂಕುಮ ಇಟ್ಟುಕೊಳ್ಳುತ್ತಾರೆ. ಅದೇ ರೀತಿ ಒಂದಷ್ಟು ಜನ ಪಕ್ಷದಲ್ಲಿ ಇದ್ದರೆ ಒಳ್ಳೆಯದು ಎಂದು ಮಾರ್ಮಿಕವಾಗಿ ನುಡಿದರು.

ಹನಿಟ್ರ್ಯಾಪ್ ಪ್ರಕರಣದ ಬಗ್ಗೆ ತನಿಖೆ ಕೋರಿದ್ದ ಪಿಐಎಲ್ ತಿರಸ್ಕರಿಸಿದ ಸುಪ್ರೀಂಕೋರ್ಟ್



ನವದೆಹಲಿ, ಮಾ.26– ಕರ್ನಾಟಕದ ಸಚಿವರು, ರಾಜಕಾರಣಿಗಳು ಹಾಗೂ ನ್ಯಾಯಮೂರ್ತಿಗಳನ್ನು ಹನಿಟ್ರ್ಯಾಪ್ ಮಾಡಿರುವ ಪ್ರಕರಣದ ಬಗ್ಗೆ ತನಿಖೆ ನಡೆಸಬೇಕು ಎಂದು ಕೋರಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸುಪ್ರೀಂ ಕೋರ್ಟ್ ಬುಧವಾರ ತಿರಸ್ಕರಿಸಿದೆ.

ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್, ಸಂಜಯಗ ಕರೋಲ್ ಹಾಗೂ ಸಂದೀಪ್ ಮೆಹ್ತಾ ಅವರಿದ್ದ ಪೀಠ ಸಾಮಾಜಿಕ ಕಾರ್ಯಕರ್ತ ಬಿನಯ್ ಕುಮಾರ್ ಸಿಂಗ್ ಸಲ್ಲಿಸಿದ್ದ ಪಿಐಎಲ್ ಅನ್ನು ವಜಾಗೊಳಿಸಿದೆ. ಪ್ರಕರಣವನ್ನು ಸುಪ್ರೀಂಕೋರ್ಟ್‌ನ ಮೇಲ್ವಿಚಾರಣೆಯಲ್ಲಿ ಅಥವಾ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದ ಸಮಿತಿಯಿಂದ ತನಿಖೆ ನಡೆಸಬೇಕು ಎಂದು ಕೋರಿ ಅರ್ಜಿ ಸಲ್ಲಿಸಲಾಗಿತ್ತು.

ಅರ್ಜಿದಾರರ ಪರವಾಗಿ ಹಾಜರಿದ್ದ ವಕೀಲ ಬರುಣ್ ಕುಮಾರ್ ಸಿನ್ಹಾ, ಮಾಧ್ಯಮಗಳಲ್ಲಿ ಆರೋಪ ಕೇಳಿ ಬಂದಿದ್ದು, ಘಟನೆ ಹಿಂದಿರುವವರ ಬಗ್ಗೆ ತನಿಖೆ ನಡೆಸಬೇಕು. ಕೆಲವು ಪಟ್ಟಭದ್ರ ಹಿತಾಸಕ್ತಿಗಳು ನ್ಯಾಯಮೂರ್ತಿಗಳನ್ನು ಮಧುಬಲೆಗೆ ಕೆಡವುವ ಯತ್ನವು ನ್ಯಾಯಾಲಯದ ಸ್ವಾಯತ್ತತೆ ಮೇಲೆ ಗಂಭೀರ ಪರಿಣಾಮ ಬೀರಲಿದೆ ಎಂದು ಹೇಳಿದರು.

ಮುಖ್ಯಮಂತ್ರಿ ಆಕಾಂಕ್ಷಿಯಾಗಿರುವ ವ್ಯಕ್ತಿಯೊಬ್ಬರು ನ್ಯಾಯಮೂರ್ತಿಗಳನ್ನು ಸೇರಿ ಹಲವರನ್ನು ಮಧುಬಲೆಗೆ ಕೆಡವಿದ್ದಾರೆ ಎಂದು ಕರ್ನಾಟಕದ ವಿಧಾನಸಭೆಯಲ್ಲೇ ಆರೋಪಿಸಿರುವುದನ್ನು ವಿವಿಧ ಮಾಧ್ಯಮ ಸಂಸ್ಥೆಗಳು ವರದಿ ಮಾಡಿವೆ ಎಂದು ಅರ್ಜಿಯಲ್ಲಿ ಹೇಳಲಾಗಿತ್ತು. ಅರ್ಜಿಯನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ.

ಮಚ್ಚು ಹಿಡಿದು ರೀಲ್ಸ್: ಬಿಗ್‌ಬಾಸ್ ಮಾಜಿ ಸ್ಪರ್ಧಿಗಳು 3 ದಿನ ಪೊಲೀಸ್ ಕಸ್ಟಡಿಗೆ

ಬೆಂಗಳೂರು, ಮಾ.26– ಮಚ್ಚು ಹಿಡಿದು ರೀಲ್ಸ್ ಮಾಡಿ ಜೈಲು ಪಾಲಾಗಿರುವ ಕನ್ನಡ ಬಿಗ್‌ಬಾಸ್‌ನ ಮಾಜಿ ಸ್ಪರ್ಧಿಗಳಾದ ರಜತ್ ಕಿಶನ್ ಹಾಗೂ ವಿನಯ್ ಗೌಡ ಅವರನ್ನು ಕೋರ್ಟ್ ಬುಧವಾರ ಮೂರು ದಿನಗಳ ಕಾಲ ಪೊಲೀಸ್ ವಶಕ್ಕೆ ನೀಡಿ ಆದೇಶಿಸಿದೆ.

ನಿನ್ನೆ ಬಿಗ್‌ಬಾಸ್ ಮಾಜಿ ಸ್ಪರ್ಧಿಗಳನ್ನು ವಶಕ್ಕೆ ಪಡೆದಿದ್ದ ಬಸವೇಶ್ವರ ನಗರ ಠಾಣೆ ಪೊಲೀಸರು ಇಂದು ಇಬ್ಬರನ್ನು 24ನೇ ಎಸಿಎಂಎಂ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ್ದರು. ವಾದ, ಪ್ರತಿವಾದ ಆಲಿಸಿದ ಕೋರ್ಟ್ ಇಬ್ಬರನ್ನೂ ಮೂರು ದಿನ ಪೊಲೀಸ್ ಕಸ್ಟಡಿಗೆ ನೀಡಿದೆ. ಅಲ್ಲದೆ ಕಸ್ಟಡಿ ಅವಧಿ ಮುಗಿದ ಬಳಿಕ ಅಂದರೆ, ಮಾರ್ಚ್ 28ರಂದು ಸಂಜೆ 4 ಗಂಟೆಗೆ ಇಬ್ಬರನ್ನು ಕೋರ್ಟ್‌ಗೆ ಹಾಜರುಪಡಿಸುವಂತೆ ಸೂಚಿಸಿದೆ.

ನಿನ್ನೆ ವಿಚಾರಣೆಗೆ ಹಾಜರಾದ ರಜತ್ ಹಾಗೂ ವಿನಯ್ ಗೌಡ ಅವರನ್ನು ಬಸವೇಶ್ವರ ನಗರ ಪೊಲೀಸರು ನಾಗರಬಾವಿಯ ಅಕ್ಷಯ್ ಸ್ಟುಡಿಯೋಗೆ ಕರೆ ತಂದು ರೀಲ್ಸ್ ಮಾಡಿದ ಜಾಗದಲ್ಲಿ ಸ್ಥಳ ಮಹಜರು ಮಾಡಿಸಿದ್ದರು.



ಅಕ್ಷಯ ಸ್ಟುಡಿಯೋದ ಮೂಲೆಮೂಲೆಯಲ್ಲಿ ಹುಡುಕಿದರೂ ಲಾಂಗ್ ಪತ್ತೆ ಆಗಿಲ್ಲ. ಮಚ್ಚು ಎಲ್ಲಿದೆ ಎಂದು ಕೇಳಿದರೂ ರಜತ್ ಹಾಗೂ ವಿನಯ್ ಗೌಡ ಬಾಯಿ ಬಿಟ್ಟಿಲ್ಲ ಸೆಟ್ ಹಾಕಿದ್ದವರು ತಗೊಂಡು ಹೋಗಿರಬಹುದೆಂದು ಎಂದು ಬೇಜವಾಬ್ದಾರಿ ಉತ್ತರ ನೀಡಿದ್ದಾರೆ. ಹೀಗಾಗಿ ಬಸವೇಶ್ವರ ನಗರ ಪೊಲೀಸರು ಅವರಿಬ್ಬರನ್ನು ಮತ್ತೆ ಠಾಣೆಗೆ ಕರೆದುಕೊಂಡು ಬಂದಿದ್ದರು. ಸದ್ಯ ರೀಲ್ಸ್‌ನಲ್ಲಿ ಬಳಸಿದ ಮಚ್ಚು ಎಲ್ಲಿದೆ ಅಂತ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ.

ಕನ್ನಡ ರಂಗಭೂಮಿಯಲ್ಲಿ ಮಹಿಳಾ ನಾಟಕಕಾರರು ವಿರಳ

●ಹಿರಿಯ ರಂಗ ನಿರ್ದೇಶಕ ಹೆಚ್.ಎಸ್.ಉಮೇಶ್ ಬೇಸರ ●ಸ್ತ್ರೀ ರತ್ನ ಪ್ರಶಸ್ತಿ ಪ್ರದಾನ



ಮೈಸೂರಿನ ಕಲಾಮಂದಿರ ಆವರಣದ ಕಿರುರಂಗ ಮಂದಿರದಲ್ಲಿ ಬುಧವಾರ ಸ್ತ್ರೀ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು,ಮಾ.26(ಪಿಎಂ)– ನವೋದಯ ಕನ್ನಡ ಸಾಹಿತ್ಯದ ಆರಂಭಿಕ ಕಾಲದಿಂದ ಈವರೆಗೂ ಕನ್ನಡ ರಂಗಭೂಮಿಯು ಮಹಿಳಾ ನಾಟಕಕಾರರ ಕೊರತೆ ಎದುರಿಸುತ್ತಿದೆ ಎಂದು ಹಿರಿಯ ರಂಗ ನಿರ್ದೇಶಕ ಹೆಚ್.ಎಸ್.ಉಮೇಶ್ ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ನಾಟ್ಯ–ಪ್ರದರ್ಶಕ ಕಲೆಗಳ ಸಂಸ್ಥೆ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ವಿಶ್ವ ಮಹಿಳಾ ಮತ್ತು ರಂಗಭೂಮಿ ದಿನಾಚರಣೆ ಹಾಗೂ 'ಸ್ತ್ರೀ ರತ್ನ' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ 'ರಂಗ ಗೌರವ' ಸ್ವೀಕರಿಸಿ ಮಾತನಾಡಿದರು.

ಕನ್ನಡದ ರಂಗಭೂಮಿಯಲ್ಲಿ ಮಹಿಳೆಯರು ನಟರಾಗಿ ಕಾಣಿಸಿಕೊಂಡಿದ್ದಾರೆ. ವೃತ್ತಿ ರಂಗಭೂಮಿ ಕಂಪನಿಗಳು ಉಚ್ಛ್ರಾಯ ಸ್ಥಿತಿಗೆ ಬರುತ್ತಿದ್ದಂತೆ ಮಹಿಳೆಯರು ಕೂಡ ಅಭಿನಯದಲ್ಲಿ ಕಾಣಿಸಿಕೊಂಡರು. ಆದರೆ ಎಷ್ಟು ಜನ ಮಹಿಳಾ ನಾಟಕಕಾರರು ಇದ್ದರೆಂದು ನೋಡಿದರೆ ಅದು ವಿರಳಾತಿ ವಿರಳ. ನವೋದಯ ಕನ್ನಡ ಸಾಹಿತ್ಯದ ಆರಂಭಿಕ ಕಾಲದಲ್ಲಿ ಕವಯಿತ್ರಿಯರು, ಸಣ್ಣ ಕಥೆಗಾರ್ತಿಯರು ಕಾಣಿಸಿಕೊಂಡಂತೆ ನಾಟಕ ಬರೆದ ಮಹಿಳೆಯರು ಕಾಣಿಸಿಕೊಳ್ಳುತ್ತಾರೆ. ಆದರೆ ಅದು ಅತ್ಯಂತ ವಿರಳ. ಒಂದು ಹೆಸರು ಪ್ರಸ್ತಾಪಿಸುವುದಾದರೆ, ತಿರುಮಲೆ ರಾಜಮ್ಮ. ಆ ಕಾಲಕ್ಕೆ ಅವರು ಸಣ್ಣ ಕಥೆಗಳು ಬರೆದಿದ್ದು ಮಾತ್ರವಲ್ಲ, ನಾಟಕಗಳನ್ನೂ ಬರೆದರು ಎಂದರು.

ಅಂದಿನಿಂದ ಇಂದಿಗೂ ಮಹಿಳಾ ನಾಟಕಕಾರರ ಕೊರತೆಯನ್ನು ಕನ್ನಡ ರಂಗಭೂಮಿ ಎದುರಿಸುತ್ತಿದೆ ಅಂತೆಯೇ ಕನ್ನಡ ರಂಗಭೂಮಿಯಲ್ಲಿ 'ನಿರ್ದೇಶಕ' ಪರಿಕಲ್ಪನೆ 50–60ರ ದಶಕದಲ್ಲಿ ಕಾಣಿಸಿಕೊಂಡಿತು. ಆದರೆ ಕಳೆದ 15ರಿಂದ 20 ವರ್ಷಗಳಿಂದೀಚೆಗಷ್ಟೇ ನಿರ್ದೇಶಕಿಯರು ಕನ್ನಡ ರಂಗಭೂಮಿಯಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಜೊತೆಗೆ ಬಹಳ ಗಟ್ಟಿಯಾದ ಹೆಜ್ಜೆ ಮೂಡಿಸಿದ ನಿರ್ದೇಶಕಿಯರೂ ಇದ್ದಾರೆ ಎಂದು ತಿಳಿಸಿದರು.

ಮನೋವೈಜ್ಞಾನಿಕತೆ ಪ್ರಕಾರ ಸ್ತ್ರೀಯಲ್ಲಿರುವ ಸೃಜನಶೀಲತೆಯ ಶಕ್ತಿಯು ಪುರುಷರಿಗಿಂತಲೂ ಹೆಚ್ಚು. ಪುರುಷರಲ್ಲಿ ಕ್ರಿಯಾಶೀಲತೆ ಹೆಚ್ಚಿರುತ್ತದೆ. ಆ ಕ್ರಿಯಾಶೀಲತೆಯ ಹೆಚ್ಚಳದಿಂದಾಗಿ ಅವನ ಸೃಜನಶೀಲತೆಯೂ ಗೋಚರವಾಗುತ್ತದೆ. ಆದರೆ ಮಹಿಳೆಯರ ಸೃಜನಶೀಲತೆಯು ಅಂತರ್ಜಲದ ಹಾಗೆ. ನೆಲ ಮತ್ತು ಜಲ ಈ ಎರಡನ್ನೂ ಪೋಷಿಸುವ ನಿಜದ ಶಕ್ತಿಯೆಂದರೆ ಅದು ಸ್ತ್ರೀಶಕ್ತಿ. ಯಾವುದೇ ವ್ಯಕ್ತಿ ಸ್ತ್ರೀಯಾಗಲಿ, ಪುರುಷರಾಗಿರಲಿ ಭೇದಭಾವ ಸಲ್ಲದು. ಜಗತ್ತಿನ ಯಾವುದೇ ಸಂಸ್ಕೃತಿ ನೋಡಿದರೂ ಅದು ಮಹಿಳೆಯಿಂದಲೇ ಪ್ರಾರಂಭವಾಗಿದೆ. ಎಲ್ಲಾ ಸಂಸ್ಕೃತಿಗಳ ನೆಲೆಗಟ್ಟು ಮಹಿಳೆಯಿಂದ ಪ್ರಾರಂಭವಾಗಿದೆ. ಅದನ್ನು ಬಹಳ ದೊಡ್ಡ ಮಟ್ಟದಲ್ಲಿ ಸ್ಥಾಪಿಸಿದ್ದು ಭಾರತೀಯ ಸಂಸ್ಕೃತಿ ಎಂದರು.

ಇದೇ ವೇಳೆ ಸುಸ್ಮಿತ ಪ್ರಶಾಂತ್ (ಶಿಕ್ಷಣ ಕ್ಷೇತ್ರ), ಶ್ರೀದೇವಿ ಎಸ್.ಭೂಪಾಲಂ (ಸಮಾಜ ಸೇವೆ), ಡಾ.ಯಶಸ್ವಿನಿ ಬಾಲರಾಜು (ಸಂಶೋಧನೆ), ವಿದುಷಿ ಸಿ.ಮಹೇಶ್ವರಿ (ನೃತ್ಯ), ವಸಂತ (ರಂಗಭೂಮಿ), ಕೆ.ಎಸ್.ವಿದ್ಯಾ (ಸಂಗೀತ) ಮತ್ತು ಬಸವರಾಜೇಶ್ವರಿ (ಕೃಷಿ) ಅವರಿಗೆ ಸ್ತ್ರೀ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಅಲ್ಲದೆ, ಮೈಸೂರು ಮೈಮ್ ಟೀಮ್ ವತಿಯಿಂದ 'ನನಗ್ಯಾಕೋ ಡೌಟು' ನಾಟಕ ಪ್ರದರ್ಶನ ನಡೆಯಿತು. ಹಸಿರು ಉಸಿರು ಸ್ವಯಂ ಸೇವಾ ಸಂಸ್ಥೆ ಅಧ್ಯಕ್ಷ ಜಿ.ಹರೀಶ್, ಗಾಯಕ ಲಕ್ಷ್ಮಿರಾಂ, ಬಿಸಿಎ ಕನ್‌ಸ್ಟ್ರಕ್ಷನ್ ಮುಖ್ಯಸ್ಥ ಬಿ.ಆನಂದ, ಕನ್ನಡ ಸಾಂಸ್ಕೃತಿಕ ಪರಿಷತ್ ಅಧ್ಯಕ್ಷ ಎಸ್.ಕೆ.ರಾಜೂಗೌಡ, ಮೈಸೂರು ಮೈಮ್ ಟೀಮ್ ಮುಖ್ಯಸ್ಥ ಜಿ.ಪಿ.ಗೌತಮ್, ನಾಟ್ಯ ಸಂಸ್ಥೆ ಅಧ್ಯಕ್ಷೆ ಎನ್.ಪವಿತ್ರ ಮತ್ತಿತರರು ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಚಿತ್ರಮಂದಿರ / ಚಿತ್ರ	
ಪದ್ಮ ಚಿತ್ರಮಂದಿರ	(ದೂ: 2521923)
ವೀರ ಧೀರ ಶೂರನ್–2 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಸಲಾರ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಬಡಾಸ್ ರವಿಕುಮಾರ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಯೂರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಅಪ್ಪು (ಕ)	4 ಪ್ರದರ್ಶನಗಳು
ರಾಜಕಮಲ್	
L2 ಎಂಪುರಾನ್ (ತ)	4 ಪ್ರದರ್ಶನಗಳು
ಸಂಗಂ	
ಬರ್ಗೆಟ್ ಬಸ್ಯಾ (ಕ)	4 ಪ್ರದರ್ಶನಗಳು
ಲಿಡೋ	
ಫಾರೆಸ್ಟ್(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಭಗೀರಥ (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಡಿಸ್ನಿ ಸ್ನೋ ವೈಟ್ (ಇಂ): ಬೆ.9.55ಕ್ಕೆ, ಮ.12.20ಕ್ಕೆ, ಮ.2.40ಕ್ಕೆ, ಸಂ.5ಕ್ಕೆ, ದಿ ಡಿಪ್ಲೊಮೆಟ್ (ಹಿಂ): ರಾ.7.20ಕ್ಕೆ, ಯಾರಿಯನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 2	ಬರ್ಗೆಟ್ ಬಸ್ಯಾ (ಕ): ಬೆ.10.20ಕ್ಕೆ, ಅಸ್ತ್ರಂ (ತ): ಮ.1.10ಕ್ಕೆ, ಕೋರ್ಟ್ ಸ್ಟೇಟ್ V/s ಎ ನೋಬಡಿ (ತೆ): ಮ.3.55ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಬೆ.10.35ಕ್ಕೆ, ಡ್ರ್ಯಾಗನ್ (ತ): ಮ.1.05ಕ್ಕೆ, ಪಿಂಟು ಕಿ ಪಪ್ಪಿ (ಹಿಂ): ಸಂ.4.15ಕ್ಕೆ, ಛಾವಾ (ಹಿಂ): ರಾ.7ಕ್ಕೆ, ಘಾತಕ್ (ಹಿಂ): ಬೆ.10.15ಕ್ಕೆ.
ಸ್ಕ್ರೀನ್ 4	ಡ್ರ್ಯಾಗನ್ (ತ): ಬೆ.10.20ಕ್ಕೆ, ಅಪ್ಪು (ಕ): ಮ.1.30ಕ್ಕೆ, ಷಣ್ಮುಖ (ತೆ): ಸಂ.4.15ಕ್ಕೆ, ರಾ.9.45ಕ್ಕೆ, ಡಿಸ್ನಿ ಸ್ನೋ ವೈಟ್ (ಇಂ): ರಾ.7.05ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಫಾರೆಸ್ಟ್ (ಕ): ಮ.1.45ಕ್ಕೆ, ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಸಂ.6.35ಕ್ಕೆ ಅಸ್ತ್ರಂ (ತ): ರಾ.7ಕ್ಕೆ, ಷಣ್ಮುಖ (ತೆ): ರಾ.9.15ಕ್ಕೆ.
ಸ್ಕ್ರೀನ್ 2	ಪಿಂಟು ಕಿ ಪಪ್ಪಿ (ಹಿಂ): ಮ.1.15ಕ್ಕೆ, ಮ.3.55ಕ್ಕೆ, ಛಾವಾ (ಹಿಂ): ಸಂ.6.30ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಡಿಸ್ನಿ ಸ್ನೋ ವೈಟ್ (ಇಂ): ಮ.1.30ಕ್ಕೆ, ಸಂ.4.05ಕ್ಕೆ, ರಾ.9.20ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ಸಂ.6.15ಕ್ಕೆ.


ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕೊಚ್ಚಿಯಲ್ಲಿ ಮೆಸ್ಸಿ ನೇತೃತ್ವದಲ್ಲಿ ಪ್ರದರ್ಶನ ಪಂದ್ಯ ಆಡಲಿರುವ ಅರ್ಜೆಂಟೀನಾ ತಂಡ



ನವದೆಹಲಿ, ಮಾ.26– ಭಾರತದ ಫುಟ್‌ಬಾಲ್ ಅಭಿಮಾನಿಗಳು, ವಿಶ್ವ ವಿಖ್ಯಾತ ಫುಟ್‌ಬಾಲ್ ಆಟಗಾರ ಮೆಸ್ಸಿ ಮತ್ತು ಅರ್ಜೆಂಟೀನಾ ತಂಡದ ಆಟವನ್ನು ಕಣ್ತುಂಬಿಕೊಳ್ಳುವ ಅವಕಾಶ ಪಡೆಯಲಿದ್ದಾರೆ. ವಿಶ್ವಕಪ್ ವಿಜೇತ ಅರ್ಜೆಂಟೀನಾ ತಂಡ ಈ ವರ್ಷದ ಅಕ್ಟೋಬರ್ 14ರಂದು ಕೊಚ್ಚಿಯಲ್ಲಿ ಪ್ರದರ್ಶನ ಪಂದ್ಯ ಆಡಲಿದೆ.

ಅರ್ಜೆಂಟೀನಾ ತಂಡದ ಭೇಟಿಯನ್ನು ಕೇರಳದ ಕ್ರೀಡಾ ಸಚಿವ ವಿ.ಅಬ್ದುಲ್ ರಹಿಮಾನ್ ಅವರು ಕಳೆದ ನವೆಂಬರ್‌ನಲ್ಲೇ ಪ್ರಕಟಿಸಿದ್ದರು. ಎಚ್‌ಎಸ್‌ಬಿಸಿ ಇಂಡಿಯಾ, ಅರ್ಜೆಂಟೀನಾ ತಂಡದ ಅಧಿಕೃತ ಪಾಲುದಾರನಾಗಿದ್ದು ದೇಶದಲ್ಲಿ ಫುಟ್‌ಬಾಲ್ ಪ್ರೋತ್ಸಾಹಕ್ಕೆ ಬೆಂಬಲ ನೀಡಲಿದೆ ಎಂದು ಬುಧವಾರ ಘೋಷಿಸಲಾಯಿತು.

ಅರ್ಜೆಂಟೀನಾ ಫುಟ್‌ಬಾಲ್ ಫೆಡರೇಷನ್ (ಎಎಫ್‌ಎ) ಮತ್ತು ಎಚ್‌ಎಸ್‌ಬಿಸಿ, ಭಾರತ ಮತ್ತು ಸಿಂಗಪುರದಲ್ಲಿ ಒಂದು ವರ್ಷದ ಪಾಲುದಾರಿಕೆಗೆ ಬುಧವಾರ ಸಹಿ ಹಾಕಿವೆ. ಇದರ ಪ್ರಕಾರ 2026ರ ವಿಶ್ವಕಪ್‌ಗೆ ಪೂರ್ವಭಾವಿಯಾಗಿ ಸ್ಪರ್ಧಾತ್ಮಕ ಋತುವಿಗೆ ಅರ್ಜೆಂಟೀನಾ ಸಹಕಾರ ನೀಡಲಿದೆ ಎಂದು ಎಚ್‌ಎಸ್‌ಬಿಸಿ ಪ್ರಕಟಣೆ ತಿಳಿಸಿದೆ.

ಈ ಪಾಲುದಾರಿಯ ಅನ್ವಯ, ದಿಗ್ಗಜ ಆಟಗಾರ ಲಯೊನೆಲ್ ಮೆಸ್ಸಿ ಒಳಗೊಂಡಂತೆ ಅರ್ಜೆಂಟೀನಾ ರಾಷ್ಟ್ರೀಯ ತಂಡ 2025ರ ಅಕ್ಟೋಬರ್‌ನಲ್ಲಿ ಭಾರತಕ್ಕೆ ಭೇಟಿ ನೀಡಲಿದ್ದು, ಅಂತರರಾಷ್ಟ್ರೀಯ ಪ್ರದರ್ಶನ ಪಂದ್ಯ ಆಡಲಿದೆ ಎಂದು ಪ್ರಕಟಣೆ ತಿಳಿಸಿದೆ.

ಚಾಮುಂಡೇಶ್ವರಿ ದೇವಿಗೆ ಅಪಮಾನ: ನಟ ರಕ್ಷಕ್ ಬುಲೆಟ್ ವಿರುದ್ಧ ದೂರು



ಬೆಂಗಳೂರು, ಮಾ.26– ನಟ ರಕ್ಷಕ್ ಬುಲೆಟ್ ಅವರು ಚಾಮುಂಡೇಶ್ವರಿ ದೇವಿಗೆ ಅವಹೇಳನ ಮಾಡಿದ್ದಾರೆ ಎಂದು ಆರೋಪಿಸಿ, ಹಿಂದೂ ಸಂಘಟನೆ ಕಾರ್ಯಕರ್ತ ಬಿ.ಎಸ್.ಮಹೇಶ್ ಅವರು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರಿಗೆ ಬುಧವಾರ ದೂರು ನೀಡಿದ್ದಾರೆ. ವಾಹಿನಿಯೊಂದರಲ್ಲಿ ಪ್ರಸಾರ ಆಗುತ್ತಿರುವ ರಿಯಾಲಿಟಿ ಶೋದಲ್ಲಿ ರಕ್ಷಕ್ ಅವರೂ ಪಾಲ್ಗೊಂಡಿದ್ದಾರೆ. ಕಾರ್ಯಕ್ರಮದಲ್ಲಿ ಅವರು ಹಿಂದೂಗಳ ಧಾರ್ಮಿಕ ಭಾವನೆಗೆ ಧಕ್ಕೆ ತರುವ ಹಾಗೆ ನಡೆದುಕೊಂಡಿದ್ದಾರೆ. ಕಾರ್ಯಕ್ರಮದಲ್ಲಿ ಚಾಮುಂಡೇಶ್ವರಿಗೆ ಅವರು ಅವಮಾನ ಮಾಡಿದ್ದು, ಅವರ ವಿರುದ್ಧ ಸಾಮಾಜಿಕ ಮಾಧ್ಯಮದಲ್ಲಿ ಆಕ್ರೋಶ ವ್ಯಕ್ತವಾಗುತ್ತಿದೆ. ರಕ್ಷಕ್ ಹೇಳಿಕೆ ಖಂಡಿಸಲಾಗುವುದು ಎಂದು ಜಯನಗರ ಒಂದನೇ ಬ್ಲಾಕ್‌ನ ನಿವಾಸಿ ಬಿ.ಎಸ್.ಮಹೇಶ್ ಅವರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ನಟ ರಕ್ಷಕ್ ಬುಲೆಟ್, ಜೀ ವಾಹಿನಿಯಲ್ಲಿ ಪ್ರಸಾರ ಆಗುತ್ತಿರುವ 'ಭರ್ಜರಿ ಬ್ಯಾಚುಲರ್ಸ್–2' ಕಾರ್ಯಕ್ರಮದ ನಿರ್ದೇಶಕ ಹಾಗೂ ಬರಹಗಾರರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದೂ ಅವರು ದೂರಿನಲ್ಲಿ ಕೋರಿದ್ದಾರೆ.

ಏ.2ಕ್ಕೆ ಸಿಎಂ ಸಿದ್ದರಾಮಯ್ಯ ದೆಹಲಿಗೆ; ಹನಿಟ್ರ್ಯಾಪ್ ಬಗ್ಗೆ ಮಾಹಿತಿ ನೀಡುವ ಸಾಧ್ಯತೆ



ಬೆಂಗಳೂರು, ಮಾ.26– ಎರಡೂವರೆ ತಿಂಗಳ ಬಳಿಕ ಸಿಎಂ ಸಿದ್ದರಾಮಯ್ಯ ದೆಹಲಿಗೆ ತೆರಳುತ್ತಿದ್ದು, ಹೈಕಮಾಂಡ್ ಭೇಟಿಯಾಗಿ ಹನಿಟ್ರ್ಯಾಪ್ ಬಗ್ಗೆ ಮಾಹಿತಿ ಕೊಡಬಹುದು ಎಂಬ ಕೂತುಹಲ ಸೃಷ್ಟಿಯಾಗಿದೆ.

ಈ ವೇಳೆ ಹೈಕಮಾಂಡ್ ನಾಯಕರನ್ನು ಭೇಟಿ ಆಗಲಿದ್ದಾರೆ. ಮೂರು ಪ್ರಮುಖ ವಿಚಾರಗಳ ಬಗ್ಗೆ ಸಿಎಂ ಮಾತುಕತೆ ನಡೆಸುವ ಸಾಧ್ಯತೆಯಿದ್ದು, ಹನಿಟ್ರ್ಯಾಪ್ ವಿಚಾರದ ಬಗ್ಗೆ ಸಂಪೂರ್ಣ ಮಾಹಿತಿ ನೀಡಲಿದ್ದಾರೆ ಎನ್ನಲಾಗಿದೆ.

ಇನ್ನೂ ರನ್ಯಾ ರಾವ್ ಗೋಲ್ಡ್ ಸ್ಮಗ್ಲಿಂಗ್ ಕೇಸ್‌ನಲ್ಲಿ ಸಚಿವರ ಸ್ನೇಹ ಆರೋಪದ ಬಗ್ಗೆಯೂ ಮಾಹಿತಿ ಕೊಡುವ ಸಾಧ್ಯತೆಯಿದೆ. ಇದೇ ಮೇನಲ್ಲಿ ಸರ್ಕಾರಕ್ಕೆ ಎರಡು ವರ್ಷ ತುಂಬಲಿದ್ದು, ಸರ್ಕಾರ ಮತ್ತು ಪಕ್ಷದಿಂದ ಸಾಧನಾ ಸಮಾವೇಶ ನಡೆಸಲು ಅನುಮತಿ ಕೇಳಲಿದ್ದಾರೆ.

ಇನ್ನುಳಿದಂತೆ ಪವರ್ ಶೇರ್, ಸಂಪುಟ ಪುನರ್ರಚನೆ, ಪರಿಷತ್‌ಗೆ ನಾಮಕರಣ ವಿಚಾರವಾಗಿಯೂ ಸೂಕ್ಷ್ಮವಾಗಿ ಮಾಹಿತಿ ಪಡೆಯುವ ಸಾಧ್ಯತೆಯೂ ತಳ್ಳಿ ಹಾಕುವಂತಿಲ್ಲ ಎನ್ನಲಾಗಿದೆ.

ಕಥೆ ಕೇಳೋಣ ಬನ್ನಿ ಕಾರ್ಯಕ್ರಮ

ಮೈಸೂರು, ಮಾ.26– ಮೈಸೂರಿನ ಕುವೆಂಪುನಗರದ ಕಲಾ ಸುರುಚಿ ರಂಗಮನೆಯಲ್ಲಿ ಮಾ.29ರಂದು ಸಂಜೆ 4.30 ರಿಂದ 5.30 ರವರೆಗೆ ಕಥೆ ಕೇಳೋಣ ಬನ್ನಿ ಕಾರ್ಯಕ್ರಮ ಏರ್ಪಡಿಸ ಲಾಗಿದೆ. ಸೋಮಾನಿ ಡಿ.ಎಡ್. ಕಾಲೇಜು ಹಾಗೂ ಮಂಡ್ಯದ ಅನಿಕೇತನ ಪದವಿಪೂರ್ವ ಕಾಲೇಜಿನ ನಿವೃತ್ತ ಉಪ ಪ್ರಾಂಶುಪಾಲ ರಾದ ಶ್ರೀಮತಿ ಮಲ್ಲಮ್ಮ ಮಕ್ಕಳಿಗೆ ಕಥೆ ಹೇಳಲಿದ್ದಾರೆ. ಮಾಹಿತಿ ಗಾಗಿ: 9880145427, 9844405342 ಅನ್ನು ಸಂಪರ್ಕಿಸಬಹುದು.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಜಂಟಿ ಮಾಲೀಕರಾದ ಶ್ರೀ. ಎಂ.ಡಿ.ಕೃಷ್ಣಕುಮಾರ್ ಬಿನ್ ಲೇಟ್ ಸಿ.ಹೆಚ್. ದಾಸೇಗೌಡ, ಶ್ರೀ ಎಂ.ಡಿ. ಮಂಜು ಬಿನ್ ಲೇಟ್ ಸಿ.ಹೆಚ್. ದಾಸೇಗೌಡ ಹಾಗೂ ಶ್ರೀ ಸ್ವಾಮಿ ಎಲ್.ಪಿ ಬಿನ್ ಲೇಟ್ ಪುಟ್ಟೇಗೌಡ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಬ್ಯಾಂಕ್ ಮತ್ತು ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ-ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 07 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ-ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಕಾನ್ಯ ಗ್ರಾಮದಲ್ಲಿರುವ ಸರ್ವೆ ನಂ. 144/6 ರಲ್ಲಿ ವಿಸ್ತೀರ್ಣ 01 ಎಕರೆ, 09 ಗುಂಟೆಗಳು, ಆಕಾರ ರೂ. 1.10 ಪೈಸೆ, ಖಾತಾ ನಂ. 11, ಹೊಂದಿರುವ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಅಬ್ದುಲ್ ಅಜೀಜ್ ರವರ ಜಮೀನು, ಉತ್ತರಕ್ಕೆ: ವರುಣಾ ಕಾಲುವೆ ಮತ್ತು ಪುಟ್ಟಮಾದಮ್ಮ ರವರ ಜಮೀನು, ಮತ್ತು ದಕ್ಷಿಣಕ್ಕೆ: ಚಿಕ್ಕಶಿವಣ್ಣ ರವರ ಜಮೀನು.

ಎಸ್‌ಎಲ್‌ಡಿ ಲಾ ಫರ್ಮ್, ಸಹಿ/– ಶ್ರೀಲತಾ ದೀಕ್ಷಿತ್,
ವಕೀಲರು, ನಂ. 1416, ನಾರಾಯಣಶಾಸ್ತ್ರಿ ರಸ್ತೆ,
ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು.
ಮೊ: 9844640641
email: sldlawfirm2021@gmail.com

40ನೇ ವರ್ಷದ ಸವಿನೆನಪು



ಲಯನ್ ಎಲ್. ಬಸವರಾಜ್
ಜನನ: 23–11–1937 ನಿಧನ: 27–03–1985
PHILIPS ಸರ್ವೋದಯ ಟ್ರೇಡರ್ಸ್, ಮೈಸೂರು

4th Year Remembrance



Smt. M.P. VILASA KUMARI

Your presence we miss, your memories we treasure, your moral values we follow and in our hearts you live forever

Deeply mourned by : H.P. Prasad (Husband), Sons, Daughter-in-law, relatives & friends

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಇವರು ದಿನಾಂಕ 17-03-2025ನೇ ಸೋಮವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ 27-03-2025ರ ಗುರುವಾರ ಮಧ್ಯಾಹ್ನ 12.00 ಗಂಟೆಗೆ ಮೃತರ ಸ್ವಗೃಹ ರೈಲ್ವೆ ಬಡಾವಣೆ, ಕೆ.ಆರ್.ಎಸ್.ರಸ್ತೆ, ಜೆ.ಕೆ.ಟೈರ್ಸ್ ಹತ್ತಿರ ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು:
ಶ್ರೀಮತಿ ಎಸ್.ಜಿ.ಗೀತ,
ಮೃತರ ಮಗ ಚಿ॥ ಜೀವನ್ ಕುಟುಂಬವರ್ಗ ಹಾಗೂ ಬಂಧು ಮಿತ್ರರು.

ಶ್ರೀ ಗೋವಿಂದರಾಜು

ವೈಕುಂಠ ಸಮಾರಾಧನೆ



ಇವರು ದಿನಾಂಕ 16-03-2025ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ದಿನಾಂಕ 28-03-2025ರಂದು ಮಧ್ಯಾಹ್ನ 12-00 ಘಂಟೆಗೆ ಮೃತರ ವೈಕುಂಠ ಸಮಾರಾಧನೆಯನ್ನು ನಮ್ಮ ಸ್ವಗೃಹದಲ್ಲಿ ನಡೆಸಲು ನಿಶ್ಚಯಿಸಿರುತ್ತೇವೆ. ಬಂಧು-ಮಿತ್ರರು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿಸುತ್ತೇನೆ.
ದುಃಖತಪ್ತರು: ಪತಿ ಎಂ.ಕೆ.ಸತೀಶ್

ಶ್ರೀಮತಿ ಬಿ.ಎಸ್. ದಾಕ್ಷಾಯಿಣಿ
(ಮುಖ್ಯೋಪಾಧ್ಯಾಯಿನಿ, ನೇರಲಕೆರೆ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಶ್ರೀರಂಗಪಟ್ಟಣ ತಾಲ್ಲೂಕು)


ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಇವರು ದಿನಾಂಕ 17-03-2025 ಸೋಮವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ದಿನಾಂಕ 27-03-2025 ಗುರುವಾರ ಮಧ್ಯಾಹ್ನ 12-00 ಗಂಟೆಗೆ ಮೃತರ ಹಾಲು ತುಪ್ಪ ಹಾಗೂ ಉತ್ತರ ಕ್ರಿಯಾದಿ ಕಾರ್ಯವನ್ನು ನಮ್ಮ ಸ್ವಗೃಹ ಚಾಮರಾಜನಗರ ಜಿಲ್ಲೆ #27/1, 9ನೇ ವಾರ್ಡ್, ಒಕ್ಕಲಿಗರ ಬೀದಿ, ಗುಂಡ್ಲುಪೇಟೆ ಇಲ್ಲಿ ನಡೆಸುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.
ದುಃಖತಪ್ತರು:
ಎಸ್. ಭಾಗ್ಯ ಮತ್ತು ಎನ್. ಶಿವಣ್ಣ,
ಬಿ.ಎಸ್. ವನಿತಾ
ಶ್ರೀಮತಿ ಸುಗಂಧಿನಿ ಮತ್ತು ಶ್ರೀ ಆನಂದ್,
ಶ್ರೀಮತಿ ರೋಹಿಣಿ ಕುಟುಂಬವರ್ಗದವರು ಮತ್ತು ಬಂಧುಮಿತ್ರರು.

ಶ್ರೀ ಪೃಥ್ವಿರಾಜ್ ಎಸ್.

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ಎಂ.ಎಸ್. ಶ್ರೀಧರ್ ರವರು
ಜನನ : 26-02-1946 ನಿಧನ : 26-03-2025
ದಿ. 26-03-2025ರಂದು ಸ್ವಗೃಹದಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಅಂತ್ಯ ಸಂಸ್ಕಾರ 27-03-2025
ಇಂದು ಮಧ್ಯಾಹ್ನ 12-00 ಗಂಟೆಗೆ
ಇಂತಿ ದು:ಖತಪ್ತರು : ಶ್ರೀಮತಿ ಎಲ್.ಸಿ. ಸತ್ಯಭಾಮ ಮಕ್ಕಳು ಮತ್ತು ಕುಟುಂಬ ವರ್ಗದವರು.

IN THE COURT OF THE HON'BLE I ADDITIONAL SENIOR CIVIL JUDGE & C.J.M, AT MYSORE

R.A.No:196/2023

APPELLANT :Smt. Nagarathna D/o Nanjundegowda W/o Veerabhadrappa Aged 54 years Resident of No.109/A Vontikoppal Railway Colony Near Venkataramanaswamy Temple Yadavagiri Mysuru 570 002

...Plaintiff V/s

Respondents :
1.Chief Secretary Government Of Karnataka Vidhana Soudha Bangaluru 560 001
2. The Deputy Director Of Public Insutructions, Mysuru District Mysuru
3. The Block Education Officer Mysuru Taluk, Mysuru District Mysuru
4. The Block Education Officer Nanjangud, Mysuru District Mysuru
5. The Head Master Government Higher Primary School, Kuppegala, Varuna Hobli Mysuru Taluk, Mysuru District
6. The Head Master Government Girls Secondary School, 11th Cross Palace Road, Nanjangud Mysuru District
7. The Registrar Birth & Deaths Mysuru City Corporation Mysuru

...Defendants

PUBLIC NOTICE

This is to inform the general public that Mrs. Nagarathna, formerly known as Prabha Y N, has officially relinquished the use of her former name and will henceforth be known exclusively as Nagarathna. This change has been in effect since her marriage on 25th May 1983 and is supported by various official documents, i.e., Registered Gift, Aadhaar No. 842431218086, Union Bank Pass Book, Gas Pass Book No. 18720264, Election ID card, Medical ID card, Railway Hospital ID, MCC Khatha No. 20-2-517-116, PAN Card No. BJCPN9333H, Pedigree of Family, Joint Marriage Affidavit, Ration Card UMID ID & PPO issued by South Western Railway, Mysuru.

It is further informed that R.A. No. 196/2023 is presently pending before the Hon'ble 1st Additional Senior Civil Judge, Mysuru. If any person has an objection to the grant of change of name in favor of the Appellant, they may appear before the Court on 24/04/2025 at 11:00 A.M., either in person or through their counsel, to oppose the decree of change of name in favor of the Appellant pertaining to the present Appeal.

Given under my hand and seal of the Court dated 14 March. 2025

By the Order of the Court
Sd/- Chief Ministerial Officer, Court of Senior Civil Judge & CJM, Mysuru

Sd/- MANJUNATHAN N, Advocate-KAR 1529/2019 , Door No. 999, 8th Main Road, IIIrd Stage, Gokulam, VV Mohalla, Mysuru - 570002
State of Karnataka,
Contact No: +91 9480190459
Anargyalaw@gmail.com
Date: 07.03.2025
Place: Mysore

ಸಾರ್ವಜನಿಕ ಪ್ರಕಟಣೆ

ಬೆಂಗಳೂರು ನಗರ (ಉತ್ತರ), 3ನೇ ಕ್ರಾಸ್ ಗಾರ್ಡನ್ ವಿಲ್ಲಾಸ್, ನಾಗರಭಾವಿ ಮುಖ್ಯ ರಸ್ತೆ, ಮನೆ ನಂ. 213 ರಲ್ಲಿ ವಾಸವಾಗಿರುವ ಸುಮಾರು 50 ವರ್ಷ ವಯಸ್ಸುಳ್ಳ ಲಕ್ಷ್ಮಿ ನಾರಾಯಣ್ ಡಿ.ಕೆ. ಬಿನ್ ಕೃಷ್ಣಸ್ವಾಮಿ .ಡಿ. ರವರ ಇರಾದೆಯ ಮೇರೆಗೆ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ :

ಈ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಪಡೆಯುವ ಉದ್ದೇಶದಿಂದ ನಮ್ಮ ಕಕ್ಷಿದಾರರು ಸ್ವತ್ತಿನ ಮಾಲೀಕರಾದ ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೋಕು, ಹುಲ್ಲಹಳ್ಳಿ ಹೋಬಳಿ, ದೇವರಾಯಶೆಟ್ಟಿಪುರ ಗ್ರಾಮದಲ್ಲಿ ವಾಸವಾಗಿರುವ ಲೇಟ್. ರೇವಣ್ಣ ಹೆಚ್.ವಿ. ರವರ ಧರ್ಮಪತ್ನಿ ಸುಮಾರು 62 ವರ್ಷ ವಯಸ್ಸುಳ್ಳ ಶ್ರೀಮತಿ. ಶಾಂತಮ್ಮ (ಒಂದು) ಮತ್ತು ಇವರ ನಾಲ್ಕು ಜನ ಹೆಣ್ಣು ಮಕ್ಕಳಾದ ಸುಮಾರು 44 ವರ್ಷ ವಯಸ್ಸುಳ್ಳ ಶ್ರೀಮತಿ. ವಸಂತಕುಮಾರಿ ಬಿನ್ ಲೇಟ್. ರೇವಣ್ಣ ಹೆಚ್.ವಿ. (ಎರಡು), ಸುಮಾರು 43 ವರ್ಷ ವಯಸ್ಸುಳ್ಳ ಶ್ರೀಮತಿ. ಗೀತಾ ಬಿನ್ ಲೇಟ್. ರೇವಣ್ಣ ಹೆಚ್.ವಿ. (ಮೂರು), ಸುಮಾರು 41 ವರ್ಷ ವಯಸ್ಸುಳ್ಳ ಶ್ರೀಮತಿ, ಜ್ಯೋತಿ ಬಿನ್ ಲೇಟ್. ರೇವಣ್ಣ ಹೆಚ್.ವಿ. (ನಾಲ್ಕು) ಮತ್ತು ಸುಮಾರು 40 ವರ್ಷ ವಯಸ್ಸುಳ್ಳ ಶ್ರೀಮತಿ. ಪವಿತ್ರ ಆರ್. ಬಿನ್ ಲೇಟ್.ರೇವಣ್ಣ ಹೆಚ್.ವಿ. ರವರುಗಳಿಂದ ದಿನಾಂಕ: 13–03–2025 ರಂದು ಶುದ್ಧ ಕ್ರಯದ ಕರಾರು ಪತ್ರವನ್ನು ಬರೆಸಿಕೊಂಡಿದ್ದು, ಸದರಿ ಕ್ರಯದ ಕರಾರು ಪತ್ರವು ದಿನಾಂಕ: 14–03–2025 ರಂದು ಮೈಸೂರಿನ ಉಪ-ನೋಂದಣಾಧಿಕಾರಿ ಕಛೇರಿ (ದಕ್ಷಿಣ)ಯಲ್ಲಿ 1ನೇ ಪುಸ್ತಕದ ದಾಸ್ತವೇಜು ಸಂಖ್ಯೆ ಎಂವೈಎಸ್–1–10790–2024–25 ರಂತೆ ನೋಂದಾಯಿಸಲ್ಪಟ್ಟಿರುತ್ತದೆ. ಮುಂದುವರೆದು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಮೇಲ್ಕಂಡವರುಗಳನ್ನು ಹೊರತುಪಡಿಸಿ ಮತ್ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ವಗೈರೆಗಳು ಇದ್ದ ಪಕ್ಷದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 7 ದಿನಗಳ ಒಳಗಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಕಂಡ ವಿಳಾಸದಲ್ಲಿ ಇರುವ ವಕೀಲರ ಕಛೇರಿಯನ್ನು ಸಂಪರ್ಕಿಸಿ ತಿಳಿಸತಕ್ಕದ್ದೆಂದು, ಮುಂದುವರೆದು ನಂತರ ಬಂದ ತಕರಾರರು ಗಳನ್ನು ಮಾನ್ಯ ಮಾಡುವುದಿಲ್ಲವೆಂದು ಹಾಗೂ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಕ್ರಯಪತ್ರ ನೋಂದಾಯಿಸಿ ಕೊಳ್ಳಲು ಮುಂದುವರೆಯುತ್ತಾರೆಂದು ಈ ಮೂಲಕ ಸಾರ್ವ ಜನಿಕರ ಗಮನಕ್ಕೆ ತರಲಾಗಿದೆ.

ಷೆಡ್ಯೂಲ್ ಸ್ವತ್ತು : ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೋಕು, ಹುಲ್ಲಹಳ್ಳಿ ಹೋಬಳಿ, ದೇವರಾಯಶೆಟ್ಟಿಪುರ ಗ್ರಾಮದಲ್ಲಿರುವ ಸರ್ವೆ ನಂ.55/4 (ಹಳೆ ಸರ್ವೆ ನಂ. 55/1) ರಲ್ಲಿರುವ ಒಟ್ಟು 1–06 (ಒಂದು ಎಕರೆ ಆರು ಗುಂಟೆ) ಆಕಾರ 2–11 ಪೈಸೆ ಉಳ್ಳ ಖುಷ್ಕಿ ಜಮೀನಿಗೆ ಚೆಕ್ಕುಬಂಧಿ:– ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ಗಿರೀಶ್ ಹೆಚ್.ಎಂ. ರವರಿಗೆ ಸೇರಿದ ಸರ್ವೆ ನಂ. 52 ರ ಜಮೀನು, ಉತ್ತರಕ್ಕೆ : ಮಹದೇವಸ್ವಾಮಿರವರಿಗೆ ಸೇರಿದ ಸರ್ವೆ ನಂ. 55/2 ರ ಜಮೀನು ದಕ್ಷಿಣಕ್ಕೆ : ಹೆಚ್.ವಿ. ಚಿನ್ನಸ್ವಾಮಿರವರಿಗೆ ಸೇರಿದ ಸರ್ವೆ ನಂ. 55/1 ರ ಜಮೀನು

ಸಹಿ/– ಗಿರೀಶ್.ಟಿ.ಹೆಚ್. , ವಕೀಲರು, ನಂ. 2393, ಎಸ್.ಜಿ. ಕಾಂಪ್ಲೆಕ್ಸ್, ನ್ಯೂ ಕಾಂತರಾಜ ಅರಸ್ ರಸ್ತೆ, ಕೆ.ಜಿ. ಕೊಪ್ಪಲ್, ಮೈಸೂರು. ಮೊ . 7899400741

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು
ಟೆಂಡರ್ ಅಧಿಸೂಚನೆ ಸಂಖ್ಯೆ: 19/2024–25, ದಿನಾಂಕ: 20.03.2025

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ನಜರ್‌ಬಾದ್, ಮೈಸೂರು –570010 ರವರು ಕೆ.ಡಬ್ಲ್ಯು–1 ಮತ್ತು 2ರ ರೀತ್ಯ ಒಟ್ಟು 60 ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಇವುಗಳಲ್ಲಿ ಕನಿಷ್ಠ ಮೊತ್ತ ರೂ.0.80 ಲಕ್ಷಗಳು, ಮತ್ತು ಗರಿಷ್ಟ ಮೊತ್ತ ರೂ.40.00 ಲಕ್ಷಗಳು, ಇ.ಎಂ.ಡಿ ಕನಿಷ್ಠ ರೂ.0.02 ಲಕ್ಷಗಳು ಮತ್ತ ಗರಿಷ್ಟ ರೂ.0.80 ಲಕ್ಷಗಳಾಗಿರುತ್ತದೆ. ಈ ಕಾಮಗಾರಿಗಳಿಗೆ ಐಟಂವಾರು ಅಲ್ಪಾವಧಿ ಟೆಂಡರನ್ನು "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್" ನಲ್ಲಿನ ಷರತ್ತುಗಳಿಗನುಗುಣವಾಗಿ ಕರೆಯಲಾಗಿದ್ದು, ಇ–ಪ್ರೊಕ್ಯೂರ್‌ಮೆಂಟ್" ಮೂಲಕ ನೋಂದಾಯಿತ ಗುತ್ತಿಗೆದಾರರಿಂದ ಬಿಡ್ಡನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ಗೆ ಸಂಬಂದಿಸಿದ ಮಾಹಿತಿಗಳು ಈ ಕೆಳಕಂಡಂತಿರುತ್ತವೆ. ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಗಳನ್ನು ಕಛೇರಿಯ ವೇಳೆಯಲ್ಲಿ ಈ ದಿನಾಂಕದೊಳಗೆ ಪಡೆಯಬಹುದಾಗಿರುತ್ತದೆ.: 28.03.2025 ಸಂಜೆ 5.30 ಗಂಟೆ. ಭರ್ತಿಮಾಡಿದ ಟೆಂಡರ್ ದಾಖಲೆಗಳು ಮತ್ತು ಬಿಡ್ಡನ್ನು ಇ–ಪ್ರೊಕ್ಯೂರ್ ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸಲು ಕಡೆಯ ದಿ: 29.03.2025 ಸಂಜೆ 5.30 ಗಂಟೆ. ಬಿಡ್ ತೆರೆಯುವ ದಿ: 01.04.2025ರ ಬೆಳಿಗ್ಗೆ 11.00 ಗಂಟೆ ನಂತರ. ಟೆಂಡರ್ ದಾಖಲಾತಿಗಳನ್ನು ವೆಬ್‌ಸೈಟ್ https://kppp.karnataka.gov.in ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ವಿ.ಸೂ: ಸದರಿ ಕಾಮಗಾರಿಯ ಟೆಂಡರ್‌ಅನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು, ಹಾಗೂ ಯಾವುದೇ ಬಿಡ್ಡನ್ನು ತಿರಸ್ಕರಿಸುವ ಹಕ್ಕನ್ನು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು ಇವರಿಗೆ ಕಾಯ್ದಿರಿಸಲಾಗಿದೆ. ಹಾಗೂ ಈ ಪ್ರಕಟಣೆಗೆ ಸಂಬಂಧಿಸಿದಂತೆ, ಯಾವುದೇ ತಿದ್ದುಪಡಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್
DIPR-DD-MYS/1496/KSMCA-1123/2024-25